ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ತುಮಕೂರಿನಲ್ಲಿ ಯೋಧನ ಮಗ 'ದೇಶದ್ರೋಹಿ'



ಸಂಪುಟ 10 ಸಂಚಿಕೆ 36 ಸೆಪ್ಟಂಬರ್ 04, 2016 ಪುಟ 20 ರೂ.10/-

Web : www.janashakthi.co.in e-mail : js_weekly@yahoo.com

ಕಾರ್ಮಿಕ ವರ್ಗದ 12 ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ





ರಾಜಕಾಲುವೆ ಒತ್ತುವರಿ ತೆರವು: ತಾರತಮ್ಯ

ಡಾ.ಕಲಬುರ್ಗಿ ಕೊಲೆಗಾರರನ್ನು ಬಂಧಿಸಿ

'ಗುಹಾಂಕಣ'ದ ಡಬ್ಬಲ್ ಗೇಮ್

ಕಣ್ಣೂರಿನಲ್ಲಿ ಆರೆಸ್ಸೆಸ್ ಬ್ಲಾಸ್ಟ್

AIDWA 9 ಕರ್ನಾಟಕ ರಾಜ್ಯ ಸಮ್ಮೇಳನ

26-28 ಆಗಸ್ಟ್ 2016 ಕೋಲಾರ

ವಿಶೇಷ ಪುರವಣಿ

ಕರ್ನಾಟಕ ಮಹಿಳೆಯರ ಪರಿಸ್ಥಿತಿ ಮಹಿಳೆಯರ ಹೋರಾಟಗಳು

ತ್ರಿಪುರಾದಲ್ಲಿ ವಿಧ್ವಂಸಕತನ:

ವಿಚ್ಛಿದ್ರಕಾರಿ ಹುನ್ನಾರಗಳನ್ನು ವಿಫಲಗೊಳಿಸಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ತ್ರಿಪುರಾದಲ್ಲಿ ಒಂದೆಡೆಯಲ್ಲಿ ಐಪಿಎಫ್‌ಟಿ, ಮತ್ತೊಂದೆಡೆಯಲ್ಲಿ ಟಿಎಂಸಿ ಮತ್ತು ಬಿಜೆಪಿ ಪರಸ್ಪರ ಸಕ್ರಿಯ ಸಹಕಾರದೊಂದಿಗೆ ರಾಜ್ಯದಲ್ಲಿ ಜನಾಂಗೀಯ ಸೌಹಾರ್ದ ಮತ್ತು ಶಾಂತಿಯನ್ನು ಕದಡುವ ಪ್ರಯತ್ನ ಆರಂಭಿಸಿರುವಂತೆ ಕಾಣುತ್ತದೆ.

ಆಗಸ್ಟ್ 23ರಂದು ಐಪಿಎಫ್‌ಟಿ(ಇಂಡಿಜಿನಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರ) ಪ್ರತ್ಯೇಕ ಬುಡಕಟ್ಟು ರಾಜ್ಯ ಬೇಕೆಂಬ ಬೇಡಿಕೆಯ ಮೇಲೆ ರಾಜಧಾನಿ ಅಗರ್ತಲಾದಲ್ಲಿ ರ್‍ಯಾಲಿಗೆ ಕರೆ ನೀಡಿತ್ತು, ಮೆರವಣಿಗೆ ಹೋಗುವಾಗ ಅವರಲ್ಲಿ ಕೆಲವರು ಅಮಾಯಕ ಪಾದಚಾರಿಗಳ ಮೇಲೆ ಹಲ್ಲೆ ನಡೆಸಿದರು. ಇಬ್ಬರು ಮಹಿಳೆಯರು ಮತ್ತು ಒಂದು ಮಗು ಇದರಲ್ಲಿ ಗಾಯಗೊಂಡರು. ವ್ಯಾಪಾರಿಗಳು ಹಲ್ಲೆಯನ್ನು ಪ್ರತಿರೋಧಿಸಿದಾಗ ಐಪಿಎಫ್‌ಟಿ ಬೆಂಬಲಿಗರು ಹಿಂಸಾಚಾರಕ್ಕಿಳಿದರು. ಪರಿಸ್ಥಿತಿ ಜನಾಂಗೀಯ ಘರ್ಷಣೆಯ ರೂಪ ಪಡೆಯುತ್ತಿದ್ದಾಗ ಭದ್ರತಾ ಪಡೆಗಳು ಮಧ್ಯಪ್ರವೇಶಿಸಿದವು.

ಆದರೆ ಈ ಗಲಭೆಯ ಸಂಕೇತ ಪಡೆದವರಂತೆ ಹಲವು ಸ್ಥಳಗಳಲ್ಲಿ ಹಿಂಸಾಚಾರ ಭುಗಿಲೆದ್ದಿತು. ಅಂಗಡಿಗಳು, ವಾಹನಗಳ ಮೇಲೆ ಹಲ್ಲೆ, ಬೆಂಕಿ ಹಚ್ಚುವ ಕೃತ್ಯಗಳು ನಡೆದವು. ಟಿಎಂಸಿ ಮತ್ತು ಬಿಜೆಪಿ ಗೂಂಡಾಗಳು ಇದೇ ಸನ್ನಿವೇಶಕ್ಕೆ ಕಾಯುತ್ತಿದ್ದವರಂತೆ ರ್‍ಯಾಲಿಯಲ್ಲಿ ಭಾಗವಹಿಸಲು ಬಂದವರ ಮೇಲೆ ದಾಳಿ ನಡೆಸಿದರು. ಬಸ್‌ಗಳು, ಖಾಸಗಿ ವಾಹನಗಳಿಗೆ ಬೆಂಕಿ ಹಚ್ಚಿದರು. ಜನಗಳಿಗೆ ಪ್ರತಿದಾಳಿ ಮಾಡಲು ಉದ್ರೇಕಿಸುತಿದ್ದುದು ಕಂಡು ಬಂದಿದೆ.

ಈ ಹಿಂಸಾಚಾರದಲ್ಲಿ ಒಟ್ಟು 23 ಜನ ಗಾಯಗೊಂಡಿದ್ದಾರೆ. ಡಿಜಿಪಿ, ಇತರ ಹಿರಿಯ ಪೋಲೀಸ್ ಅಧಿಕಾರಿಗಳೊಂದಿಗೆ ಧಾವಿಸಿ ಬಂದು ಪರಿಸ್ಥಿತಿಯನ್ನು ಹತೋಟಿಗೆ ತಂದರು. ನಗರದಲ್ಲಿ ಸೆಕ್ಷನ್144 ಹಾಕಲಾಯಿತು.

ಈ ನಡುವೆ ಸುಳ್ಳು ಚಿತ್ರಗಳು, ಸುಳ್ಳು ಸುದ್ದಿಗಳ ಮೂಲಕ ದ್ವೇಷ ಸೃಷ್ಟಿಸಲಾಗುತ್ತಿದೆ. ಇದರಲ್ಲಿ ಮಾಧ್ಯಮದ ಒಂದು ವಿಭಾಗವೂ ನೆರವಾಗುತ್ತಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಜಾನ್ ಧರ್ ಮತ್ತು ಕೇಂದ್ರ ಸಮಿತಿ ಸದಸ್ಯ ಗೌತಮ್ ದೇಬ್ ಒಂದು ತುರ್ತು ಪತ್ರಿಕಾ ಸಮ್ಮೇಳನ ನಡೆಸಿ ಇದು ಒಂದು ಪೂರ್ವಯೋಜಿತ ಪಿತೂರಿಯ ಫಲಿತಾಂಶ ಎಂದು ಖಂಡಿಸಿದ್ದಾರೆ. ಇದರಲ್ಲಿ ಐಪಿಎಫ್‌ಟಿ, ಟಿಎಂಸಿ ಮತ್ತು ಬಿಜೆಪಿ ಶಾಮೀಲಾಗಿದ್ದಾರೆ ಎಂದು ಹೇಳಿದ ಅವರು ಅದೇ ದಿನ ಬುಡಕಟ್ಟು ಸ್ವಾ-ಯತ್ತ ಮಂಡಳಿಯ ಒಂದು ಸೀಟಿಗೆ ಚುನಾವಣೆ ನಡೆಯುತ್ತಿದ್ದು, ಅಲ್ಲಿ ಟಿಎಂಸಿ ಮತ್ತು ಬಿಜೆಪಿ ಎರಡೂ ತಮ್ಮ ಅಭ್ಯರ್ಥಿಗಳನ್ನು ಹಿಂತೆಗೆದುಕೊಂಡು ಐಪಿಎಫ್‌ಟಿ ಅಭ್ಯರ್ಥಿಗೆ ನೆರವಾಗುತ್ತಿದ್ದಾರೆ ಎಂಬ ಸಂಗತಿಯತ್ತ ಗಮನ ಸೆಳೆದರು.

ಬಹಳ ಎಚ್ಚರದಿಂದಿದ್ದು ಕೋಮು ಸೌಹಾರ್ದವನ್ನು ಕೆಡಿಸುವ ಇಂತಹ ಹೀನ ಪ್ರಯತ್ನಗಳನ್ನು ವಿಫಲಗೊಳಿಸಬೇಕಾಗಿದೆ ಎಂದಿರುವ ಸಿಪಿಐ(ಎಂ) ಮುಖಂಡರು ರಾಜ್ಯಾದ್ಯಂತ ಇಂತಹ ಶಕ್ತಿಗಳ ವಿರುದ್ಧ ಆಗಸ್ಟ್ 24 ಮತ್ತು 25ರಂದು ಸಿಪಿಐ(ಎಂ) ರ್‍ಯಾಲಿಗಳನ್ನು ಸಂಘಟಿಸುತ್ತಿದೆ ಎಂದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೂಡ ಈ ಬಗ್ಗೆ ಒಂದು ಪತ್ರಿಕಾ ಹೇಳಿಕೆ ನೀಡಿ ಈ ವಿಚ್ಛಿದ್ರಕಾರಿ ಹುನ್ನಾರಗಳನ್ನು ವಿಫಲಗೊಳಿಸಬೇಕು ಎಂದು ಕರೆ ನೀಡಿದೆ.

ಐಪಿಎಫ್‌ಟಿ ಪ್ರತ್ಯೇಕ ಬುಡಕಟ್ಟು ರಾಜ್ಯದ ಬಗ್ಗೆ ವಿಚ್ಛಿದ್ರಕಾರಿ ಪ್ರಚಾರ ನಡೆಸುತ್ತಿದ್ದರೆ, ಕೆಲವು ಪ್ರತಿಪಕ್ಷಗಳು ಪರಿಸ್ಥಿತಿಯ ದುರ್ಲಾಭ ಪಡೆಯಲು ಪ್ರಯತ್ನಿಸುತ್ತಿವೆ. ಸಿಪಿಐ(ಎಂ) ಮತ್ತು ಎಡರಂಗ ಮಧ್ಯಪ್ರವೇಶಿಸಿ ಜನಗಳನ್ನು ಅಣಿನೆರೆಸುತ್ತಿವೆ, ಶಾಂತಿ ಕಾಪಾಡಲು ಪ್ರಯತ್ನಿಸುತ್ತಿವೆ.

ತ್ರಿಪುರಾದ ಜನತೆ ಬುಡಕಟ್ಟು ಮತ್ತು ಬುಡಕ-ಟ್ಟೇತರ ಜನಗಳ ಐಕ್ಯತೆಯ ಒಂದು ಮಾದರಿ ದಾಖಲೆ ಸ್ಥಾಪಿಸಿದ್ದಾರೆ, ಇದನ್ನು ಕೆಡಿಸಲು, ಶಾಂತಿ ಮತ್ತು ಸೌಹಾರ್ದವನ್ನು ಹಾಳುಗೆಡವಲು ಮತ್ತು ಎಡರಂಗ ಸರಕಾರವನ್ನು ಅಸ್ಥಿರಗೊಳಿಸುವ ದುಷ್ಟ ಹುನ್ನಾರಗಳ ಬಗ್ಗೆ ಎಚ್ಚರದಿಂದಿರಬೇಕು ಎಂದು ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.



ತ್ರಿಪುರಾ ವಿಶ್ವ ದರ್ಜೆಯ ಜಿಮ್ನೇಸಿಯಂ ಹೊಂದಲಿದೆ –ಮುಖ್ಯಮಂತ್ರಿ ಮಾಣಿಕ್ ಸರ್ಕಾರ್

ರಿಯೋ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಹೆಮ್ಮೆ ತಂದು ಕೊಟ್ಟ ಪ್ರದರ್ಶನ ನೀಡಿರುವ ದೀಪಾ ಮತ್ತು ಇತರ ವ್ಯಾಯಾಮ ಪಟುಗಳಿಗೆ ತಾಲೀಮು ನಡೆಸುವ ಸೌಲಭ್ಯ ದೊರಕಿಸಲು ಅಗರ್ತಲಾದಲ್ಲಿ ಒಂದು ವಿಶ್ವ ದರ್ಜೆಯ ವ್ಯಾಯಾಮಶಾಲೆಯನ್ನು ನಿರ್ಮಿಸಲು ಸರಕಾರ ಮುತುವರ್ಜಿ ವಹಿಸುತ್ತದೆ ಎಂದು ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಹೇಳಿದ್ದಾರೆ.

ತ್ರಿಪುರಾದಲ್ಲಿರುವ ಮೂಲರಚನೆ ಚೆನ್ನಾಗಿಲ್ಲ ಎಂದು ನಮಗೆ ಗೊತ್ತು, ಒಳ್ಳೆಯ ಮೂಲರಚನೆಯಿದ್ದಿದ್ದರೆ ದೀಪಾ ಒಲಿಂಪಿಕ್ಸ್‌ನಲ್ಲಿ ಇನ್ನೂ ಉತ್ತಮ ಪ್ರದರ್ಶನ ನೀಡುತ್ತಿದ್ದಳು ಈ ಸೌಲಭ್ಯವನ್ನು ಕಲ್ಪಿಸುವ ಮೂಲಕ ದೀಪಾಗೆ ಸಕಲ ಸೌಲಭ್ಯಗಳು ದೊರೆತು ಮುಂದಿನ ಸ್ಪರ್ಧೆಗಳಿಗೆ ಸಜ್ಜುಗೊಳ್ಳಲು ನೆರವು ನೀಡಲಾಗುವುದು ಎಂದು ಮಾಣಿಕ್ ಸರ್ಕಾರ್ ಪ್ರಕಟಿಸಿದರು.

ಆಗಸ್ಟ್ 21ರಂದು ಮುಕ್ತಾಯಗೊಂಡ ರಿಯೋ ಒಲಿಂಪಿಕ್ಸ್‌ನಲ್ಲಿ ಜಿಮ್ನಾಸ್ಟಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ ದೀಪಾ ಕರ್ಮಕಾರ್ ತ್ರಿಪುರಾದ ತನ್ನ ಹುಟ್ಟೂರಿಗೆ ಮರಳಿದಾಗ ಆಕೆಗೆ ಭವ್ಯ ಸ್ವಾಗತ ನೀಡಿದ ಸಮಾರಂಭದಲ್ಲಿ ಮಾಣಿಕ್ ಸರ್ಕಾರ್ ಮಾತಾಡುತ್ತಿದ್ದರು.

ಅಗರ್ತಲಾದ ಸ್ವಾಮಿ ವಿವೇಕಾನಂದ ಕ್ರೀಡಾಂಗಣದಲ್ಲಿ ಸಾವಿರಾರು ಮಂದಿ ಪಟಾಕಿಗಳನ್ನು ಸಿಡಿಸಿ ದೀಪಾಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಮುಖ್ಯಮಂತ್ರಿಗಳು ಮತ್ತು ಕ್ರೀಡಾ ಮಂತ್ರಿ ಶಾಹಿದ್ ಚೌಧುರಿ ದೀಪಾ ಹಾಗೂ ಅವರ ಕೋಚ್ ನಂದಿಯವರಿಗೆ ಪ್ರಶಸ್ತಿ ಪತ್ರಗಳನ್ನು ನೀಡಿದರು.

ಈಗ ರಾಜ್ಯದ ಕ್ರೀಡಾ ಮತ್ತು ಯುವಜನ ವ್ಯವಹಾರಗಳ ಇಲಾಖೆಯಲ್ಲಿ ಅಧಿಕಾರಿಯಾಗಿರುವ ದೀಪಾಗೆ ಅಸಿಸ್ಟೆಂಟ್ ಡೈರೆಕ್ಟರ್ ಆಗಿ, ಹಾಗೂ

ಪುಟ 17 ನೋಡಿ

ಜಮ್ಮು–ಕಾಶ್ಮೀರ ಪ್ರಶ್ನೆಗೆ ಶಾಶ್ವತ ಪರಿಹಾರ: ಎಡಪಕ್ಷಗಳ ಪಾತ್ರ

ಮಾಜಿ ಮುಖ್ಯಮಂತ್ರಿಯ ಧನ್ಯವಾದ, ಬೆಂಬಲ ಮುಂದುವರೆಸಲು ಆಗ್ರಹ

ಶ್ರೀನಗರದಲ್ಲಿ ಸಭೆ ಸೇರಿದ ರಾಜ್ಯದ ಪ್ರತಿಪಕ್ಷಗಳು ನಿರ್ಧರಿಸಿದಂತೆ ಅಲ್ಲಿನ ಗಂಭೀರ ಪರಿಸ್ಥಿತಿಯನ್ನು ತಿಳಿಗೊಳಿಸಲು ರಾಷ್ಟ್ರಪತಿಗಳು, ಪ್ರಧಾನ ಮಂತ್ರಿ ಮತ್ತು ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರನ್ನು ನವದೆಹಲಿಯಲ್ಲಿ ಭೇಟಿ ಯಾದರು.

ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿಗೆ ಬಂದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲ ಅವರ ನೇತೃತ್ವದ ಈ ಜಮ್ಮು–ಕಾಶ್ಮೀರ ನಿಯೋಗ ಸಂಸತ್ತಿನ ಇತ್ತೀಚೆಗೆ ಮುಕ್ತಾಯಗೊಂಡ ಅಧಿವೇಶನದಲ್ಲಿ ಕಾಶ್ಮೀರ ಕುರಿತು ಎಡಪಕ್ಷಗಳು ತಳೆದ ನಿಲುವಿನ ಬಗ್ಗೆ ಧನ್ಯವಾದ ಅರ್ಪಿಸುತ್ತ ಇದನ್ನು ಮುಂದುವರೆಸಬೇಕು, ಮತ್ತು ಈ ಪ್ರಶ್ನೆಗೆ ಶಾಶ್ವತ ಪರಿಹಾರ ಸಿಗುವಂತೆ ಮಾಡುವಲ್ಲಿ ಪಾತ್ರ ವಹಿಸಬೇಕೆಂದು ಮನವಿ ಮಾಡಿದೆ.

ಕಾಶ್ಮೀರ ವಿಧಾನಸಭೆಯ ಸಿಪಿಐ(ಎಂ) ಸದಸ್ಯರಾದ ಯುಸುಫ್ ತರಿಗಾಮಿಯವರೂ ಇದ್ದ ಈ ನಿಯೋಗ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಹಾಗೂ ಪೊಲಿಟ್‌ಬ್ಯುರೊ ಮುಖಂಡರಾದ ಪ್ರಕಾಶ ಕಾರಟ್ ಹಾಗೂ ಎಂಎ ಬೇಬಿಯವರೊಂದಿಗೆ ಸುಮಾರು ಒಂದು ಗಂಟೆಯ ಕಾಲ ಚರ್ಚೆ ನಡೆಸಿತು..

ಭಾರತ ಸರಕಾರದ ಬಳಿ ಈಗಾಗಲೇ ವಿವಿಧ ಕಾರ್ಯಗುಂಪುಗಳ, ಸಂವಾದಕಾರರ ವರದಿಗಳಿವೆ. ಅಶಿಫಾರಸುಗಳಲ್ಲಿ ನಾಲ್ಕೈದು ಅಂಶಗಳನ್ನು ಆರಿಸಿಕೊಂಡು ಅದರ ಆಧಾರದಲ್ಲಿ ಸರಕಾರ ಒಂದು ರಾಜಕೀಯ ಸಂವಾದವನ್ನು ಆರಮಬಿಸಲು ಏಕೆ ಮುಂದೆ ಬರುತ್ತಿಲ್ಲ, ಈಗಲಾದರೂ ಅದನ್ನು ಮಾಡಬಹುದ ಎಂದು ಯೆಚೂರಿಯುವರು ಹೇಳಿದರು

ಚರ್ಚೆಯ ಕೊನೆಯಲ್ಲಿ ಸಿಪಿಐ(ಎಂ) ಮುಖಂಡರು ಈ ಕೆಳಗಿನ ಕ್ರಮಗಳನ್ನು ಶಿಫಾರಸು ಮಾಡಿದರು

* ಸರಕಾರ ಕಾಶ್ಮೀರಿ ಸಮಾಜದ ಎಲ್ಲ ವಿಭಾಗಗಳೊಂದಿಗೆ ರಾಜಕೀಯ ಸಂವಾದದ ಪ್ರಕ್ರಿಯೆಯನ್ನು ಆರಂಭಿಸಬೇಕು.
* ಕಣಿವೆಯಲ್ಲಿ ಜನಗಳ ನಡುವೆ ವಿಶ್ವಾಸವನ್ನು ನೂಡಿಸಿ ಬೇಳಸಲು ತಕ್ಷಣವೇ ಅಂಕೇತಗಳನ್ನು ನೀಡಬೇಕು.
* ಪೆಲೆಟ್ ಗನ್‌ಗಳನ್ನು ತಕ್ಷಣವೇ ನಿಲ್ಲಿಸಲು ಆದೇಶ ನೀಡಬೇಕು
* ನಾಗರಿಕ ಪ್ರದೇಶಗಳಿಂದ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ(ಆಫ್‌ಸ್ಪ)ಯ ಆದೇಶವನ್ನು ಹಿಂತೆಗೆದುಕೊಳ್ಳಬೇಕು
* ಪಾಕಿಸ್ತಾನದೊಂದಿಗೆ ಮಾತು ಆರಂಭಿಸಿ, ಈ ಮೂಲಕ ಭಾರತದ ಕಾಳಜಿಗಳ ಬಗ್ಗೆ ಚರ್ಚಿಸುವಂತೆ

ಪುಟ 16 ನೋಡಿ



ಮಾತೆಂದರೆ ಇದು


ಕಾನೂನು–ಕಟ್ಟಳಗಳು ಪುರುಷರಿಗೆ
ಕೊಡುವ ವಿಶೇಷ ಸವಲತ್ತುಗಳಿಂದಾಗಿ
ಮಹಿಳೆಯರಿಗೆ ಸ್ವಾತಂತ್ರ್ಯ
ಇಲ್ಲದಿರುವವರೆಗೆ, ಯಾರಿಗೂ ನಿಜವಾದ
ಸ್ವಾತಂತ್ರ್ಯ ಈಗಲೂ ಎಂದೆಂದಿಗೂ
ಇರುವುದಿಲ್ಲ. ಇರಲು ಸಾಧ್ಯವೂ ಇಲ್ಲ.

– ವಿ.ಐ. ಲೆನಿನ್

‘ರಾಜದ್ರೋಹ! ನಿಜವಾಗಿಯೂ?’

ಇದು ಬೆಂಗಳೂರಿನ ಅಮ್ನೆಸ್ಟಿ ಇಂಟರ್‌ನ್ಯಾಶನಲ್‌ನ ಕಾಶ್ಮೀರ ಕುರಿತ ಕಾರ್ಯಕ್ರಮದಲ್ಲಿ ಆಮಂತ್ರಿತರಾಗಿದ್ದ ಪ್ರಖ್ಯಾತ ಪತ್ರಕರ್ತೆ ಸೀಮಾ ಮುಸ್ತಾಫ ಅವರ ಪ್ರಶ್ನೆ. ಅವರ ಅಮ್ನೆಸ್ಟಿ ಇಂಟರ್‌ನ್ಯಾಶನಲ್ ಜೊತೆಗೆ ಅವರ ಮೇಲೂ ಕರ್ನಾಟಕದ ಕಾಂಗ್ರೆಸ್ ಸರಕಾರ ‘ರಾಜದ್ರೋಹ’ದ ಎಫ್‌ಐಆರ್ ಹಾಕಿದೆ. ಈ ಬಗ್ಗೆ ಅವರು ಬರೆದ ಲೇಖನದಲ್ಲಿ ಅವರು ಹೀಗಂದಿದ್ದಾರೆ: ‘ಎಲ್ಲಿದೆ ರಾಜದ್ರೋಹ, ಅಪಾಯಕಾರಿ ರಾಜಕೀಯ ಆಟಗಳನ್ನು ಆಡುವವರ ತಲೆಯಲ್ಲಿ ವಿನಹ. ಇನ್ನು ಮಾಧ್ಯಮಗಳಲ್ಲಿ ಕೆಲವು ವಿಭಾಗಗಳನ್ನು ಭ್ರಾಂತುಗೊಳಿಸಿರುವ ಕಿಡಿಗೇಡಿ ಎಫ್‌ಐಆರ್ ಬಗ್ಗೆ ಹೇಳುವುದಾದರೆ, ಬಹಳ ತಮಾಷೆಯಾಗಿದೆ, ಅದರಲ್ಲೂ ನಾನು ಹಾಡು ಹಾಡಿದೆ ಎಂಬ ಭಾಗ! ಇದು ನನ್ನಲ್ಲಿ ಇಲ್ಲದ ಪ್ರತಿಭೆ ಎಂದು ನನ್ನನ್ನು ಬಲ್ಲವರೆಲ್ಲರಿಗೂ ತಿಳಿದಿರುವ ಸಂಗತಿ. ಇನ್ನು ಸೈನಿಕರ ವಿರುದ್ಧ ಮಾತಾಡಿದೆ ಎಂದಿರುವ ಬಗ್ಗೆ, ಅದು ಒಬ್ಬ ಸೇನಾಧಿಕಾರಿಯಾಗಿದ್ದ ನನ್ನ ತಂದೆಯ ವಿರುದ್ಧ ಮಾತಾಡಿದಂತೆಯೇ. ಇಂತಹ ಕಾಯಿಲೆ ಮನದ ಕಲ್ಪನೆಗೆ ಉತ್ತರಿಸಬೇಕಾಗಿಯೂ ಇಲ್ಲ’

ಕಳೆದ ವಾರ ಮುಖಪುಟದಲ್ಲಿ ಪ್ರಕಟವಾಗಿದ್ದ ಸತೀಶ ಆಚಾರ್ಯ ಅವರ ಈ ರಾಜದ್ರೋಹ ಕುರಿತ ವ್ಯಂಗ್ಯಚಿತ್ರದ ಒಕ್ಕಣಿಕೆಯ ಕನ್ನಡ ಅನುವಾದವನ್ನು ಹಾಕುವಲ್ಲಿ ಪ್ರಮಾದವಾಗಿತ್ತು. ಸರಿಯಾದ ಒಕ್ಕಣಿಕೆ ಹೀಗಿದೆ. ಇದಕ್ಕಾಗಿ ಓದುಗರ ಮತ್ತು ವ್ಯಂಗ್ಯಚಿತ್ರಕಾರರ ಕ್ಷಮೆ ಕೋರುತ್ತೇವೆ.



ಡಾ॥ ಕಲ್ಬುರ್ಗಿಯವರ ಕೊಲೆಗಾರರ ಬಂಧನ ಎಂದು?

ಎಸ್.ವೈ. ಗುರುಶಾಂತ್

ನಮ್ಮ ನಾಡಿನ ಖ್ಯಾತ ಸಂಶೋಧಕ, ಚಿಂತಕ ಡಾ॥ ಎಂ.ಎಂ. ಕಲಬುರ್ಗಿಯವರ ಹತ್ಯೆಯಾಗಿ ವರುಷವೊಂದು ಕಳೆದೇ ಹೋಯಿತು. ಆದರೂ ಹಂತಕರು ಯಾರೆಂದು ಪತ್ತೆ ಆಗಿಯೇ ಇಲ್ಲ. ಕೆಲವು ಸುಳಿವು ಸಿಕ್ಕಿದೆಯೆಂದು ವಿಶೇಷ ತನಿಖಾ ತಂಡ ಹೇಳಿದರೂ ನಿಖರವಾಗಿ ಯಾರೆಂಬುದು ಹೊರ ಜಗತ್ತಿಗೆ ಬರುತ್ತಲೇ ಇಲ್ಲ. ಇದು ಕೇವಲ ಡಾ॥ ಕಲಬುರ್ಗಿಯವರ ಪ್ರಕರಣಕ್ಕೆ ಮಾತ್ರವೇ ಸಂಬಂಧಿಸಿದ್ದಲ್ಲ. ಹಿಂದೆ ಇದೇ ರೀತಿ ಹತ್ಯೆಗೀಡಾದ ಖ್ಯಾತ ವಿಚಾರವಾದಿ, ಚಿಂತಕರಾದ ಡಾ॥ ನರೇಂದ್ರ ದಾಬೋಲ್ಕರ್, ಗೋವಿಂದ ಪನ್ಸಾರೆಯವರ ಪ್ರಕರಣಗಳಲ್ಲೂ ಹಂತಕರಾರು ಎಂಬುದು ಪತ್ತೆ ಆಗಿಲ್ಲ. ಆದರೆ ಒಂದತೂ ನಿಜ!

ಈ ಹಿಂದೆ ಪನ್ಸಾರೆ, ದಾಬೋಲ್ಕರ್‌ರವರ ಕಗ್ಗೊಲೆಗಳಲ್ಲಿ ತೊಡಗಿದ ತಂಡಗಳು ಬೇರೆ, ಯಾವುದೇ ಸಾಮ್ಯತೆ ಇಲ್ಲ ಎಂದು ನಿರಾಕರಿಸಿದ್ದ ಮಹಾರಾಷ್ಟ್ರ ಪೊಲೀಸ್ ಮಹಾನಿರ್ದೇಶಕ ಬಿಷ್ಣೋಯ್‌ಯವರ ಹೇಳಿಕೆ ಪೂರ್ಣ ಸತ್ಯವಲ್ಲ ಎಂಬುದು ನಿಚ್ಚಳವಾಗುತ್ತಿದೆ. ಮಾತ್ರವಲ್ಲ ಈ ಮೂರು ಹಿರಿಯ ಜೀವಗಳನ್ನು ಹತ್ಯೆಗೈದವರು ಒಂದೇ ತಂಡಕ್ಕೆ ಸೇರಿದವರು ಎಂಬುದರತ್ತ ಎಲ್ಲಾ ತನಿಖಾ ತಂಡಗಳ ಅಭಿಪ್ರಾಯ ಸಾಗುತ್ತಿದೆ.

ಆಗಲೇ ದಾಬೋಲ್ಕರ್, ಪನ್ಸಾರೆಯವರ ಹತ್ಯೆಗಳಿಂದ ತತ್ತರಿಸಿದ್ದ ದೇಶ, ಡಾ॥ ಕಲಬುರ್ಗಿಯವರನ್ನು ಕೊಲೆಗೈದ ಸುದ್ದಿ ತಿಳಿಯುತ್ತಿದ್ದಂತೆ ದಿಗ್ಭ್ರಮೆಗೆ ಒಳಗಾಯಿತು. ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ದೇಶದ ಉದ್ದಗಲಕ್ಕೂ ಬ್ರಿಟನ್, ಅಮೇರಿಕಾವನ್ನೂ ಒಳಗೊಂಡು ವಿಶ್ವದಾದ್ಯಂತ ಖಂಡನೆ, ಸಂತಾಪ ವ್ಯಕ್ತಗೊಂಡಿತು. ಇದರಲ್ಲಿ ನೊಬೆಲ್ ಪುರಸ್ಕೃತರೂ ಅನೇಕ ಮೇಧಾವಿಗಳೂ ದನಿಗೂಡಿಸಿದ್ದು ಹಿರಿಯ ಚೇತನದ ಬೌದ್ಧಿಕ ಗಟ್ಟಿತನಕ್ಕ ಸಾಕ್ಷಿಯಾಗಿತ್ತು. ವಿಶ್ವವಿಖ್ಯಾತ ಭಾಷಾ ವಿದ್ವಾಂಸರಾದ ಪದ್ಮಶ್ರೀ ಡಾ॥ ಗಣೇಶ್, ಎನ್. ದೇವಿಯವರು ತಮಗೆ ನೀಡಲ್ಪಟ್ಟ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಹಿಂತಿರುಗಿಸಿ ಪ್ರತಿಭಟನೆಯನ್ನು ದಾಖಲಿಸಿ ಜೀವಂತಿಕೆ ತೋರಿದರು. ಬಳಿಕ ನಾಡಿನ ಹಲವಾರು ಚಿಂತಕರು ಪ್ರಶಸ್ತಿ ವಾಪಸು ಮಾಡಿ ಭಾರತ ಸರ್ಕಾರಕ್ಕೆ, ಹಂತಕರಿಗೆ, ಅಭಿಪ್ರಾಯ ಭೇದ ಸಹಿಸದ ಅಸಹಿಷ್ಣುಗಳಿಗೆ ಚಾಟಿ ಏಟು ಕೊಟ್ಟರು.

ಭಾರತದಲ್ಲಿ ಸಂಘಪರಿವಾರಗಳು ಅಧಿಕಾರ ಹಿಡಿದ ಮೇಲಂತೂ ದಿನದಿಂದ ದಿನಕ್ಕೆ ಅಸಹಿಷ್ಣುತೆ, ಧಾಳೀ ದೌರ್ಜನ್ಯಗಳು ಅಭಿಪ್ರಾಯ ಬೇಧ ವಿದವರನ್ನು ಮುಗಿಸುವ ಫ್ಯಾಸಿಸ್ಟ್ ಮನೋಭಾವವನ್ನು ಖಂಡ ತುಂಡಾವಾಗಿ ಖಂಡಿಸಿದರು. ದೇಶದಾದ್ಯಂತ ಪ್ರಜಾಪ್ರಭುತ್ವ, ವೈಚಾರಿಕ ಸ್ವಾತಂತ್ರ್ಯದ ಉಳಿವಿಗೆ ಜನ ಆಂದೋಲನ ಹರಿಗೊಂಡಿತು. ಇದರಲ್ಲಿ ಎಡಶಕ್ತಿಗಳು, ಸಾಮಾಜಿಕ ಬದಲಾವಣೆಯನ್ನು ಬಯಸುವ ಪ್ರಗತಿಪರರು ಬಲ ಪ್ರತಿಗಾಮಿಗಳ ಸವಾಲು ಸ್ವೀಕರಿಸಿ ನಿಂತರು. ಈಗಲೂ ವಿವಿಧ ಜನ ಸಮುದಾಯಗಳ ಪ್ರತಿರೋಧ ಹಲವು ಆಯಾಮಗಳಲ್ಲಿ ಮುಂದುವರೆದಿದೆ.

ಹೋಗಲಿ! ಹುತಾತ್ಮರಾದ ಈ ಮೂರು ದಿಗ್ಗಜರು ಮಾಡಿದ ಅಪರಾಧವಾದರೂ ಏನು? 2013 ಆಗಸ್ಟ್ 20 ರಂದು 'ಮಹಾರಾಷ್ಟ್ರದಲ್ಲಿ ಹತ್ಯೆಗೀಡಾದ ಡಾ॥ ನರೇಂದ್ರ ದಾಬೋಲ್ಕರ್ ಒಬ್ಬ ಪ್ರಖ್ಯಾತ ವಿಚಾರವಾದಿ ಮಹಾ ಮಾನವತಾವಾದಿ. ಅಜ್ಞಾನ, ಅಂಧಶ್ರದ್ದೆ ಮೌಢ್ಯಗಳ ವಿರುದ್ಧ ಅದರಿಂದ ದೇವಮಾನವರು ಮಾಡುವ ಸುಲಿಗೆಗಳನ್ನು ವಿರೋದಿಸಿ ವೈಚಾರಿಕತೆ, ಮಾನವನ ಘನತೆಗೆ ಕೊನೆಯುಸಿರಿರುವವರೆಗೂ ದುಡಿಯುತಲೇ ಇದ್ದರು. ಮಹಿಳೆಯರ ಸಮಾನತೆಗೆ ತುಡಿದವರು (ಶನಿಸಿಗ್ನಾಪುರ ದೇವಾಲಯ ಪ್ರವೇಶ) ಸಂಗತಿ ಗೋವಿಂದ ಪನ್ಸಾರೆ ಹಿರಿಯ ಮಾರ್ಕ್ಸ್‌ವಾದಿ ಚಿಂತಕ, ಸಾಮಾಜಿಕ ಕಾರ್ಯದರ್ಶಿ, ಕ್ರಿಯಾಶೀಲ ಹೋರಾಟಗಾರ. ಹೆದ್ದಾರಿ ಸುಲಿಗೆಯನ್ನೂ ವಿರೋಧಿಸಿ ಮಾಫಿಯಾಗಳನ್ನು ಎದುರು ಹಾಕಿಕೊಂಡರು.

ಇನ್ನೂ ಡಾ॥ ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿಯವರು 77ನೇ ವಯಸ್ಸಿನಲ್ಲೂ ಯುವ ಉತ್ಸಾಹಿ, ಶ್ರಮಜೀವಿ, ಮಹಾ ಸಂಶೋಧಕ, ಕನ್ನಡ ನಾಡಿನ, ಅದರಲ್ಲೂ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದಲ್ಲಿ ವಿಸ್ಮೃತಿಗೆ ಒಳಗಾದ ಸಾಹಿತ್ಯ, ಸಾಂಸ್ಕೃತಿಕ, ಸಾಮಾಜಿಕ, ಅನನ್ಯತೆಗಳನ್ನು ಚಾರಿತ್ರಿಕ ಬೆಳವಣಿಗೆಗಳನ್ನು, ಕೊಡುಗೆಗಳನ್ನು ಹುಡುಕಿ, ಸೋಸಿ ತೆರೆದಿಟ್ಟರು. 12ನೇ ಶತಮಾನದ ಶರಣರ ಚಳುವಳಿಯನ್ನು ವಿಶಿಷ್ಟ ವಿಶ್ಲೇಷಣೆಯಿಂದ ಅದರ ಅಮೋಘತೆ ಎತ್ತಿ ತೋರಿದರು. ನಾಟಕಗಳು, ಕಾವ್ಯದಂತಹ ಸೃಜನಶೀಲ ಸಾಹಿತ್ಯದಲ್ಲೂ ತಮ್ಮ ಪ್ರತಿಭೆ ಬೆಳಗಿದರು.

ಮುಖ್ಯವಾಗಿ ವೈಧಿಕಶಾಹಿಯ ವಂಚಕ ವಾದಗಳಿಗೆ ಎದುರಾಗಿ ಗಟ್ಟಿ ನೆಲೆಯ ಭೌತಿಕ, ತಾತ್ರಿಕತೆಯನ್ನು ನಿರ್ಮಿಸುತ್ತ, ಪ್ರಬಲ ಸವಾಲು ಎಸೆಯುತ್ತಲೇ ಬೆಳೆದ ನಿಖರ ನಿಷ್ಠುರವಾದಿ ಅವರ ದೃಢ ಅಡಿಪಾಯದ ಪ್ರಚಂಡ ವೈಚಾರಿಕತೆಯನ್ನು ಎದುರಿಸಲಾಗದ ಹೇಡಿಗಳು ಹತ್ಯೆಯ ರಾಜಕಾರಣಕ್ಕೆ ಇಳಿದದ್ದು ಹೇಯಕರ. ನಿಜಕ್ಕೂ ನಾಡಿಗೆ ಆದ ಬಹುದೊಡ್ಡ ನಷ್ಟ. ಇಂತಹ ಹಿರಿಯ ವಿದ್ವಾಂಸರನ್ನು, ಚಿಂತಕರನ್ನು ಕಳೆದು ಕೊಂಡವು. ಪ್ರಶ್ನೆ ಇನ್ನು ಇದು ಎಲ್ಲಿಯವರೆಗೆ? ಹೋಗಲಿ ತನಿಖೆಯ ವಿಳಂಬ ಎಲ್ಲಿಯವರೆಗೆ?

ಈಗ ಲಭ್ಯ ಮಾಹಿತಿಯಂತೆ ಡಾ॥ ಕಲಬುರ್ಗಿಯವರನ್ನು ಹತ್ಯೆ ಮಾಡಿದ ತಂಡ (ಆಗಸ್ಟ್ 30, 2015 ಧಾರವಾಡದ ಮನೆಯಲ್ಲಿ) ಸಾಮ್ಯತೆ ಇರುವುದನ್ನು ಧೃಡಗೊಳಿಸುತ್ತವೆ. ಹಂತಕರು ಹತ್ಯೆಗೆ ಬಳಸಿದ ಪಿಸ್ತೂಲ್ 7.65 ಎಂ.ಎಂ. ಕ್ಯಾಲಿಬರ್‌ನದು ಎಂದು ಸಿ.ಬಿ.ಐ ಹೇಳುತ್ತದೆ. ಅದನ್ನು ಸ್ಕಾಟ್‌ಲ್ಯಾಂಡ್‌ನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಲಾಗಿದೆಯೆಂದು ತಿಳಿಸಿದೆ.(ಜೂನ್ 4, 2016)

ದಾಬೋಲ್ಕರ್‌ರವರ ಈ ಹತ್ಯೆಯ ತನಿಖೆಯಲ್ಲಿ ಕಂಡ ಮಹತ್ವದ ಸುಳಿವು ಎಂದರೆ ಈ ಸಂಚಿನಲ್ಲಿ ಭಾಗಿಯಾಗಿರುವವನೆನ್ನಲಾದ ಒಬ್ಬನನ್ನು ಬಂಧಿಸಿಯಾಗಿದೆ. ಸಾರಂಗ್ ಕೋಲ್ಕರ್ ಎಂಬ 34 ವರುಷದ ಈತ 2009 ರ ಅಕ್ಟೋಬರ್ 16 ರಂದು ಗೋವಾದ ಮಡ್‌ಗಾಂವ್‌ನಲ್ಲಿ ಸಂಭವಿಸಿದ ಬಾಂಬ್ ಸ್ಫೋಟದ ಪ್ರಕರಣದಲ್ಲಿ ಭಾಗಿಯಾದವ ಎಂಬ ಅಂಶ ಬಯಲಾಗಿದೆ. ದೀಪಾವಳಿಯ ಮುನ್ನಾದಿನ ಸ್ಕೂಟರ್‌ನಲ್ಲಿ ಬಾಂಬ್‌ಗಳನ್ನು ಸಾಗಿಸುತ್ತಿರುವಾಗ ಆದ ಸ್ಫೋಟದಲ್ಲಿ ಒಬ್ಬ ಸತ್ತು ಹೋಗಿದ್ದ. ಮುಂದೆ ಆರು ಆರೋಪಿಗಳನನು ಬಂಧಿಸಿ



ನ್ಯಾಯಾಲಯದ ಆದೇಶದಂತೆ ಬಿಡುಗಡೆ ಮಾಡಲಾಗಿದೆ. ಈ ತನಿಖೆ ಮಾಡುತ್ತಿದ್ದ ನ್ಯಾಷನಲ್ ಇನ್ವೆಸ್ಟಿಗೇಟೀವ್ ಏಜನ್ಸಿಯು ಆರೋಪಿ ಕೋಲ್ಕರ್ ದೇಶ ಬಿಡದಂತೆ ಮತ್ತು ಬಂಧಿಸಲು ರೆಡ್ ಕಾರ್ನರ್ ನೋಟೀಸನ್ನೂ ಜಾರಿಗೊಳಿಸಿತ್ತು. ಸಿಬಿಐ ತನಿಖಾ ತಂಡಮತ್ತೊಂದು ಮಹತ್ವದ ಮಾಹಿತಿ ಸಂಗ್ರಹಿಸಿದೆ. ಅದೆಂದರೆ ಈ ಕೋಲ್ಕರ್ ಮಹಾರಾಷ್ಟ್ರ ರಾಜ್ಯದಲ್ಲಿರುವ 'ಸನಾತನ ಸಂಸ್ಥೆ' ಎನ್ನುವುದಕ್ಕೆ ಸೇರಿದವನು. ಈ ಸಂಸ್ಥೆ ಸಾಮಾಜಿಕ ಕಾಳಜಿಯ ತೋರಿಕೆಯಲ್ಲಿ 'ಹಿಂದುತ್ವ' ಉಗ್ರ ಸಿದ್ಧಾಂತವನ್ನು ಪ್ರತಿಪಾದಿಸುತ್ತಿರುವ ಬಗ್ಗೆ ವರದಿಯಾಗಿದೆ.

ಈ 'ಸನಾತನ ಸಂಸ್ಥೆ'ಯ ಕುಖ್ಯಾತವಾದ ಪಾತ್ರ ಬಯಲಾಗುತ್ತಲೇ ಅದನ್ನು ಅಲ್ಲಗೆಳೆಯಲಾಗುತ್ತಿದೆ. ಡಾ.ಕಲಬುರ್ಗಿಯವರ ಹತ್ಯೆಯ ಪ್ರಕರಣದಲ್ಲಿ ಈ ಸಂಸ್ಥೆಯ ಖಚಿತ ಪಾತ್ರವಿರುವುದನ್ನು ಗುರುತಿಸಲಾಗಿದೆ. ಈಗ ಬಂಧಿತನಾಗಿರುವ ಈ ವ್ಯಕ್ತಿ ಭಾಗಿಯಾಗಿರುವ ಹಲವರ ಹೆಸರುಗಳನ್ನು ತಿಳಿಸಿದ್ದಾನೆ ಎಂಬ ವರದಿಗಳಿವೆ.

ಇಲ್ಲಿ ಬರುವ ಪ್ರಶ್ನೆ, ಹಾಗಿದ್ದರೆ ಹೆಸರಿಸಲಾದವರನ್ನು ಬಂಧಿಸಿ ತನಿಖೆ ನಡೆಸಬಹುದಲ್ಲ,ಯಾಕೆ ಮಾಡಲಾಗುತ್ತಿಲ್ಲ? ಅದಕ್ಕೆ ಕೆಲವು ಅಡ್ಡಿಗಳಿವೆ ಎನ್ನುತ್ತದೆ ಕರ್ನಾಟಕದ ತನಿಖಾ ತಂಡ. ಯಾಕೆಂದರೆ ತಲೆ ಮರೆಸಿಕೊಂಡಿರುವ ಆ ಅನುಮಾನಿತ ವ್ಯಕ್ತಿಗಳು ಮಹರಾಷ್ಟ್ರ ಮತ್ತು ಗೋವಾ ರಾಜ್ಯಗಳಿಗೆ ಸೇರಿದವರಾಗಿದ್ದಾರೆ. ಈ ಸರಕಾರಗಳು ನಮ್ಮ ತನಿಖಾ ತಂಡದೊಂದಿಗೆ ಸೂಕ್ತವಾಗಿ ಸಹಕರಿಸುತ್ತಿಲ್ಲ ಎಂಬುದೇ ತನಿಖಾ ಮುನ್ನಡೆಗೆ ಅಡ್ಡಿ ಎಂದು ತಿಳಿಯುತ್ತದೆ. ಅಂದರೆ ಗಮನಿಸಬೇಕಾದ್ದು ಈ ಎರಡೂ ರಾಜ್ಯಗಳಲ್ಲಿ ಬಿಜೆಪಿ ಪಕ್ಷವೇ ಅಧಿಕಾರದಲ್ಲಿರುವುದು! ಸಂಘ ಪರಿವಾರದ ಅಣತಿಯಿಲ್ಲದೇ ಅಧಿಕಾರದಲ್ಲಿರುವ ಸ್ವಯಂಸೇವಕರು ಕೂದಲನ್ನೂ ಅಲುಗಾಡಿಸುವುದಿಲ್ಲ ಎಂಬುದು ಅನುಮಾನದ ವಿಷಯವೇ ಅಲ್ಲ. ವಿಚಿತ್ರವೆಂದರೆ ಡಾ.ಕಲಬುರ್ಗಿಯವರ ಹತ್ಯೆಯನ್ನು ಕರ್ನಾಟಕದ ಬಿಜೆಪಿ-ಸಂಘಪರಿವಾರದ ನಾಯಕರು ಖಂಡಿಸಿದ್ದಕ್ಕೆ ಏನಾದರೂ ಅರ್ಥವಿದೆಯೇ? ಪ್ರಾಮಾಣಿಕತೆ ಇದೆಯೇ? ಬೆಲೆ ಇದೆಯೇ?ಹಾಗೇ ಮತ್ತೊಂದು ಅಂಶ ಕರ್ನಾಟಕ ಸರ್ಕಾರದವು ಹಂತಕರ ಮಾಹಿತಿ ಇದೆ-ಯೆಂದು ಹೇಳಲಾಗುತ್ತಿದೆ. ಹಾಗಾದರೆ ಸಿದ್ಧರಾಮಯ್ಯನವರ ಕಾಂಗ್ರೆಸ್ ಸರ್ಕಾರವಾದರೂ ಯಾಕೆ ಬಹಿರಂಗ ಪಡಿಸಲಿಲ್ಲ? ಹತ್ಯೆ ರಾಜಕಾರಣ ಪ್ರತಿಪಾದಿಸುವ ಈ ಶಕ್ತಿಗಳು ರಾಜ್ಯದಲ್ಲಿಯೂ ಸಕ್ರಿಯವಾಗಿದ್ದು ಅವನ್ನು ಮಟ್ಟ ಹಾಕಲು ಯಾಕೆ ಮುಂದಾಗುತ್ತಿಲ್ಲ. ಹೆದರಿಕೆಯೇ ಅಥವಾ ಅಥವಾ ಕೋಮುವಾದಿ ಶಕ್ತಿಗಳ ಅರ್ಭಟಕ್ಕೆ ರಾಜೀ ಮಾಡಿಕೊಳ್ಳುವ ಸಂದರ್ಭ ಸಾಧಕ ರಾಜಕಾರಣವೇ? ಈ ಪ್ರಶ್ನೆ ಮತ್ತೇ ಮತ್ತೇ ಎದ್ದು ಬರುತ್ತಿದೆ. ಕೊಡಗಿನಲ್ಲಿ ಟಿಪ್ಪು ಜಯಂತಿ, ನಂತರ ವಿದ್ಯಾಮಾನಗಳು, ಕರಾವಳಿಯಲ್ಲಿ, ಮತೀಯವಾದೀ ಅಟ್ಟಹಾಸಗಳು, ಗೋರಕ್ಷಕರ ಹಾರಾಟ, ಅದಕ್ಕೆ ಅನೂಕೂಲಕರವಾದ ಪೊಲೀಸ್ ವರ್ತನೆಗಳು ಇತ್ಯಾದಿ. ಅಲ್ಲದೆ ಕಲಬುರ್ಗಿಯವರ ಸ್ಮರಣೆ- ಶ್ರದ್ಧಾಂಜಲಿ ಕೂಪದಲ್ಲಿ ಮೌಢ್ಯತೆ, ಅಂಧಶ್ರದ್ಧೆ ವಿರೋಧಿಸುವ ಕಾಯ್ಕೆಯನ್ನಾದರೂ ತಂದರೇ? ಇಲ್ಲ, ಅಲ್ಲೂ ಮೀನಾ ಮೇಷ, ಇಲ್ಲದ ಮನಸ್ಸುಗಳು? ಎಳೆದಾಟ, ಆತಂಕ ತಡೆಗಳು!

ಹೀಗಿರುವಾಗ ಕರ್ನಾಟಕದಲ್ಲಿ ಡಾ॥ ಕಲಬುರ್ಗಿಯವರ ಹತ್ಯೆಯ ನಂತರ ಬಲ ಪ್ರತಿಗಾಮಿಗಳ ಅಟ್ಟಹಾಸ ಕುಸಿದಿಲ್ಲ. ಹಿಂದೆ ಗಾಂಧಿ ಹತ್ಯೆಯ ನಂತರ ನಮ್ಮ ದೇಶದ ಜನ ಗೋಡ್ಸೆ ಸಂತತಿಯನ್ನು ಮೂಲೆಗೆ ತಳ್ಳಿತ್ತು ಆದರೆ ಇಂದು? ಆ ಶಕ್ತಿಗಳು ಪುನಃ ಹೊಸ ಹೊಸ ಸೋಗಿನಲ್ಲಿ ಕಾರ್ಪೋರೇಟ್ ಹಣದಲ್ಲಿ ಜನರನ್ನು ಸೆಳೆಯುತ್ತಿವೆ, ಭಾದಿಸುತ್ತಿವೆ. ಕಲ್ಬುರ್ಗಿಯವರ ಹತ್ಯೆಯ ತನಿಖೆಯಲ್ಲಿ ವಿಳಂಬವು ಕೂಡ ಆ ಪ್ರತಿಗಾಮಿ ಶಕ್ತಿಗಳ ಆಟಕ್ಕೆ ಇನಷ್ಟು ಇಂಬು ನೀಡುತ್ತಿವೆ.

ಹೀಗಾಗಿ ನಾಡಿನ ಜಾಗೃತ ಜನತೆ, ಬಹುಮುಖಿ ಹೋರಾಟ ನಡೆಸುವುದು, ಪರ್ಯಾಯ ಚಿಂತನೆ, ಆಂದೋಲನ ಜನಪರ ರಾಜಕಾರಣ ರೂಪಿಸುವುದು ಅನಿವಾರ್ಯ ಅಗತ್ಯ. ಈ ದೆಸೆಯಲ್ಲಿ ಇದೇ ಆಗಸ್ಟ್ 30 ರಂದು ಧಾರವಾಡದಲ್ಲಿ ಡಾ. ಕಲ್ಬುರ್ಗಿಯವರ ನೆನಪಿನಲ್ಲಿ ಸಮಾವೇಶಗೊಳ್ಳಲಿರುವ ದೇಶದ ಪ್ರಖ್ಯಾತ ಚಿಂತಕರು ಹೋರಾಟಗಾರರ ಪ್ರತಿರೋದದ ಪ್ರತಿಕ್ರಿಯೆಯು ಅತ್ಯಂತ ಐತಿಹಾಸಿಕ ಮಹತ್ವದು. ಅದನ್ನು ಯಶಸ್ವಿಗೊಳಿಸುವುದು ಸಮಾಜ ಬದಲಾವಣೆ ಬಯಸುವ ಎಚ್ಚೆತ್ತ ಎಲ್ಲರ ಕರ್ತವ್ಯವೂ ಕೂಡ. ■

ಫೇಸ್ ಬುಕ್‌ನಿಂದ

ಒಲಿಂಪಿಕ್ಸ್ ನಲ್ಲಿ ಭಾರತ ಬೆಳಗುವುದು ಹೇಗೆ? "ಹೆಂಗಿದ್ದ ಹೆಂಗಾದ ಗೊತ್ತಾ ನಮ್ ಚಿನ್ನಾರಿ ಮುತ್ತ " – ಹರಿಣ ಶಿಕಾರಿ ಎಂಬ ಜಿಂಕೆಗಳನ್ನು ಕೂಡಾ ಮೀರಿಸುವ ವೇಗವುಳ್ಳ ಆದಿವಾಸಿಗಳ ಬಗ್ಗೆ ಕೇಳಿದ್ದೀರಾ? ನದೀ ತೀರಗಳಲ್ಲಿ, ಕೆರೆಗಳ ನಾಡಿನಲ್ಲಿ ಹುಟ್ಟುತ್ತಲೇ ಈಜು ಆರಂಭಿಸುವ ಅದ್ಭುತ ಪ್ರತಿಭೆಗಳಿಲ್ಲವೇ? ದೊಂಬರು, ಬೇಟೆಗಾರ ಏಕಲವ್ಯರು – ಇಂತಹ ಹತ್ತು ಹಲವು ಸಮುದಾಯಗಳು ದೇಶದ ಒಡಲಲ್ಲಿ ಎಲ್ಲೆಲ್ಲೋ ಅಡಗಿವೆ. ಇಂತಹ ದೇಶದೆಲ್ಲ ಪ್ರತಿಭೆಗಳನ್ನು, ಮುಖ್ಯವಾಗಿ – ತಲೆತಲಾಂತರದಿಂದ ದುಡಿದು ತಮ್ಮ ದೈಹಿಕ ಸಾಮರ್ಥ್ಯವನ್ನು ಅಭಿವ್ಯಕ್ತಿಸಿರುವ ಗ್ರಾಮೀಣ, ಆದಿವಾಸಿ,ದಲಿತ,ಶೂದ್ರ, ಅಲ್ಪಸಂಖ್ಯಾತ ಸಮುದಾಯಗಳನ್ನು ಕ್ರೀಡೆಗೆ ಸೆಳೆಯುವುದು, ಅವಕಾಶ ನೀಡುವುದು, ಆಧುನಿಕ ವೈಜ್ಞಾನಿಕ ತರಬೇತಿ ನೀಡುವುದು. ನಗರಗಳ ಮೇಲ್ವರ್ಗಗಳ ಸಂಕುಚಿತ ವ್ಯಾಪ್ತಿಯಿಂದ ಕ್ರೀಡೆಯನ್ನು ಬಿಡಿಸುವುದು. ಇದೇ ದಾರಿ. ಇದೊಂದೇ ದಾರಿ.

ದೇಶದ 120 ಕೋಟಿ ಜನ ಸಾಗರಕ್ಕೆ ಬಲೆ ಬೀಸಿ ಹಿಡಿಯಬೇಕು. ಅನುವಂಶಿಕ ದೈಹಿಕ ಸಾಮರ್ಥ್ಯ, ತಲೆತಲಾಂತರದಿಂದ ನಿತ್ಯ ಜೀವನದ ರೂಢಿಯಾಗಿರುವ ವಿಶೇಷತೆಗಳು, ಜಾನಪದ ಪದ್ಧತಿ, ಕ್ರೀಡೆಗಳು ಇವುಗಳ ಸಮೀಕ್ಷೆ ಮಾಡಬೇಕು.

ವಿಶೇಷ ಪ್ರತಿಭೆಗಳನ್ನು ಗುರುತಿಸಿ 5–10 ವರ್ಷ ವಯಸ್ಸಿನ ಒಳಗೇ ಅವರನ್ನು ಆರಿಸಿ ತರಬೇತಿ ಆರಂಭಿಸಬೇಕು. ತಾಲ್ಲೂಕಿಗೊಂದು ಕ್ರೀಡಾ ಪ್ರಾಥಮಿಕ ಶಾಲೆ – ಓದು,ಬರಹದ ಜೊತೆಗೇ ಕ್ರೀಡೆಯಲ್ಲಿ ಪ್ರಾಥಮಿಕ ತರಬೇತಿ ನೀಡುವ ಶಾಲೆ, ಆಗಿನಿಂದಲೇ ಆ ವಿದ್ಯಾರ್ಥಿಗಳ ಶಿಕ್ಷಣ, ತರಬೇತಿಯ ಪೂರ್ಣ ವೆಚ್ಚ ಸರ್ಕಾರವೇ ಭರಿಸುವುದರ ಜೊತೆಗೆ ಆಹಾರ ಭತ್ಯೆ, ವಿದ್ಯಾರ್ಥಿ ವೇತನ ನೀಡಲಾರಂಭಿಸಬೇಕು. ನಂತರ ವಸತಿ ಕಾಲೇಜುಗಳು ಮತ್ತು ಕ್ರೀಡಾ ಪ್ರಾವೀಣ್ಯತೆಗನುಗುಣವಾಗಿ ಸ್ನಾತಕ,ಸ್ನಾತಕೋತ್ತರ ಪದವಿಗಳು ಮತ್ತು ಜಿಲ್ಲಾ, ರಾಜ್ಯ,ರಾಷ್ಟ್ರ ಹೀಗೆ ವಿವಿಧ ಹಂತದ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅದಕ್ಕೆ ತಕ್ಕಂತೆ ಖಾಯಂ ಕ್ರೀಡಾ ಉದ್ಯೋಗಗಳು. ಬೇರಾವುದೇ ಪದವಿ ಪಡೆದವರಿಗೆ ಸಿಗಬಹುದಾದ ಆದಾಯವನ್ನು ಖಾತರಿಗೊಳಿಸುವುದು. ಹೀಗೆ ಅವಶ್ಯ ಕ್ರಮಗಳನ್ನು ಕೈಗೊಳ್ಳಲು ಈಗ ಆರಂಭಿಸಿದರೆ ಎರಡು ಮೂರು ಒಲಿಂಪಿಕ್ಸ್ ನಂತರ ಫಲ ಸಿಗಲಾರಂಭಿಸುತ್ತದೆ.

– ಜಿ. ಎನ್. ನಾಗರಾಜ್

ಅವೈಜ್ಞಾನಿಕ ಪಡೀಲು-ಬಜಾಲು ರೈಲ್ವೇ ಅಂಡರ್‌ಪಾಸ್ ವಿರುದ್ಧ ಡಿವೈಎಫ್ಐ ಪ್ರತಿಭಟನೆ

ಪಡೀಲು ಬಜಾಲು ರಸ್ತೆಯಲ್ಲಿ ರೈಲ್ವೇ ಅಂಡರ್‌ಪಾಸ್ ಆಗಬೇಕೆಂದು ಕಳೆದ ಸುಮಾರು ಹತ್ತು ವರ್ಷಗಳಿಂದಲೂ ಡಿವೈಎಫ್ಐ ಮತ್ತು ಆ ಭಾಗದ ನಾಗರೀಕ ಸಮಿತಿ ಹೋರಾಟಗಳನ್ನು ನಡೆಸಿದೆ. ಪರಿಣಾಮವಾಗಿ ಮಂಗಳೂರು ಮಹಾನಗರ ಪಾಲಿಕೆ ಮತ್ತು ದಕ್ಷಿಣ ರೈಲ್ವೇ ಒಂದು ಒಪ್ಪಂದ ಮಾಡಿಕೊಂಡು ಕಳೆದ ಒಂದು ವರ್ಷದ ಹಿಂದೆ ರೈಲ್ವೇ ಇಲಾಖೆ ಅಂಡರ್‌ಪಾಸ್ ಕಾಮಗಾರಿ ಪೂರ್ಣಗೊಂಡು ವಾಹನ ಸಂಚಾರ ಆರಂಭವಾಗಿದೆ. ಆದರೂ ಈ ವರ್ಷ ಮಳೆಗಾಲ ಆರಂಭವಾದಾಗಿನಿಂದ ಅಂಡರ್‌ಪಾಸ್‌ನಲ್ಲಿ ನೀರು ನಿಲುಗಡೆಯಾಗಿ ವಾಹನ ಸಂಚಾರ ಸ್ಥಗಿತಗೊಂಡಿದೆ. ಸಂಪರ್ಕ ರಸ್ತೆಗಳನ್ನು ನಿರ್ಮಿಸುವಲ್ಲಿ ಪಾಲಿಕೆ ಇಂಜಿನಿಯರ್‌ಗಳು ಅವೈಜ್ಞಾನಿಕವಾಗಿ ಯೋಜನೆ ಸಿದ್ಧಪಡಿಸಿರುವುದೇ ಈ ಅವ್ಯವಸ್ಥೆಗೆ ಕಾರಣವಾಗಿದೆ.

ಅವ್ಯವಸ್ಥಿತ ಹಾಗೂ ಕಳಪೆ ಕಾಮಗಾರಿಗೆ ಕಾರಣವಾದ ಇಂಜಿನಿಯರ್‌ಗಳ ಮೇಲೆ ಕ್ರಮಕೈಗೊಳ್ಳುವಂತೆ ಹಾಗೂ ಶೀಘ್ರವೇ ರಸ್ತೆ ಕಾಮಗಾರಿ ನಡೆಸುವಂತೆ ಆಗ್ರಹಿಸಿ ಡಿವೈಎಫ್ಐ ನೇತೃತ್ವದಲ್ಲಿ ಬಜಾಲು ಪ್ರದೇಶದ ನಾಗರಿಕರು ಆಗಸ್ಟ್ 22 ರಂದು ಪಡೀಲು ರೈಲ್ವೇ ಸೇತುವೆಯಿಂದ ನಗರ ಪಾಲಿಕೆ ಕಚೇರಿವರೆಗೆ ನಗರ ಪಾಲಿಕೆ ಚಲೋ ಕಾರ್ಯಕ್ರಮ ನಡೆಸಿದರು. ಈ ಮೆರವಣಿಗೆಯಲ್ಲಿ ಸಾಕಷ್ಟು ಜನ ಭಾಗವಹಿಸಿದ್ದರು.

ನಗರ ಪಾಲಿಕೆ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ , ಬಜಾಲು ಪಡಿಲ್ ನಾಗರಿಕ ಸಮಿತಿ ಹಾಗೂ ಬ್ಯಾಂಕ್ ಎಂಪ್ಲೋಯಿಸ್ ಫೆಡರೇಶನ್ ಆಫ್ ಇಂಡಿಯಾದ ಮುಖಂಡ ಬಿ.ಎಂ.ಮಾದವ, ಡಿವೈಎಫ್ಐ ಜಿಲ್ಲಾ ಸಮಿತಿ ಕಾರ್‍ಯದರ್ಶಿ ಸಂತೋಷ್ ಬಜಾಲ್ ಮಾತನಾಡಿದರು. ಬಜಾಲ್ ನಾಗರಿಕ ಸಮಿತಿ ಮುಖಂಡರೂ, ಡಿವೈಎಫ್ಐ ಮುಖಂಡರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಬಳಿಕ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

– ವಾಸುದೇವ ಉಚ್ಚಿಲ

ಕಂಡ್ಲೂರು : ಹಕ್ಕುಪತ್ರಕ್ಕಾಗಿ ನಿವೇಶನ ರಹಿತರಿಂದ ಮುತ್ತಿಗೆ



ಕಾವ್ರಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಂಡ್ಲೂರು ಹಳ್ನಾಡು ಗ್ರಾಮಗಳ ಮನೆ ನಿವೇಶನ ರಹಿತರಿಂದ – ನಿವೇಶನ ಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ಗ್ರಾಮ ಪಂಚಾಯತ್ ಕಛೇರಿ ಎದುರು ಆಗಸ್ಟ್ 23ರಂದು ಮುತ್ತಿಗೆ ಹಾಕಿ ಬೃಹತ್ ಪ್ರತಿಭಟನೆ ಜರಗಿತು. ಇದನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ನಡೆಸಲಾಯಿತು.

ಸಿಐಟಿಯು ತಾಲೂಕು ಅಧ್ಯಕ್ಷ ಹೆಚ್.ನರಸಿಂಹ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ನಿವೇಶನ ರಹಿತರ ಪ್ರತಿಭಟನಾಕಾರರನ್ನು ಉದ್ದೇಶಿಸಿ, ಮಾತನಾಡಿದರು.

ಮನೆ ನಿವೇಶನ ರಹಿತರಿಗೆ ಕೂಡಲೇ ಹಕ್ಕು ಪತ್ರ ವಿತರಣೆ ಮಾಡಬೇಕು ಎಂದು ಒತ್ತಾಯಿಸಿ ಸಾಮೂಹಿಕ ಮನವಿ ಪತ್ರವನ್ನು ಗ್ರಾಮ ಪಂಚಾಯತ್ ಉಪಾಧ್ಯಕ್ಷ ಸಂತೋಷ ಕುಮಾರ್ ಶೆಟ್ಟಿ, ಸದಸ್ಯ ಪ್ರಕಾಶ ಚಂದ್ರ ಶೆಟ್ಟಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗೋಪಾಲ ದೇವಾಡಿಗ ಇವರಿಗೆ ಹಸ್ತಾಂತರಿಸಲಾಯಿತು.

ಸೆಪ್ಟಂಬರ್ 28 ರಂದು ಜರಗುವ ಕುಂದಾಪುರ ತಾಲೂಕು ಕಛೇರಿ ಮುತ್ತಿಗೆ ಹೋರಾಟವನ್ನು ಎಲ್ಲಾ ನಿವೇಶನ ರಹಿತ ಅರ್ಜಿದಾರರು ಬೆಂಬಲಿಸಬೇಕು ಎಂದು ಕರೆಕೊಡಲಾಯಿತು. ಜಿಲ್ಲಾ ಪಂಚಾಯತ್ ಸದಸ್ಯೆ ಜ್ಯೋತಿ ಎಂ. ಸಂಘದ ಮುಖಂಡರಾದ ನಾಗರತ್ನ ನಾಡ, ಶೀಲಾವತಿ ಪಡುಕೋಣೆ, ಉಪಸ್ಥಿತರಿದ್ದರು. ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಿಸಿ ಕೊನೆಯಲ್ಲಿ ವಂದಿಸಿದರು.

– ವೆಂಕಟೇಶ್ ಕೋಣಿ

ಇತಿಹಾಸ ಮತ್ತು ವಾಸ್ತವ-ಸಂವಾದದಲ್ಲಿ ಡಾ.ಚಿನ್ನಸ್ವಾಮಿ ಸೋಸಲೆ:

ಭಾರತ ದೇಶದ ಇತಿಹಾಸವನ್ನು ಅಧ್ಯಯನ ಮಾಡುವಾಗ ಅಲ್ಲಿ ವಿವಿಧ ವರ್ಗಗಳಲ್ಲಿ ಚಲನಶೀಲತೆ ಕಂಡು ಬರುತ್ತದೆ. ಆದರೆ ಜಾತಿ ಸಮಾಜಗಳಲ್ಲಿ ಅವುಗಳಲ್ಲಿ ಒಂದು ಸ್ಥಗಿತತೆ ಇದೆ ಎಂಬುದಾಗಿ ಹಂಪಿ ಕನ್ನಡ ವಿ.ವಿ. ಇತಿಹಾಸಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ಚಿನ್ನಸ್ವಾಮಿ ಸೋಸಲೆ ಅವರು ಆಗಸ್ಟ್ 22ರಂದು ಸಮುದಾಯ ಮಂಗಳೂರು ಏರ್ಪಡಿಸಿದ ಸಂವಾದದಲ್ಲಿ ಹೇಳಿದರು.

ಜಾತಿಯನ್ನು ಸ್ಥಾಯಿಯಾಗಿಸುವ ಚಿಂತನೆಗಳಲ್ಲಿ ಇತಿಹಾಸವನ್ನು ಕೋಮುವಾದಿ ನೆಲೆಗಳಲ್ಲಿ ನಿರೂಪಿಸುವ ಕ್ರಮವು ವಿದ್ಯಾರ್ಥಿಗಳನ್ನು ಎಳೆಯ ವಯಸ್ಸಿನಲ್ಲೇ ಕೆಲವು ಜಾತಿ ಸಮುದಾಯಗಳ ಬಗೆಗೆ ಪೂರ್ವಾಗ್ರಹ ಮೂಡಿಸಲು ಕಾರಣವಾಗಿವೆ ಎಂದರು. ಶಾಲಾ ಪಠ್ಯಗಳಲ್ಲಿ ಆರ್ಯರ ಆಗಮನ, ಮುಸ್ಲಿಮರ ದಾಳಿ ಮತ್ತು ಬ್ರಿಟಿಷರ ಪ್ರವೇಶ ಎಂದು ನಿರೂಪಿಸುವ ಕ್ರಮವು ಇದಕ್ಕೊಂದು ಉದಾಹರಣೆ ಎಂದು ಹೇಳಿದ ಅವರು ಇದನ್ನು ಮತ್ತಷ್ಟು ಸಾಕ್ಷಾತ್ಕರಿಸುವ ಹಲವು ಉದಾಹರಣೆ ನೀಡಿದರು. ಈ ನೆಲೆಯಲ್ಲಿ ಇತಿಹಾಸವನ್ನು ಬರೆಯುವ ಕ್ರಮವನ್ನು ಮರು ನಿರೂಪಿಸಬೇಕಾಗಿದೆ ಎಂದು ಅವರು ಹೇಳಿದರು.

ಮಂಗಳೂರು ಸಮುದಾಯದ ಅಧ್ಯಕ್ಷರಾದ ಪ್ರೊ.ರಾಜೇಂದ್ರ ಉಡುಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಾ.ನಾಗಪ್ಪ ಗೌಡ, ಡಾ.ವಸುದೇವ ಬೆಳ್ಳೆ, ಜ್ಯೋತಿ ಚೆಳ್ಯಾರು, ಕೃಷ್ಣಮೂರ್ತಿ ಚಿತ್ರಾಪುರ, ಡಾ.ಸರಸ್ವತಿ, ಡಾ.ಸಂಪೂರ್ಣಾನಂದ ಬಳ್ಕೂರು ಮೊದಲಾದ ಕಾಲೇಜು ಅಧ್ಯಾಪಕರು, ಸಾಮಾಜಿಕ ಚಿಂತಕರಾದ ಐ.ವಿ.ಪ್ರಸನ್ನ, ಪಿ.ಹರೀಶ್ಚಂದ್ರ ರಾವ್, ವಾಸುದೇವ ಉಚ್ಚಿಲ, ತುಕರಾಮ್ ಕೊಂಚಾಡಿ, ಕೃಷ್ಣಪ್ಪ ಕೊಂಚಾಡಿ, ರೈತ ಮುಖಂಡ ಯಾದವ ಶೆಟ್ಟಿ, ಭಾರತಿ ಬೋಳಾರ್, ಡಿವೈಎಫ್ಐ, ಎಸ್ಎಫ್ಐ ಕಾರ್ಯಕರ್ತರು ಈ ಸಂವಾದದಲ್ಲಿ ಭಾಗವಹಿಸಿದ್ದರು.

– ವಾಸುದೇವ ಉಚ್ಚಿಲ

ಡಿ.ವೈ.ಎಫ್.ಐ.ನಿಂದ ಶ್ರೀ ನಾರಾಯಣ ಗುರು ಜಯಂತಿ ಆಚರಣೆ

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಇಎಂಎಸ್ ಭವನದಲ್ಲಿ ಶ್ರೀ ನಾರಾಯಣಗುರು ಅವರ ಜನ್ಮದಿನಾಚರಣೆ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ಬಿ.ಎಂ.ಭಟ್ ಉಪಸ್ಥಿತರಿದ್ದು ನಾರಾಯಣಗುರು ಅವರಿಗೆ ಪುಷ್ಪ ನಮನ ಸಲ್ಲಿಸಿ ಮಾತಾಡುತ್ತಾ, ಜಾತಿ ಬಿಡಿ, ಮತ ಬಿಡಿ ಮಾನವೀಯತೆಗೆ ಬೆಲೆ ಕೊಡಿ ಎಂಬ ನಾರಾಯಣ ಗುರು ಸಂದೇಶದ ವಿವರಣೆ ನೀಡಿದರು. ಇಂದು ನಮ್ಮ ದೇಶದಲ್ಲಿ ನಡೆಯುತ್ತಿರುವ ಎಲ್ಲಾ ಅವಾಂತರಗಳಿಗೆ ನಾರಾಯಣ ಗುರು ಸಂದೇಶವೇ ದಿವ್ಯ ಔಷದ ಎಂದವರು ಹೇಳಿದರು.

ಡಿ.ವೈ.ಎಫ್.ಐ. ಮುಖಂಡ ಲಾರೆನ್ಸ್ ಕೈಕಂಬ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯುನ ನೆಬಿಸಾ, ಲೋಕೇಶ್ ಕುದ್ಯಾಡಿ, ಜಯರಾಮ ಮಯ್ಯ, ಪುಷ್ಪಾ, ಡಿ.ವೈ.ಎಫ್.ಐ.ಯ ರಾಮಚಂದ್ರ, ಪ್ರಶಾಂತ, ವಿನಾಸ, ಕಿರಣಪ್ರಭಾ ಮೊದಲಾದವರು ಉಪಸ್ಥಿತರಿದ್ದು ಪುಷ್ಪಾರ್ಚನೆ ಮೂಲಕ ನಾರಾಯಣ ಗುರು ಅವರಿಗೆ ಗೌರವ ಸಲ್ಲಿಸಿದರು.

– ಬಿ.ಎಂ.ಭಟ್

ಬಡ ರೈತರ ರಬ್ಬರ್ ಗಿಡ ಧ್ವಂಸ ಪ್ರಕರಣ: ಆ.30ರಂದು ಸಿಪಿಐ(ಎಂ) ನಿಂದ ಪ್ರತಿಭಟನೆ

ಕನ್ಯಾಡಿ ಗ್ರಾಮದಲ್ಲಿ ಬಡ ರೈತನೋರ್ವನ 1 ಎಕ್ರೆ ಜಮೀನಿಗೆ ಕಂದಾಯ ಇಲಾಖೆ ಅಕ್ರಮ ಪ್ರವೇಶ ಮಾಡಿ ರಬ್ಬರ್ ಗಿಡಗಳನ್ನು ಕಡಿಸಿ ದೌರ್ಜನ್ಯವೆಸಗಿರುವುದನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೈಕಂಬ ಶಾಖೆ ಖಂಡಿಸುತ್ತದೆ, ಎಂದು ಸಿಪಿಐ(ಎಂ) ಕೈಕಂಬ ಶಾಖಾ ಕಾರ್ಯದರ್ಶಿಯೂ, ಪಕ್ಷದ ತಾಲೂಕು ಸಮಿತಿ ಸದಸ್ಯರೂ ಆದ ನಾರಾಯಣ ಕೈಕಂಬ, ಪಕ್ಷದ ಮುಖಂಡರುಗಳಾದ ಲಾರೆನ್ಸ್, ಗೋವಿಂದ ಗೌಡ, ಪೆರ್ನು ಗೌಡ, ಚಂದ್ರಹಾಸ ಶೆಟ್ಟಿ, ಚಂದ್ರಶೇಖರ ಆಚಾರ್ಯ ಮೊದಲಾದವರು ತಿಳಿಸಿದ್ದಾರೆ.

ಕನ್ಯಾಡಿ ಗ್ರಾಮದ ಬಡ ರೈತ ಕುಂಞ ಗೌಡರು ಸುಮಾರು 50 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ಜಮೀನಿಗೆ ಕಾನೂನು ಬಾಹಿರವಾಗಿ ಅಕ್ರಮ ಪ್ರವೇಶ ಮಾಡಿದ ಕಂದಾಯ ಇಲಾಖೆಯ ಕಾನೂನು ಬಾಹಿರ ಕೆಲಸದಿಂದ ಗೌಡರ ಸುಮಾರು 100 ರಬ್ಬರ್ ಗಿಡಗಳು ನಾಶ ಆಗಿವೆ. ಹಾಲು ತೆಗೆಯಲು ಸಿದ್ಧವಾಗಿದ್ದ ಗಿಡಗಳ ನಾಶದಿಂದ ಕುಟುಂಬ ಕಂಗೆಟ್ಟಿದೆ. ಕೇವಲ ಎರಡುವರೆ ಎಕ್ರೆ ಸ್ವಂತ ಭೂಮಿ ಹೊಂದಿರುವ ಇವರು ಅದರ ಪಕ್ಕದಲ್ಲಿರುವ ಒಂದು ಎಕ್ರೆ ಜಮೀನಿನಲ್ಲೂ ಕೃಷಿ ಮಾಡಿದ್ದರು. ಇದರ ಮಂಜೂರಾತಿಗೆ ಅಕ್ರಮ ಸಕ್ರಮ ಕಾನೂನಿನಡಿಯಲ್ಲಿ ಅರ್ಜಿ ಕೂಡಾ ಸಲ್ಲಿಸಿದ್ದರು.

ಆದರೆ ಕಳೆದ 20 ವರ್ಷಗಳಿಂದ ಈ ಅರ್ಜಿಯ ಇತ್ಯರ್ಥವನ್ನೂ ಮಾಡದೆ, ಬೆಳ್ತಂಗಡಿ ನ್ಯಾಯಾಲಯದ ಇಂಜಂಕ್ಷನ್ ಆದೇಶಕ್ಕೂ ಗೌರವ ನೀಡದೆ ಈ ರೀತಿ ಕಾನೂನು ಬಾಹಿರ ಕೆಲಸ ಮಾಡಿದ ತಹಶೀಲ್ದಾರ್ ಹಾಗೂ ಕಂದಾಯ ಅಧಿಕಾರಿಗಳನ್ನು ಕೆಲಸದಿಂದ ವಜಾಗೊಳಿಸಲು ಪಕ್ಷವು ಆಗ್ರಹಿಸಿದೆ. ರಬ್ಬರ್ ಕಡಿದವರ ವಿರುದ್ದ ಗೌಡರು ಪೋಲೀಸ್ ದೂರು ನೀಡಿದ್ದರೂ ಪೋಲೀಸರು ಇನ್ನೂ ಕೇಸ್ ದಾಖಲಿಸದಿರುವುದು ಖೇದಕರ ಎಂದರು. ಕುಂಞ ಗೌಡರ ವೈಯಕ್ತಿಕ ವಿರೋಧಿಗಳ ಮಾತಿಗೆ ಬಲಿಯಾದ ಅಧಿಕಾರಿಗಳು ಯಾವುದೇ ತನಿಖೆ ನಡೆಸದೆ, ನ್ಯಾಯವನ್ನೂ ಪರಿಗಣಿಸದೆ ಕೃಷಿ ನಾಶ ಮಾಡಿದ್ದನ್ನು ಸಿಪಿಐ(ಎಂ) ಎಂದಿಗೂ ಸಹಿಸುವುದಿಲ್ಲ ಎಂದರು.

ಅಕ್ರಮವೆಸಗಿದವರ ವಿರುದ್ದ ಕ್ರಮ ಕೈಗೊಳ್ಳಲು ಆಗ್ರಹಿಸಿ ಹಾಗೂ ಕುಂಞ ಗೌಡರಿಗೆ ಸೂಕ್ತ ಪರಿಹಾರ ಹಾಗೂ ನ್ಯಾಯ ನೀಡಲು ಒತ್ತಾಯಿಸಿ ಆಗಸ್ಟ್ 30ರಂದು ರೈತ ಸಂಘದ ಬೆಂಬಲದೊಂದಿಗೆ ಸಿಪಿಐ(ಎಂ) ಪಕ್ಷವು ಬೆಳ್ತಂಗಡಿ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಿದೆ ಎಂದವರು ತಿಳಿಸಿದರು.

– ಬಿ.ಎಂ.ಭಟ್

ಕೇಳಿಸಿದ್ದು

"ಭಯೋತ್ಪಾದಕ ದಾಳಿಗಳಿಗೆ ಬಲಿಯಾಗಿರುವುದಕ್ಕಿಂತ ನಾಲ್ಕುಪಟ್ಟು ಹೆಚ್ಚು ಮಂದಿ ಮಲದ ಗುಂಡಿಗಳನ್ನು ಸ್ವಚ್ಛ ಮಾಡಲು ಇಳಿದು ಸತ್ತಿದ್ದಾರೆ ಭಾರತ ದೇಶದಲ್ಲಿ... ಆದರೆ ಭಯೋತ್ಪಾದನೆ ಎದುರಿಸಲು ಹೂಡಿರುವ ಅರ್ಧದಷ್ಟು ಸಮಯ ಸಂಪನ್ಮೂಲಗಳನ್ನು ಕೂಡ ಈ ಬಡಪಾಯಿಗಳ ಸಾವಿನ ಸಮಸ್ಯೆ ನಿವಾರಣೆಗೆ ಖರ್ಚು ಮಾಡಲು ನಮ್ಮ ಸರ್ಕಾರ ತಯಾರಿಲ್ಲ?

– ಬೆಜವಾಡ ವಿಲ್ಸನ್
ಮ್ಯಾಗ್ಸೆಸೆ ಪ್ರಶಸ್ತಿ ವಿಜೇತ ಸಾಮಾಜಿಕ ಹೋರಾಟಗಾರ

ಪ್ರಾಥಮಿಕ ಶಾಲೆಯಲ್ಲಿ ಓದಿದ ಪುಣ್ಯಕೋಟಿ ಹಸುವಿನ ಕಥೆ ಎಳೆಯ ಮನಸ್ಸುಗಳ ಮೇಲೆ ಹಲವು ಪರಿಣಾಮಗಳನ್ನು ಬೀರಿತ್ತು. ತನ್ನ ಮುದ್ದು ಕರುಗಳಿಗಾಗಿ ತ್ಯಾಗ, ತ್ಯಾಗದಿಂದ ಕ್ರೂರಿ ಹುಲಿಯನ್ನು ಎದುರಿಸಬಹುದು ಎನ್ನುವ ಭಾವನೆಗಳು ಪುಟಿದಿತ್ತು.

ಪುಣ್ಯಕೋಟಿ ವಂಶದ ಎರಡು ಗಂಡು ಕರುಗಳನ್ನು ತನ್ನ ವಾಹನದಲ್ಲಿ ಸಾಗಿಸುವಾಗ ಪ್ರವೀಣ ಪೂಜಾರಿ ಎಂಬ 23 ವರ್ಷದ ಯುವಕ ಕೋಮು ಅಮಲಿನ ಜೊತೆಯಲ್ಲಿ ಮದ್ಯದ ಅಮಲನ್ನು ಸೇರಿಸಿಕೊಂಡಿದ್ದ ಬಹುತೇಕ ಅವನ ಮಿತ್ರರೇ ಆಗಿದ್ದ ಹಿಂದೂ ಜಾಗರಣಾ ವೇದಿಕೆ(ಹಿಂ.ಜಾ.ವೇ) ಗೆ ಸೇರಿದ್ದ ಯುವಕರ ಗುಂಪೊಂದು ಕೊಂದು ಹಾಕಿದ್ದು, 'ಬುದ್ಧಿವಂತರ ಜಿಲ್ಲೆ' ಉಡುಪಿಯನ್ನು ತಲೆತಗ್ಗಿಸುವಂತೆ ಮಾಡಿದೆ.

ವಿಪರ್‍ಯಾಸ ಎಂದರೆ ಕೊಲೆಯಾದ ಪ್ರವೀಣ ಪೂಜಾರಿ ಬಿ.ಜೆ.ಪಿ.ಯ ಕೊಕ್ಕರ್ಣೆ ಘಟಕದ ಮಾಜಿ ಸ್ಥಾನೀಯ ಅಧ್ಯಕ್ಷರು. ಚುನಾವಣೆ ಸಂದರ್ಭದಲ್ಲಿ ಸಕ್ರಿಯವಾಗಿ ಬಿ.ಜೆ.ಪಿ. ಪರವಾಗಿ ಕೆಲಸ ಮಾಡುವವರು. ಆದರೂ ಸಂಘ ಪರಿವಾರದ ಸ್ಥಳೀಯ ಹಿಂ.ಜಾ.ವೇ.ಯ ಅಧ್ಯಕ್ಷ ಅರವಿಂದ ಕೋಟೇಶ್ವರ ಅವರ ಬೆಂಬಲದೊಂದಿಗೆ ಸೇರಿದಂತೆ 20–30ಜನ ಸೇರಿ, ಹೊಡೆದು ಕೊಲೆ ಯಾ–ಕೆ ಮಾಡಿದರು ಎಂಬುದು ಇನ್ನೂ ನಿಗೂಢ. ಅದಕ್ಕಿಂತಲೂ ಹೆಚ್ಚಿನ ನಿಗೂಢವೆಂದರೆ ಸಣ್ಣ ಸಣ್ಣ ವಿಷಯಗಳಿಗೂ ರಾಜ್ಯದೆಲ್ಲೆಡೆ ಪ್ರತಿಭಟನೆ ನಡೆಸುವ ಬಿ.ಜೆ.ಪಿ. ಪತ್ರಿಕಾ ಹೇಳಿಕೆ, ಬಿಟ್ಟರೆ ಘಟನೆಯನ್ನು ಪ್ರತಿಭಟಿಸುವ ಗೋಜಿಗೇ ಹೋಗಿಲ್ಲ. ಮಾಧ್ಯಮದವರು ಬಿ.ಜೆ.ಪಿ.ಯ ಮುಖಂಡರನ್ನು ಚರ್ಚೆಗೆ ಆಹ್ವಾನಿಸಿದರೆ ಅದು ವಿವಾದಿತ ವಿಷಯ (Controversy) ಎಂದು ಹಾರಿಕೆಯ ಉತ್ತರ ನೀಡುತ್ತಾರೆ. ಒಟ್ಟಾರೆಯಾಗಿ ಉಡುಪಿ ತಾಲೂಕಿನ ಕೆಂಜೂರು ಗ್ರಾಮದ ವಾಸು ಪೂಜಾರಿ ಮತ್ತು ಬೇಬಿ ಪೂಜಾರಿಯರ ಹಿರಿಯ ಮಗ ಪ್ರವೀಣ ಪೂಜಾರಿ

ಯಶಸ್ವಿ ಸಿಐಟಿಯು ೪ ನೇ ಹಾಸನ ಜಿಲ್ಲಾ ಸಮ್ಮೇಳನ

ಹೆಚ್.ಆರ್.ನವೀನ್ ಕುಮಾರ್





ಕಲ್ಪತರು ನಾಡು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕಾರ್ಮಿಕರ ಸಮ್ಮೇಳನ ಯಶಸ್ವಿಯಾಗಿ ನಡೆದಿದೆ. ಸಿಐಟಿಯು 4ನೇ ಹಾಸನ ಜಿಲ್ಲಾ ಸಮ್ಮೇಳನವು ಆಗಸ್ಟ್ 13 ಮತ್ತು 14 ರಂದು ಜೈನ ಕಾಶಿ ಶ್ರವಣಬೆಳಗೊಳದಲ್ಲಿ ನಡೆಯಿತು. ಸಮ್ಮೇಳನದ ಮೊದಲ ದಿನ ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದ ಸಾವಿರಾರು ಕಾರ್ಮಿಕರ ಕೆಂಬಾವುಟವನ್ನಿಡಿದು ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದರು. ನಂತರ ಪಟ್ಟಣದ ಕಾರು ನಿಲ್ದಾಣದ ಎದುರಿನ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು.

ಬಹಿರಂಗ ಸಭೆ ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಎಸ್.ವರಲಕ್ಷ್ಮಿಯವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳಿಂದಾಗಿ ಕಾರ್ಮಿಕರ ಬದುಕು ದಿನದಿಂದ ದಿನಕ್ಕೆ ಸಂಕಷ್ಟಕ್ಕೊಳಗಾಗುತ್ತಿದೆ. ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿದ್ದರೂ ಕಾರ್ಮಿಕರ ಕೂಲಿ, ಸಂಬಳ ಮಾತ್ರ ಹೆಚ್ಚಾಗುತ್ತಿಲ್ಲ. ಕಾರ್ಮಿಕರ ಹಕ್ಕುಗಳನ್ನು ಕಾಪಾಡಲು ಮತ್ತು ದೇಶದ ಸಾರ್ವಭೌಮತೆ–ಐಕ್ಯತೆಯನ್ನು ಕಾಪಾಡುವ ಸಲುವಾಗಿ ಸೆಪ್ಟೆಂಬರ್ 2 ರಂದು ದೇಶದ 11 ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಿವೆ. ಇದನ್ನು ಯಶಸ್ವಿಗೊಳಿಸಲು ಎಲ್ಲ ದುಡಿಯುವ ವರ್ಗದ ಜನ ಸಮುದಾಯ ಒಗ್ಗಟ್ಟಾಗಿ ಕೆಲಸ ಮಾಡಬೇಕೆಂದರು.







ಬಹಿರಂಗ ಸಭೆಯಲ್ಲಿ ಕೆಎಸ್‌ಆರ್‌ಟಿಸಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಎಚ್.ಆರ್.ನವೀನ್‌ಕುಮಾರ್ ಮಾತನಾಡಿದರು ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ವಿ.ಸುಕುಮಾರ್ ವಹಿಸಿದ್ದರು ಪ್ರಧಾನ ಕಾರ್ಯದರ್ಶಿ ಧರ್ಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮ್ಮೇಳನ ಪ್ರತಿನಿಧಿ ಅಧಿವೇಶನ ಶ್ರವಣಬೆಳಗೊಳದಲ್ಲಿ ನಡೆಯಿತು. ಜಿಲ್ಲಾ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಜಿಲ್ಲೆಯ 26 ಹೋಬಳಿಗಳಲ್ಲಿ ಹಾಗೂ 6 ತಾಲ್ಲೂಕು ಮಟ್ಟದ ಸಮ್ಮೇಳನಗಳನ್ನು ನಡೆಸಿ ಅಲ್ಲಿ ಆಯ್ಕೆಯಾದ 200 ಪ್ರತಿನಿಧಿಗಳನ್ನೊಳಗೊಂಡ 4ನೇ ಹಾಸನ ಜಿಲ್ಲಾ ಸಮ್ಮೇಳನ ನಡೆಸಲಾಗಿದೆ. ಸಮ್ಮೇಳನದಲ್ಲಿ ಜಿಲ್ಲೆಯ ಕಾರ್ಮಿಕರ ಹಾಗೂ ಜನ ಪರವಾಗಿ ಹಲವಾರು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದ್ದು, ಇದರ ಜಾರಿಗಾಗಿ ಮುಂದಿನ ಮೂರು ವರ್ಷಗಳ ಅವಧಿಗೆ 18 ಪದಾಧಿಕಾರಿಗಳನ್ನೊಳಗೊಂಡಂತೆ 68 ಸದಸ್ಯರ ನೂತನ ಜಿಲ್ಲಾ ಸಮಿತಿ ಆಯ್ಕೆಯಾಯಿತು.

ಜಿಲ್ಲಾ ಸಮಿತಿಯ ನೂತನ ಪದಾಧಿಕಾರಿಗಳು:

ಗೌರವ ಅಧ್ಯಕ್ಷರು: **ವಿ.ಸುಕುಮಾರ್.**

ಜಿಲ್ಲಾಧ್ಯಕ್ಷರು : **ಧರ್ಮೇಶ್**

ಉಪಾಧ್ಯಕ್ಷರು : **ಜಿ.ಪಿ.ಸತ್ಯನಾರಾಯಣ, ವೈ. ಆರ್.ಮಂಜಮ್ಮ, ಇಂದಿರಮ್ಮ, ಕೆ.ಟಿ.ಹೊನ್ನೇಗೌಡ, ಪ್ರಕಾಶ್, ಕರಿಯಪ್ಪ, ಬೋಜ ಪೂಜಾರಿ.**

ಪ್ರಧಾನ ಕಾರ್ಯದರ್ಶಿ: **ಡಿ.ಎಲ್.ರಾಘವೇಂದ್ರ.**

ಕಾರ್ಯದರ್ಶಿಗಳು :

ಕೆ.ಎಸ್.ಮಂಜುನಾಥ್, ಎ.ಹರೀಶ್, ಅರವಿಂದ್, ಸೌಮ್ಯ, ವಿ.ಲತಾ, ಕುಮಾರಸ್ವಾಮಿ, ಅಶೋಕ. ಇವರೊಂದಿಗೆ 50 ಸದಸ್ಯರನ್ನೊಳಗೊಂಡ ಜಿಲ್ಲಾ ಸಮಿತಿ ಆಯ್ಕೆಯಾಗಿದೆ.

ಸಿಐಟಿಯು ಜಿಲ್ಲಾ ಸಮಿತಿ ಅಡಿಯಲ್ಲಿ 6 ತಾಲ್ಲೂಕು ಸಮಿತಿಗಳು, 2 ತಾಲ್ಲೂಕು ಸಂಚಾಲನ ಸಮಿತಿಗಳು ಹಾಗೂ 26 ಹೋಬಳಿ ಸಮಿತಿಗಳು ಕೆಲಸ ಮಾಡುತ್ತಿವೆ. ಸಿಐಟಿಯುವಿನ ಅಡಿಯಲ್ಲಿ ತೆ–ೋಟ ಕಾರ್ಮಿಕರು, ಅಂಗನವಾಡಿ ನೌಕರರು, ಗ್ರಾಮ ಪಂಚಾಯತಿ ನೌಕರರು, ಮುನಿಸಿಪಲ್ ಕಾರ್ಮಿಕರು, ಅಕ್ಷರ ದಾಸೋಹ ನೌಕರರು, ಕಾಫ್ಲಿ ಕ್ಯೂರಿಂಗ್ ಕಾರ್ಮಿಕರು, ಆಶಾ ಕಾರ್ಯಕರ್ತೆಯರು, ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರು, ಗಾರ್ಮೆಂಟ್ಸ್ ಕಾರ್ಮಿಕರು, ಕೆಎಂಎಫ್ ಗುತ್ತಿಗೆ ಕಾರ್ಮಿಕರು, ಆಸ್ಪತ್ರೆ ಕಾರ್ಮಿಕರು, ಹಾಸ್ಟೆಲ್ ಹಾಗೂ ವಸತಿ ಶಾಲೆ ನೌಕರರು, ಘನ ಕೈಗಾರಿಕೆಗಳ ಕಾರ್ಮಿಕರು ಹಾಗೂ ಇತ್ಯಾದಿ ವಿಭಾಗದ ಕಾರ್ಮಿಕರು ಸಂಘಟಿತರಾಗಿದ್ದಾರೆ.

ಸಮ್ಮೇಳನವು ಕೈಗೊಂಡ ಪ್ರಮುಖ ನಿರ್ಣಯಗಳು

1. ಸೆಪ್ಟೆಂಬರ್ 2ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಜಿಲ್ಲೆಯಾದ್ಯಂತ ವ್ಯಾಪಕ ಪ್ರಚಾರದ ಮೂಲಕ ಯಶಸ್ವಿಗೊಳಿಸಲು
2. ಗ್ರಾ.ಪಂ.ನೌಕರರ ವೇತನ ಮತ್ತು ವೇತನ ಹೆಚ್ಚಳ ಬಾಕಿ ಪಾವತಿ ಹಾಗೂ ಅನುಮೋದನೆ ಮುಂತಾದ ಸೇವಾ ಸೌಲಭ್ಯಗಳಿಗಾಗಿ ಸೆಪ್ಟೆಂಬರ್ ತಿಂಗಳಿನಲ್ಲಿ ಗ್ರಾ.ಪಂ., ತಾ.ಪಂ. ಮತ್ತು ಜಿ.ಪಂ. ಮುತ್ತಿಗೆ
3. ಮುನಿಸಿಪಲ್ ಕಾರ್ಮಿಕರ ಕನಿಷ್ಠ ವೇತನ, ಸೇವಾ ಸೌಲಭ್ಯ ಸಮರ್ಪರ್ಕ ಜಾರಿ ಹಾಗೂ ಖಾಯಂಗಾಗಿ ಸೆಪ್ಟೆಂಬರ್ ತಿಂಗಳಿನಲ್ಲಿ ಮುಷ್ಕರ ಮುಷ್ಕರ
4. ಗುತ್ತಿಗೆ / ಹೊರಗುತ್ತಿಗೆ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಪ್ರಬಲ ಹೋರಾಟ ರೂಪಿಸಲು
5. ಅಸ್ಪೃಶ್ಯತೆ, ಜಾತಿ ತಾರತಮ್ಯದ ವಿರುದ್ಧ ಹೋರಾಟಕ್ಕೆ
6. ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಪ್ರಬಲ ಹೋರಾಟ ರೂಪಿಸಲು ●

ಪುಣ್ಯಕೋಟಿಯ ಹೆಸರಿನಲ್ಲಿ ಕೊಲೆಯಾದ ಪ್ರವೀಣ ಪೂಜಾರಿ

ಬಾಲಕೃಷ್ಣ ಶೆಟ್ಟಿ

ಕೋಮುವಾದಿಗಳ ಅಟ್ಟಹಾಸಕ್ಕೆ ಬಲಿಯಾಗಿದ್ದಾರೆ. ಇನ್ನೋರ್ವ ಅಕ್ಷಯ ದೇವಾಡಿಗ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಇಬ್ಬರೂ ಬಡ ಕುಟುಂಬಕ್ಕೆ ಸೇರಿದವರು. ಕೊಲೆಯಾದ ಪ್ರವೀಣ ಪೂಜಾರಿ ತಂಗಿಯ ಮದುವೆಗೆ ಮಾಡಿದ್ದ ಸಾಲ ತೀರಿಸಲು ಹಗಲು ಹೊತ್ತಿನಲ್ಲಿ ಕೋಳಿ ವ್ಯಾಪಾರ, ಬಳಿಕ ಬಾಡಿಗೆ ಟೆಂಪೋ ಓಡಿಸುತ್ತಿದ್ದ.

ಗಂಡು ಕರುಗಳನ್ನು ಸಾಕುವುದು ಹೇಗೆ? ಗ್ರಾಮಸ್ಥರ ಅಳಲು:

ಕೆಂಜೂರು ಗ್ರಾಮದಲ್ಲಿ ಮುಸ್ಲಿಂ ಸಮುದಾಯ ಇಲ್ಲ. ಎಲ್ಲರೂ ಹಿಂದೂಗಳೇ. ಮನೆಯಲ್ಲಿ ಆದಾಯಕ್ಕೆಂದು, ಮನೆಯವರ ಅನುಕೂಲಕ್ಕೆಂದು ದನ ಸಾಕುತ್ತಾರೆ. ದನ ಹಾಲು ಕೊಡುವುದು ನಿಲ್ಲಿಸಿದಾಗ ಅದನ್ನು ಏನು ಮಾಡಬೇಕು? ಗಂಡು ಕರುಗಳು ಹುಟ್ಟಿದಾಗ ಏನು ಮಾಡಬೇಕು? ಕ್ರಾಸ್ ತಳಿ ಆಗಿರುವುದರಿಂದ ಗಂಡು ಕರುಗಳು ಉಳುಮೆಗೂ ಬರುವುದಿಲ್ಲ. ಅಲ್ಲದೇ ಕರಾವಳಿಯಲ್ಲಿ ಸಣ್ಣ ಸಣ್ಣ ಗದ್ದೆಗಳನ್ನು ಬಾಡಿಗೆ 'ಟಿಲ್ಲರ್'ಗಳ ಮೂಲಕವೇ ಉಳುಮೆ ಮಾಡುತ್ತಾರೆ. ಆದ್ದರಿಂದ ಗಂಡು ಕರುಗಳನ್ನು ಸಾಕುವ ಗೋಜಿಗೆ ರೈತರು ಹೋಗುವುದಿಲ್ಲ.

ಗೋಶಾಲೆ ಕಳುಹಿಸಿ ಎಂದು 'ಗೋ ರಕ್ಷಕರು' ಹೇಳುತ್ತಾರೆ. ದೂರದಲ್ಲಿರುವ ಗೋಶಾಲೆಗೆ ಕಳುಹಿಸಲು ವಾಹನದ ಬಾಡಿಗೆ ಕೊಡುವವರು ಯಾರು? ಬದಲಿಗೆ ಮಾರಾಟ ಮಾಡಿದರೆ ಇನ್ನೊಂದು ಹಸುವನ್ನು ಖರೀದಿಸಲು ಅನುಕೂಲವಾಗುತ್ತದೆ. ಆದ್ದರಿಂದಲೇ ಗೋಶಾಲೆಗೆ ಕಳುಹಿಸುವ ಬದಲು ಮಾರಾಟ ಮಾಡುತ್ತಾರೆ. ಇದು ಅವರ ಹಕ್ಕು.

ಭೀಭತ್ಸ ಮೂರನೇ ಪ್ರಕರಣ:

ಗೋಸಾಗಾಟ ತಡೆ, ಹೊಡೆಯುವುದು, ಬಡಿಯುವುದು ಕರಾವಳಿ ಜಿಲ್ಲೆಗಳಲ್ಲಿ ನಡೆದೇ ಇದೆ. ಮೊದಮೊದಲು ಇದು ಅಲ್ಪಸಂಖ್ಯಾತ ವಿಭಾಗದ ಮೇಲೆ ಕೇಂದ್ರೀಕೃತವಾಗಿತ್ತು. ನಂತರ ದನ ಕರುಗಳ ವ್ಯಾಪಾರ ಮಾಡುವವರು, ಸಾಗಾಟ ಮಾಡುವವರು ಯಾರೆ ಆಗಲಿ ಅವರ ಮೇಲೆ ದಾಳಿ, ಹಲ್ಲೆ ನಡೆ–ಯುತ್ತಿದೆ. 1 ವರ್ಷದ ಹಿಂದೆ ಕೊಲ್ಲೂರಿನ ಕ್ರೈಸ್ತ ಆಶ್ರಮಕ್ಕೆ ಸೇರಿದ ಸ್ವಾಮಿಯೊಬ್ಬರು ಕೇರಳದಲ್ಲಿರುವ ತನ್ನ ಆಶ್ರಮಕ್ಕೆ ಗ್ರಾಮ ಪಂಚಾಯತ್‌ನ ಪರವಾನಿಗೆ ಪಡೆದು ದನಗಳನ್ನು ಕೊಂಡೊಯ್ಯುವಾಗಲೂ ಕೋಟೇಶ್ವರ ಎಂಬಲ್ಲಿ 'ಗೋರಕ್ಷಕರು' ಮಾರಣಾಂತಿಕ ಹಲ್ಲೆ ನಡೆಸಿದ್ದರು.

ಮೇಲಿನ ಪ್ರಕರಣಗಳಲ್ಲದೆ ಇಡೀ ರಾಜ್ಯವೇ ಬೆಚ್ಚಿ ಬೀಳುವ ಇನ್ನೂ ಎರಡು ಪ್ರಕರಣಗಳು ಉಡುಪಿ ಜಿಲ್ಲೆಯಲ್ಲಿ ನಡೆದಿವೆ.

ಉಡುಪಿ–ಮಲ್ಪೆ ನಡುವೆ ಇರುವ ಆದಿಉಡುಪಿ ಪ್ರದೇಶದಲ್ಲಿ ದನ–ಎತ್ತುಗಳನ್ನು ಸಾಗಾಟ ಮಾಡುತ್ತಿದ್ದ ಹಾಜಬ್ಬ ಮತ್ತು ಹಸನಬ್ಬ ಎಂಬ ಇಬ್ಬರು ಸಹೋದರರನ್ನು ಬೆತ್ತಲೆ ಮಾಡಿ, ಮಾರಣಾಂತಿಕ ಹಲ್ಲೆ ನಡೆಸಿದ್ದರು. 'ಆದಿ ಉಡುಪಿ ಬೆತ್ತಲೆ ಪ್ರಕರಣ' ಎಂದು ಇಡೀ ದೇಶದಲ್ಲೇ ಪ್ರಚಾರವಾಗಿದ್ದು, ಜನಪರರೆಲ್ಲರೂ ಖಂಡಿಸಿದ್ದರು. ಈ ಬೆತ್ತಲೆ ಪ್ರಕರಣ ನಡೆಸಿದ ನೇತಾರ ಯಶಪಾಲ್ ಸುವರ್ಣ ಎಂಬವರು ಜಿಲ್ಲೆಯ ಪ್ರಮುಖ ಬಿ.ಜೆ.ಪಿ. ಮುಖಂಡ ಹಾಗೂ ನಗರ ಸಭೆಯ ಕಾರ್ಪೊರೇಟರ್ ಆಗಿದ್ದಾರೆ. ರಾಜ್ಯ ಮೀನುಗಾರರ ಫೆಡರೇಶನ್ ಅಧ್ಯಕ್ಷರೂ ಆಗಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಸಾಲಿಗ್ರಾಮ ಬಳಿಯ ದೇವಸ್ಥಾನದ ಕೆಲಸ ಮಾಡಿಕೊಂಡಿದ್ದ ಪಾಟಾಳಿ ಕೃಷ್ಣಯ್ಯ ಎಂಬವರು ಹುಟ್ಟಿನಲ್ಲಿ ಬ್ರಾಹ್ಮಣರಾಗಿದ್ದರೂ ಜೀವನ ನಿರ್ವಹಣೆಗಾಗಿ ದನಕರುಗಳ ವ್ಯಾಪಾರ ಮಾಡಿಕೊಂಡಿದ್ದರು. ರಾತ್ರೋರಾತ್ರಿ ಅವರ ಮನೆಗೆ ನುಗ್ಗಿದ 'ಗೋರಕ್ಷಕರು' ಮನೆಯಿಂದ ಹೊರಗೆಳೆದು, ಕೊಂದು ಹಾಕಿದ್ದಾರೆ.

ಮೇಲಿನ ಎರಡೂ ಪ್ರಕರಣದಲ್ಲಿ ಆರೋಪಿಗಳ ಬಂಧನವಾಗಿದ್ದರೂ, ಸಾಕ್ಷಿಗಳ ಕೊರತೆಯಿಂದಾಗಿ ಆರೋಪಿಗಳಿಗೆ ಶಿಕ್ಷೆಯಾಗಿಲ್ಲ.

ಪ್ರವೀಣ ಪೂಜಾರಿ ಕೊಲೆ ಪ್ರಕರಣದಲ್ಲಿ ರಾಜ್ಯ ಸರಕಾರ ಮತ್ತು ಪೊಲೀಸ್ ಇಲಾಖೆ ಸೂಕ್ತ ಕ್ರಮ ವಹಿಸಿ, ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕೆಂದು ಸಿ.ಪಿ.ಐ.(ಎಂ.) ಒತ್ತಾಯಿಸಿದೆ.

ತೀವ್ರವಾದ ಪ್ರತಿಭಟನೆ:

ಪ್ರವೀಣ ಪೂಜಾರಿ ಕೊಲೆಯಾದದ್ದು ಅಗಸ್ಟ್ 17ರ ರಾತ್ರಿ. 18ರಂದು ಪತ್ರಿಕೆಗಳಲ್ಲಿ ಇದು ಸುದ್ದಿಯಾಗಲಿಲ್ಲ. ಆದರೆ ಟಿ.ವಿ. ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಹರಡುತ್ತಿದ್ದಂತೆ ಮಂಗಳೂರು ಮತ್ತು ಕುಂದಾಪುರದಲ್ಲಿ ಡಿವೈಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಅಗಸ್ಟ್ 19ರಂದು ಸಿ.ಪಿ.ಐ.(ಎಂ.) ನೇತೃತ್ವದಲ್ಲಿ ಉಡುಪಿಯಲ್ಲಿ ಪ್ರತಿಭಟನೆ ನಡೆಸಿ, ಖಂಡಿಸಲಾಯಿತು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ. ಶಂಕರ್, ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಹಿರಿಯ ಮುಖಂಡ ಪಿ. ವಿಶ್ವನಾಥ ರೈ, ಎ.ಎಸ್. ಆಚಾರ್ಯ, ಅಂಗಾರ, ಮಹಾಬಲ ವಡೇರಹೋಬಳಿ, ಎಚ್. ನರಸಿಂಹ, ಸುರೇಶ ಕಲ್ಲಾಗರ, ವಿಠಲ ಪೂಜಾರಿ, ಸುಜಾತ ಶೆಟ್ಟಿ, ನಳಿನಿ, ಉಮೇಶ ಕುಂದರ್ ಮೊದಲಾದವರು ಭಾಗವಹಿಸಿದ್ದರು. ರಸ್ತೆಯ ಎರಡೂ ಕಡೆಗಳಲ್ಲಿ ಜನರು ಸಿ.ಪಿ.ಐ.(ಎಂ.) ಮುಖಂಡರ ಭಾಷಣವನ್ನು ಆಲಿಸುತ್ತಿದ್ದರು. ಮಾತ್ರವಲ್ಲದೇ ಬಿ.ಜೆ.ಪಿ. ಮತ್ತು ಸಂಘಪರಿವಾರದ ನಡೆಯನ್ನು ಖಂಡಿಸಿದರು. ಪ್ರವೀಣ ಪೂಜಾರಿಯವರ ಜೀವ, ದನ ಕರುಗಳಿಗಿಂತಲೂ ಕಡೆಯಾಯಿತೆ? ಎಂದು ಜನ ಪ್ರಶ್ನಿಸಿದ್ದಾರೆ.

"ಮನುಷ್ಯರನ್ನು ಪ್ರಾಣಿಗಿಂತಲೂ ಕೀಳಾಗಿ ಕಾಣುವವರು ಮನುಷ್ಯರೇ ಅಲ್ಲ" "ಗೋರಕ್ಷಕರಿಂದ ಮನುಷ್ಯರನ್ನು ರಕ್ಷಿಸಿರಿ" ಎಂಬ ಘೋಷಣೆಗಳು ಮುಗಿಲು ಮುಟ್ಟಿತು.

ಬಿ.ಜೆ.ಪಿ. ಮೌನ:

ಅಮ್ನೆಸ್ಟಿ ಇಂಟರ್‌ನ್ಯಾಷನಲ್ ವಿರುದ್ಧ ಪ್ರತಿಭಟನೆಯನ್ನು ಮುಂದುವರಿಸುತ್ತಿರುವ ಎಬಿವಿಪಿ ಮತ್ತು ಅದನ್ನು ಬೆಂಬಲಿಸುತ್ತಿರುವ ಬಿ.ಜೆ.ಪಿ.ಯುವಕ ಪ್ರವೀಣ ಪೂಜಾರಿ ಕೊಲೆಯ ವಿರುದ್ಧ ಸೊಲ್ಲೆತ್ತುತ್ತಿಲ್ಲ. ಪ್ರವೀಣ ಪೂಜಾರಿ ಬಿ.ಜೆ.ಪಿ.ಯ ಸ್ಥಳೀಯ ಘಟಕದ ಅಧ್ಯಕ್ಷರಾಗಿದ್ದರೂ ಬಿ.ಜೆ.ಪಿ., ಪ್ರತಿಭಟನೆ ಮಾಡುತ್ತಿಲ್ಲ. ಏಕೆಂದರೆ ಆಪಾದಿತರು ಹಿಂದೂ ಜಾಗರಣಾ ವೇದಿಕೆ ಸಂಚಾಲಕರು ಮತ್ತು ಸಕ್ರಿಯ ಕಾರ್ಯಕರ್ತರು. ಅವರೆಲ್ಲ ದನಸಾಗಾಟ ಮಾಡುವವರಿಂದ ಹಫ್ತಾ ವಸೂಲಿ ಮಾಡುವ ಗೂಂಡಾ ಪಡೆಗಳು.

ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಂಚಾಲಕ ಜಗದೀಶ ಕಾರಂತನ ಪ್ರಕಾರ 'ದಾಳಿ ನಡೆಸಿದವರು ಹಿಂದೂ ಜಾಗರಣ ವೇದಿಕೆಯವರಲ್ಲ. ಆದರೆ ಹಿಂಜಾವೇ ಅದ–ಕ್ಷ ಅರವಿಂದ ಕೋಟೇಶ್ವರ ಅವರ ಮೇಲೆ ಸುಳ್ಳು ಆಪಾದನೆ ಹೊರಿಸಿದ್ದಾರೆ' ಎಂದು ಹೇಳುತ್ತಾನೆ. ಆತ ಮುಂದುವರಿದು "ಗೋರಕ್ಷಣೆಯ ವಿಚಾರದಲ್ಲಿ ನಾವು ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಆ ಕೆಲಸ ಮುಂದುವರಿಯುತ್ತದೆ" ಎಂದೂ ಹೇಳುತ್ತಾನೆ. ಯಾವುದೇ ನಾಚಿಕೆಯಿಲ್ಲದೇ ಒಂದೇ ಉಸಿರಿನಲ್ಲಿ ಎರಡು ನಾಲಿಗೆಯಲ್ಲಿ ಮಾತನಾಡುತ್ತಾನೆ.

ಶಾಂತಿ, ಸುವ್ಯವಸ್ಥೆ ಹದಗೆಡುತ್ತಿರುವ ಉಡುಪಿಯಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಸಕ್ರಿಯವಾಗಿ ಮಧ್ಯ ಪ್ರವೇಶಿಸಬೇಕಾಗಿದೆ. ಬಿ.ಜೆ.ಪಿ. ಮತ್ತು ಸಂಘ ಪರಿವಾರ ತನ್ನ ಕುಕೃತ್ಯಗಳನ್ನು ಇನ್ನಷ್ಟು ಹೆಚ್ಚಿಸುವುದರಿಂದ ಜನರಲ್ಲಿ ಜಾಗೃತಿ ಮೂಡಿಸುವತ್ತ ಹೆಚ್ಚಿನ ಗಮನ ನೀಡಬೇಕಾಗಿದೆ. ಇತರ ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳನ್ನು, ವ್ಯಕ್ತಿಗಳನ್ನು ಒಂದುಗೂಡಿಸಬೇಕಾಗಿದೆ. ■

ಪ್ಯಾಲೆಸ್ಟೀನಿಯರ ದಮನದ ಬಗ್ಗೆ (ಮೊಸಳೆ) ಕಣ್ಣೀರು ಹಾಕುತ್ತಲೇ ಟಿಬೆಟ್ ಜತೆ ಅಸಂಬದ್ಧ ಹೋಲಿಕೆ ಮಾಡುತ್ತಾ ಮಧ್ಯೆ ಮಾರ್ಕ್ಸ್‌ವಾದಿಗಳನ್ನು ಎಳೆದು ತಂದು ಕೊನೆಗೂ ಗುಹಾ ಅವರು ಸಾಧಿಸುವುದಾದರೂ ಏನು? ಪ್ಯಾಲೆಸ್ಟೀನಿಯರ ಮೇಲೆ ಅಮೆರಿಕ-ಇಸ್ರೇಲ್ ದುಷ್ಟಕೂಟದ ಯುದ್ಧ-ಅಪರಾಧಗಳಿಗೆ 'ವೈಟ್ ವಾಶ್' ಮಾಡುವುದು, ಹಾಗೂ ಚೀನಾ ಮತ್ತು ಮಾರ್ಕ್ಸ್‌ವಾದದ ನೀತಿಗಳ ವಿರುದ್ಧ ದ್ವೇಷದ ಅಪಪ್ರಚಾರ ಮಾಡುವುದು. ಆ ಮೂಲಕ ಸಾಮ್ರಾಜ್ಯಶಾಹಿಯ ಈ ಡಬ್ಬಲ್ ಗೇಮಿನ ಅನಧಿಕೃತ ವಕ್ತಾರನಾಗುವುದು, ಮುಸುಕಿನ ಪ್ರಚಾರಕನಾಗುವುದು.


ಪ್ಯಾಲೆಸ್ಟೀನಿಯದ ಗಾಜಾಪಟ್ಟಿಯಲ್ಲಿ ಇಸ್ರೇಲ್ ದಾಳಿಗೆ ಮಕ್ಕಳು ಬಲಿಯಾಗಿರುವುದು

ವಸಂತರಾಜ ಎನ್.ಕೆ.

'ಗುಹಾಂಕಣ'ದಲ್ಲಿ ಟಿಬೆಟ್–ಪ್ಯಾಲೆಸ್ಟೀನ್

'ಮಾರ್ಕ್ಸ್‌ವಾದಿಗಳ ದ್ವಂದ್ವ'ನಾ ಅಥವಾ ಸಾಮ್ರಾಜ್ಯಶಾಹಿಗಳ ಡಬ್ಬಲ್ ಗೇಮಾ?

ಆಗಸ್ಟ್ 5 ರ ಪ್ರಜಾವಾಣಿಯಲ್ಲಿ ರಾಮಚಂದ್ರ ಗುಹಾ ಅವರು ಒಂದು ಲೇಖನದಲ್ಲಿ ಟಿಬೆಟ್ ಮತ್ತು ಪ್ಯಾಲೆಸ್ಟೀನ್ ಹೋರಾಟಗಳ ಬಗ್ಗೆ 'ಮಾರ್ಕ್ಸ್‌ವಾದಿಗಳ ನೀತಿಯಲ್ಲಿ ದ್ವಂದ್ವ' ಇದೆ ಎಂದು ವಾದಿಸಿದ್ದಾರೆ. ಪ್ಯಾಲೆಸ್ಟೀನಿಯರ ಪರಿಸ್ಥಿತಿಗಿಂತ ಟಿಬೇಟಿಗಳ ಪರಿಸ್ಥಿತಿಗಿಂತ 'ಕೆಟ್ಟದು' ಎಂದು ಅವರು ಪ್ರತಿಪಾದಿಸುತ್ತಾರೆ. ಇಸ್ರೇಲಿ ಸರಕಾರಕ್ಕಿಂತಲೂ ಚೀನಿ ಸರಕಾರದ್ದು ಕೆಟ್ಟ 'ಭೌಗೋಳಿಕ ಆಕ್ರಮಣ', 'ಪಾರಿಸರಿಕ ಸಾಮ್ರಾಜ್ಯಶಾಹಿತ್ವ' ಮತ್ತು 'ಪ್ರಾರ್ಥನಾ ಸ್ಥಳಗಳ ನಾಶ' ಎಂಬುದು ಅವರ ವಾದ.


ರಾಮಚಂದ್ರ ಗುಹಾ

ಟಿಬೆಟ್ ಹಿಂದೆ ಯಾವಾಗಲೂ ಸ್ವತಂತ್ರವಾಗಿತ್ತೇ?

ಗುಹಾ ಅವರ ವಾದವನ್ನು ಪರಿಶೀಲಿಸೋಣ. ಮೊದಲನೆಯದಾಗಿ 'ಭೌಗೋಳಿಕ ಆಕ್ರಮಣ', 'ಪಾರಿಸರಿಕ ಸಾಮ್ರಾಜ್ಯಶಾಹಿತ್ವ' ಎಂಬ ಅವರ ಹೇಳಿಕೆಯ ಹಿಂದೆ ಟಿಬೆಟ್ ಅನಾದಿಕಾಲದಿಂದಲೂ ಸ್ವತಂತ್ರವಾಗಿತ್ತು. 1949ರಲ್ಲಿ ಚೀನಾ ಟಿಬೆಟನ್ನು ಆಕ್ರಮಿಸಿಕೊಂಡಿತು ಎಂಬ ಗ್ರಹಿಕೆ ಇದೆ. ಇದು ಚಾರಿತ್ರಿಕವಾಗಿ ನಿಜವಲ್ಲ.

ಟಿಬೆಟ್ ಒಂದು ರಾಜಕೀಯ ಘಟಕವಾಗಿ ಸ್ಥಾಪಿತವಾದದ್ದು 7ನೇ ಶತಮಾನದಲ್ಲಿ ಗಾಂಬೊ ಎಂಬ ರಾಜನಿಂದ. ಆದರೆ ಇತಿಹಾಸದ ಹಲವು ಅವಧಿಗಳಲ್ಲಿ ಟಿಬೆಟ್ ಇತರ (ಮಂಗೋಲ್ ಚೀನಿ, ನೇಪಾಳಿ – ಸಾಮ್ರಾಜ್ಯಗಳ) ಆಳ್ವಿಕೆ ಅಡಿಯಲ್ಲಿ ಬಂದಿತ್ತು. ಗಾಂಬೊ ಹಲವು ಆದಿವಾಸಿ ಸಮುದಾಯಗಳನ್ನು ಒಗ್ಗೂಡಿಸಿ ಆಳಿ ತೂಬೊ ರಾಜವಂಶ ಸ್ಥಾಪಿಸಿದ. ಕ್ರಿ.ಶ. 842 ರಲ್ಲಿ ತೂಬೊ ರಾಜವಂಶ ಪತನ ಹೊಂದಿತು. ತೂಬೊ ರಾಜವಂಶ ಮಂಗೋಲ್ ಚೀನಿ, ನೇಪಾಳಿ ಹಾಗೂ ಭಾರತೀಯ ರಾಜವಂಶಗಳ ಜತೆ ಮದುವೆ ಸಂಬಂಧ ಹೊಂದಿದ್ದವು. ಟಿಬೆಟ್ ರಾಜರು ನೆರೆಯ ರಾಜರುಗಳು ಹಾಗು ಸಾಮ್ರಾಜ್ಯಗಳ ಜತೆ (ಎಲ್ಲೆಡೆ ನಡೆಯುವಂತೆ) ಯುದ್ಧದಲ್ಲಿ ಸಹ ತೊಡಗಿದ್ದರು. ಯೂವಾನ್ (ಕ್ರಿ.ಶ. 1271–1368). ಮಿಂಗ್ (1368–1644) ಮತ್ತು ಕಿಂಗ್ ವಂಶದ (1644–1912) ಆಳ್ವಿಕೆಯಲ್ಲಿ ಅದು ಚೀನಾದ ಹೆಚ್ಚಿನ ಭಾಗಗಳ ಜತೆ ಈ ಸಾಮ್ರಾಟರ ಆಳ್ವಿಕೆಯಡಿ ಬಂದಿತ್ತು. ಸ್ವಲ್ಪ ಕಾಲ (1788–1792) ಟಿಬೆಟ್ ನೇಪಾಳೀ ರಾಜನ ಆಳ್ವಿಕೆಯಡಿಯಲ್ಲೂ ಬಂದಿತ್ತು. ಟಿಬೆಟ್ ಎಷ್ಟರ ಮಟ್ಟಿಗೆ ಯಾವ ಅವಧಿಗಳಲ್ಲಿ ಯಾವ ಸಾಮ್ರಾಜ್ಯಗಳ ಭಾಗವಾಗಿತ್ತು, ಯಾವಾಗ ಎಷ್ಟರ ಮಟ್ಟಿಗೆ ಸ್ವತಂತ್ರ/ಸ್ವಾಯತ್ತ ಆಡಳಿತ ಹೊಂದಿತ್ತು ಎಂಬುದು, ಎಲ್ಲಾ ದೇಶಗಳ ಚರಿತ್ರೆಯಲ್ಲಿದ್ದಂತೆ, ವಿವಾದಾಸ್ಪದವೇ. ಆದರೆ ಅನಾದಿಕಾಲದಿಂದ 1949ರ ವರೆಗೆ ಟಿಬೆಟ್ ಪೂರ್ಣ ಸ್ವತಂತ್ರವಾಗಿತ್ತು ಎಂಬುದಂತೂ ಖಂಡಿತ ನಿಜವಲ್ಲ.

1912–1949 ಅವಧಿಯಲ್ಲಿ ಟಿಬೆಟ್ 'ಹೆಚ್ಚು ಕಡಿಮೆ' ಸ್ವತಂತ್ರವಾಗಿತ್ತೇ?

ಅತಿ ಹೆಚ್ಚಿನ ವಿವಾದ ಮತ್ತು ಸ್ವತಂತ್ರ ಟಿಬೆಟ್ (ದಲೈ ಲಾಮಾ ಮತ್ತು ಆತನ ಟಿಬೇಟಿ ಹಾಗೂ ಅಂತರ್ರಾಷ್ಟ್ರೀಯ) ಬೆಂಬಲಿಗರ ಮುಖ್ಯ ವಾದ ಇರುವುದು ಪ್ರಮುಖವಾಗಿ 1912–1949ರ ಅವಧಿ ಬಗ್ಗೆ. ಕಿಂಗ್ ಸಾಮ್ರಾಜ್ಯ ಪತನಗೊಂಡು 1912ರಲ್ಲಿ ಸನ್–ಯಾಟ್–ಸೆನ್ ನಾಯಕತ್ವದಲ್ಲಿ 'ರಿಪಬ್ಲಿಕನ್ (ಪ್ರಜಾಸತ್ತಾತ್ಮಕ) ಕ್ರಾಂತಿ'ಯ ನಂತರ ಕಮ್ಯುನಿಸ್ಟ್ ಕ್ರಾಂತಿಯವರೆಗಿನ (1912–49) ಅವಧಿಯಲ್ಲಿ ಟಿಬೆಟ್ 'ಹೆಚ್ಚು ಕಡಿಮೆ (ಡಿ–ಫ್ಯಾಕ್ಟೊ) ಸ್ವತಂತ್ರ' ವಾಗಿತ್ತು ಎಂಬ ವಾದ ಇದೆ. ಇದು ಎಷ್ಟರ ಮಟ್ಟಿಗೆ ನಿಜ? 1927ರಲ್ಲಿ ಚೀನೀ ರಿಪಬ್ಲಿಕನ್ ಸರಕಾರ 'ಟಿಬೆಟಿ ಮತ್ತು ಮಂಗೋಲಿಯನ್ ವ್ಯವಹಾರಗಳ ಕಮಿಶನ್' ನೇಮಿಸಿದ್ದು, 13ನೇ ದಲೈ ಲಾಮಾ 9ನೇ ಪಂಚೇನ್ ಲಾಮಾ ಮತ್ತು ಇತರ ಟಿಬೆಟಿ ಪ್ರಾಂತ್ಯದ ಸರಕಾರದ ಪ್ರತಿನಿಧಿಗಳು ಈ ಕಮಿಶನಿನಲ್ಲಿ ಸದಸ್ಯರಾಗಿದ್ದಕ್ಕೆ ದಾಖಲೆ ಇದೆ. ಈ ಕಮಿಶನ್ ಈ ಇಡೀ ಅವಧಿಯಲ್ಲಿ ಕೆಲಸ ಮಾಡುತ್ತಿತ್ತು. ದಲೈ ಲಾಮಾ ಮತ್ತು ಪಂಚೇನ್ ಲಾಮಾಗಳ ಅಂತಿಮ ಆಯ್ಕೆ ಚೀನೀ ಸರಕಾರದ ಸಮ್ಮತಿಯ ನಂತರ ಆಗಬೇಕಿತ್ತು. ಈಗಿನ (14ನೇ) ದಲೈ ಲಾಮಾ 1939ರಲ್ಲಿ ನೇಮಕವಾದಾಗ ಆತ ಲಾಸಾಕ್ಕೆ ತೆರಳಿದ್ದು ಚೀನಿ ಸರಕಾರದ ಒಬ್ಬ ಮಂತ್ರಿ ಮತ್ತು ಚೀನಿ ಸೈನ್ಯದ ತುಕಡಿಯ ರಕ್ಷಣೆಯಲ್ಲಿ!

ಚೀನೀ ಕೇಂದ್ರಿಯ ರಿಪಬ್ಲಿಕನ್ ಸರಕಾರಕ್ಕೆ ಈ ಅವಧಿಯಲ್ಲಿ ಟಿಬೆಟಿನ ಮೇಲೆ ಹೆಚ್ಚಿನ ನಿಯಂತ್ರಣವಿರಲಿಲ್ಲ ಎಂಬುದು ಸ್ವತಂತ್ರ ಟಿಬೆಟ್ ಬೆಂಬಲಿಗರ ಇನ್ನೊಂದು ವಾದ. 1930ರ ದಶಕದಿಂದ ಜಪಾನ್ ಮಿಲಿಟರಿ ಆಕ್ರಮಣದೊಂದಿಗೆ ಚೀನಾದ ಹಲವಾರು ಪ್ರದೇಶಗಳನ್ನು ವಶಪಡಿಸಿಕೊಂಡಿದ್ದು, ಪಾಶ್ಚಿಮಾತ್ಯ ಶಕ್ತಿ ರಾಷ್ಟ್ರಗಳ 'ಪ್ರಭಾ ವಲಯ'ಗಳು, ಹಲವು ಸ್ಥಳೀಯ ಲೂಟಿಕೋರ ಪುಂಡರಸರ(ವಾರ್ ಲಾರ್ಡ್ ಗಳು) ದಾಂಧಲೆ, ಕ್ಯುಮಿಂಟಾಂಗ್ ಸೈನ್ಯ ಮತ್ತು ಕಮ್ಯುನಿಸ್ಟ್ ಗೆರಿಲ್ಲಾಗಳ ನಡುವೆ ಆಂತರಿಕ ಯುದ್ಧ, ಹಾಗೂ ಇವುಗಳೆಲ್ಲದರಿಂದ ಅರಾಜಕತೆ ಚೀನಾವನ್ನು ಆವರಿಸಿತ್ತು. ಇದು ಟಿಬೆಟ್ ಬಗ್ಗೆ ಮಾತ್ರವಲ್ಲ, ಚೀನಾದ ಹಲವು ಪ್ರದೇಶಗಳ ಬಗೆಗೂ ನಿಜ. ಇಂತಹ ಸ್ಥಿತಿಯಿಂದಾಗಿಯೇ ದಲೈ ಲಾಮಾ ಲಾಸಾಕ್ಕೆ ತೆರಳಿದ್ದು ಚೀನೀ ಸೈನ್ಯದ ತುಕಡಿಯ ಬೆಂಗಾವಲಲ್ಲಿ.

ಇವೆಲ್ಲದ್ದಕ್ಕಿಂತ ಹೆಚ್ಚಾಗಿ 1912–1949 ಅವಧಿಯಲ್ಲಾಗಲಿ ಮಂಗೋಲಿಯಾ ಬಿಟ್ಟರೆ ಜಗತ್ತಿನ ಯಾವುದೇ ದೇಶ ಟಿಬೆಟ್ ಸ್ವತಂತ್ರ ದೇಶ ಎಂದು ಮಾನ್ಯ ಮಾಡಿರಲಿಲ್ಲ ಎಂಬುದಂತೂ ನಿಜ. ಸ್ವತಂತ್ರ ಟಿಬೆಟಿನ ಕಟ್ಟಾ ಬೆಂಬಲಿಗರಾದ ಅಮೆರಿಕ ಹಾಗೂ ಬ್ರಿಟನ್ ಈ ಅವಧಿಯಲ್ಲೂ ಆ ಮೇಲೂ ಏಕೆ ಟಿಬೆಟಿಗೆ ಯಾಕೆ ಮಾನ್ಯತೆ ಕೊಡಲಿಲ್ಲ? ವಿಪರ್ಯಾಸವೆಂದರೆ ಅಮೆರಿಕ 'ನಿಜವಾದ ಚೀನಾ' ಎಂದು ಮಾನ್ಯ ಮಾಡಿದ್ದ ತೈವಾನ್ ನ ಸರಕಾರ ಟಿಬೆಟ್ 'ಚೀನಾದ ಅವಿಭಾಜ್ಯ ಅಂಗ' ಎಂದು ವಿಶ್ವಸಂಸ್ಥೆ ಸೇರಿದಂತೆ ಎಲ್ಲಾ ಅಂತರ್ರಾಷ್ಟ್ರೀಯ ವೇದಿಕೆಗಳಲ್ಲಿ ಸಾರುತ್ತಿತ್ತು!

1959ರಲ್ಲಿ ನಡೆದಿದ್ದು 'ಆಕ್ರಮಣ'ವೇ? 'ವಿಮೋಚನೆ'ಯೇ?

ಇವೆಲ್ಲಕ್ಕಿಂತಲೂ ಹೆಚ್ಚಾಗಿ ಮಾರ್ಕ್ಸ್‌ವಾದಿಗಳಿಗೆ ಟಿಬೆಟ್ ನೀತಿ ಬಗ್ಗೆ ನಿರ್ಣಾಯಕವಾಗುವುದು ಅಲ್ಲಿ ಹಲವಾರು ಶತಮಾನಗಳ ಕಾಲ ಇದ್ದ ಲಾಮಾ ಆಳ್ವಿಕೆಯ ಹಾಗೂ ಸಾಮಾಜಿಕ ವ್ಯವಸ್ಥೆಯ ಸ್ವರೂಪ ಮತ್ತು 1959ರಲ್ಲಿ ಟಿಬೇಟಿನಲ್ಲಿ ನಡೆದ ಸಾಮಾಜಿಕ–ರಾಜಕೀಯ ಬದಲಾವಣೆಗಳ ಸ್ವರೂಪ. ಟಿಬೇಟಿನಲ್ಲಿ 20ನೇ ಶತಮಾನದ ಮಧ್ಯದಲ್ಲಿ ಹಾಗೂ ಹಲವು ಶತಮಾನಗಳಿಂದ ಇದ್ದಿದ್ದು (1910ರ ದಶಕದಲ್ಲಿ ಕೆಲವು ಸುಧಾರಣೆಗಳ ನಂತರವೂ) ಅತ್ಯಂತ ಬರ್ಬರ ಪಾಳೆಯಗಾರಿ ವ್ಯವಸ್ಥೆ. ಎಲ್ಲಾ ಚರಾಚರ ಆಸ್ತಿ ಶೇ. 5 ಪಾಳೆಯಗಾರರ ಬಳಿ ಇದ್ದವು. ಶೇ. 95 ಜನ ಆಜನ್ಮ ಜೀತಗಾರರ ಜೀವನ ಸಾಗಿಸುತ್ತಿದ್ದರು. ಬೌದ್ಧ ಧಾರ್ಮಿಕ ಗುರು(ಲಾಮಾ)ಗಳು ಧಾರ್ಮಿಕ–ರಾಜಕೀಯ ಅಧಿಕಾರ ಎರಡನ್ನೂ ಹೊಂದಿದ್ದು ಈ ಬರ್ಬರ ವ್ಯವಸ್ಥೆಯ ವಿಶಿಷ್ಟತೆಯಾಗಿತ್ತು. ಬುದ್ಧ ಮತ್ತೆ ಮತ್ತೆ ಮಾನವನಾಗಿ ಅವತರಿಸುತ್ತಾನೆ ಎಂಬ ನಂಬಿಕೆ ಟಿಬೇಟಿನ ಪ್ರಮುಖ ಬೌದ್ಧ ಪಂಥದ ಇನ್ನೊಂದು ವಿಶಿಷ್ಟತೆಯಾಗಿತ್ತು. ಇಂತಹ ನಂಬಿಕೆ ಟಿಬೇಟಿನ ಅಥವಾ ಭಾರತ, ಚೀನಾ ಸೇರಿದಂತೆ ಇತರ ದೇಶಗಳ ಇತರ ಬೌದ್ಧ ಪಂಥಗಳಲ್ಲಿ ಇಲ್ಲ ಎಂದು ಗಮನಿಸಬೇಕು. ದಲೈ ಲಾಮಾ ಬುದ್ಧನ ಅವತಾರ. ಹಿರಿಯ ದಲೈ ಲಾಮಾ ಹೊಸ (ಕಿರಿಯ) ಬುದ್ಧನ ಅವತಾರವನ್ನು ಗುರುತಿಸುತ್ತಾನೆ. ಇವೆರಡೂ ವಿಶಿಷ್ಟತೆಗಳು ಈ ಬರ್ಬರ ಪಾಳೆಯಗಾರಿ ವ್ಯವಸ್ಥೆಯನ್ನು ಕಾಪಾಡಲು ಸಹಾಯಕವಾಗಿದ್ದವು. ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಪಾಳೆಯಗಾರಿ–ವಿರೋಧಿ ಸಾಮ್ರಾಜ್ಯಶಾಹಿ–ವಿರೋಧಿ ಗೆರಿಲ್ಲಾ ಹೋರಾಟದ ಸ್ಫೂರ್ತಿ ಮತ್ತು 1949ರಲ್ಲಿ ಚೀನಾದ ತುಂಬಾ ಅದರ ವಿಜಯ, ದೂರದ ಟಿಬೆಟ್ ಮುಟ್ಟುವುದು ತಡವಾಗಲಿಲ್ಲ. 1949ರಲ್ಲಿ ಅಧಿಕಾರಕ್ಕೆ ಬಂದ ಕಮ್ಯುನಿಸ್ಟ್ ಸರಕಾರ 'ಕ್ರಾಂತಿ'ಯನ್ನು ಟಿಬೆಟಿನ ಮೇಲೆ ಹೊರಿಸಲಿಲ್ಲ. ಬದಲಾಗಿ ಶಾಂತಿಯುತವಾಗಿ ಭೂಒಡೆತನದಲ್ಲಿ ಸುಧಾರಣೆ ತರಲು ಪ್ರಯತ್ನಿಸಿತು. ಇದಕ್ಕೆ ಟಿಬೆಟಿನ ಲಾಮಾಗಳು ಪಾಳೆಯಗಾರರು ತೀವ್ರ ಪ್ರತಿರೋಧ ತೋರಿದರು. 1959ರಲ್ಲಿ ವಿದೇಶೀ ಶಕ್ತಿಗಳ ಬೆಂಬಲದಿಂದ ಸಶಸ್ತ್ರ ದಂಗೆಗೆ ಪ್ರಯತ್ನಿಸಿದರು. ಇದರ ವಿರುದ್ಧ ಟಿಬೆಟಿನ ಜೀತಗಾರರು ದಂಗೆಯೆದ್ದರು. ಜೀತಗಾರರಿಗೆ ಬೆಂಬಲಾರ್ಥವಾಗಿ ಲಾಮಾ ಪಾಳೆಯಗಾರಿ ಕೂಟದ ದಂಗೆಯನ್ನು ಹತ್ತಿಕ್ಕಲು ಚೀನಾ ಸರಕಾರ ಸೈನ್ಯ ಕಳಿಸಿತು. ಇದನ್ನು ಗುಹಾ 'ಆಕ್ರಮಣ' ಎಂದು ಕರೆಯುತ್ತಾರೆ.

ಹೈದರಾಬಾದ್ ಮತ್ತು ಕಾಶ್ಮೀರದಲ್ಲಿ ನಡೆದದ್ದೂ ಇದೇ ಅಲ್ಲವೇ? ಎರಡೂ ರಾಜ್ಯಗಳ ಜನತೆ ಬಯಸಿದ್ದು ಬೆಂಬಲಿಸಿದ್ದು ಬ್ರಿಟಿಶ್ ವಸಾಹತುಶಾಹಿ ಆಡಳಿತದ ಅಂತ್ಯ ಮತ್ತು ಪ್ರಜಾಸತ್ತಾತ್ಮಕ ಸರಕಾರವನ್ನು. ಆದರೆ ಬ್ರಿಟಿಶ್ ಕುತಂತ್ರದ ಭಾಗವಾಗಿದ್ದ ಈ ಎರಡೂ ಸಂಸ್ಥಾನಗಳ ರಾಜ–ನಿಜಾಮರು ಬಯಸಿದ್ದು 'ಸ್ವತಂತ್ರ' ರಾಜ್ಯವನ್ನು. ಈ ಎರಡು ರಾಜ್ಯಗಳ ಜನತೆ ಈ ರಾಜ್ಯಗಳ ವಿಮೋಚನೆಗೆ ಸ್ವತಂತ್ರ ಭಾರತದ ಸರಕಾರವನ್ನು ಸೈನ್ಯ ಕಳಿಸಲು ಒತ್ತಾಯಿಸಿದಾಗ ಮತ್ತು ಸ್ವತಂತ್ರ ಭಾರತದ ಸರಕಾರ ಸೈನ್ಯ ಕಳಿಸಿದ್ದನ್ನು ಗುಹಾ 'ಆಕ್ರಮಣ' ಎಂದು ಕರೆಯುತ್ತಾರೆಯೇ? ಅಥವಾ 'ವಿಮೋಚನೆ' ಎಂದು ಕರೆಯುತ್ತಾರೆಯೇ?

ಈ ಎಲ್ಲಾ ಚರಿತ್ರೆ 'ಪ್ರಸಿದ್ಧ ಇತಿಹಾಸಕಾರ' ರಾಮಚಂದ್ರ ಗುಹಾ ಅವರಿಗೆ ಗೊತ್ತಿಲ್ಲವೇ? ಅವರು ಇವೆಲ್ಲದರ ಬಗ್ಗೆ ಏಕೆ 'ದಿವ್ಯ ಮೌನ' ವಹಿಸುತ್ತಾರೆ?

ಸ್ವಯಂ–ನಿರ್ಧಾರ, ಸ್ವಾಯತ್ತತೆ, ಸ್ವಾತಂತ್ರ್ಯ

ಗುಹಾ ಅವರ ವಾದವನ್ನು ಅದರ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋದರೆ, ಅವರು ಕಾಶ್ಮೀರದ 'ಸ್ವಾತಂತ್ರ್ಯ ಹೋರಾಟ'ವನ್ನು ಬೆಂಬಲಿಸಬೇಕು. ಅವರು ಬೆಂಬಲಿಸುತ್ತಾರೆಯೇ? ಬಹುಶಃ ಇಲ್ಲ. ಆ ಬಗ್ಗೆ ಅವರು ಮೌನವಾಗಿದ್ದಾರೆ. ಹಾಗಾದರೆ ಟಿಬೇಟಿನ 'ಸ್ವಾತಂತ್ರ್ಯ ಹೋರಾಟ'ವನ್ನು ಬೆಂಬಲಿಸುವುದು ಕಾಶ್ಮೀರದ 'ಸ್ವಾತಂತ್ರ್ಯ ಹೋರಾಟ'ವನ್ನು ವಿರೋಧಿಸುವುದು ಅಥವಾ ಮೌನವಾಗಿರುವುದು ಅವರ ದ್ವಂದ್ವ ನೀತಿ ಅಲ್ಲವೇ? ಮಾರ್ಕ್ಸ್‌ವಾದಿಗಳು ಕಾಶ್ಮೀರ ಮತ್ತು ಟಿಬೆಟ್ ಎರಡೂ ಪ್ರತ್ಯೇಕತಾವಾದಿ 'ಸ್ವಾತಂತ್ರ್ಯ ಹೋರಾಟ'ಗಳನ್ನು ವಿರೋಧಿಸುತ್ತಾರೆ. ಪ್ಯಾಲೆಸ್ಟೀನಿ 'ಸ್ವಾತಂತ್ರ್ಯ ಹೋರಾಟ'ವನ್ನು ಬೆಂಬಲಿಸುತ್ತಾರೆ. ಇದರಲ್ಲಿ ಯಾವುದೇ ದ್ವಂದ್ವ ಇಲ್ಲ.

ರಾಷ್ಟ್ರೀಯತೆ ಭಾಷೆ, ವಿಶಿಷ್ಟ ಧಾರ್ಮಿಕ–ಸಾಂಸ್ಕೃತಿಕ ಆಚರಣೆಗಳು ಮುಂತಾದವುಗಳಿಂದ ನಿರ್ಧಾರಿತವಾಗುತ್ತದೆ. ಒಂದು ದೇಶದೊಳಗೆ ಎಲ್ಲಾ ರಾಷ್ಟ್ರೀಯತೆಗಳ ಸಮಾನತೆ, ಮತ್ತು ಅವರ ಸ್ವಯಂ–ನಿರ್ಧಾರದ ಹಕ್ಕು ಮೂಲಭೂತವಾದದ್ದು. ಇದು ಮಾರ್ಕ್ಸ್‌ವಾದಿಗಳ ಮೂಲಭೂತ ತಿಳುವಳಿಕೆ. ಇದನ್ನು ಎತ್ತಿ ಹಿಡಿಯಲು ಮಾರ್ಕ್ಸ್‌ವಾದಿಗಳ ಹೋರಾಡುತ್ತಾರೆ. ವಸಾಹತುಶಾಹಿ–ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟದಲ್ಲಿ ಪ್ರತಿ ರಾಷ್ಟ್ರೀಯತೆಗೆ ತನ್ನದೇ ದೇಶ ಕಟ್ಟಿಕೊಳ್ಳುವ ಅಥವಾ ಇತರ ರಾಷ್ಟ್ರೀಯತೆಯ ಜನತೆಯೊಂದಿಗೆ ಸೇರಿ ಬಹು–ರಾಷ್ಟ್ರೀಯತೆಗಳಿರುವ ದೇಶ–ಪ್ರಭುತ್ವ ಕಟ್ಟುವ ಹಕ್ಕು ಇದೆ. ಝಾರಶಾಹಿ ವಿರುದ್ಧ ಬಂಡೆದ್ದ ರಶ್ಯನ್ ಸಾಮ್ರಾಜ್ಯದ ದೇಶಗಳು ರಶ್ಯನ್ ಕ್ರಾಂತಿಯ ಸಂದರ್ಭದಲ್ಲಿ ಮೊದಲು ಸ್ವತಂತ್ರವಾಗಿ ಆ ಮೇಲೆ ಸೋವಿಯೆಟ್ ಒಕ್ಕೂಟ ಕಟ್ಟಿಕೊಂಡದ್ದು ಇಂತಹ ಬಹು–ರಾಷ್ಟ್ರೀಯತೆಗಳಿರುವ ದೇಶ–ಪ್ರಭುತ್ವಗಳಿಗೆ ಮಾದರಿ. ಚೀನಾ ಸನ್–ಯಾಟ್–ಸೆನ್ ನಾಯಕತ್ವದ

ಪುಟ 19 ಕ್ಕೆ

ಜನಪರ ಕಾನೂನು ಜಾರಿಗೆ ತರಲು ಸರ್ಕಾರಗಳು ಹಿಂದೇಟು ಹಾಕಬಾರದು



ಬಹುಜನರ ಹಿತ ಕಾಪಾಡುವ ಮೌಢ್ಯಾಚರಣೆ ಪ್ರತಿಬಂಧಕ ಕಾನೂನು ಜಾರಿಗೆ ತರುವಲ್ಲಿ ರಾಜ್ಯ ಸರ್ಕಾರ ಹಿಂದೇಟು ಹಾಕಬಾರದು ಎಂದು ನಿಡುಮಾಮಿಡಿ ಪೀಠಾಧ್ಯಕ್ಷ ಶ್ರೀ ವೀರಭದ್ರ ಚನ್ನಮಲ್ಲಸ್ವಾಮೀಜಿ ಹೇಳಿದರು. ಅವರು ದಿನಾಂಕ 24.08.2016 ರಂದು ಬಸವನಗುಡಿಯ ಕಾಂ. ಜ್ಯೋತಿಬಸು ಭವನದಲ್ಲಿ ನಡೆದ ಕಾರ್ಮಿಕ ಮುಖಂಡ ಕಾಂ॥ಸೂರ್ಯನಾರಾಯಣ ರಾವ್ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಿಂದೆ ಆದಿಮ ಸಮಾಜ ಅನೇಕ ಬುಡಕಟ್ಟುಗಳು ಪರಸ್ಪರ ವಿರೋಧಿ ಬಣಗಳ ವ್ಯಕ್ತಿಗಳನ್ನು ಹಿಡಿದು ತಮ್ಮ ದೈವಕ್ಕೆ ಸಂಪ್ರೀತಿಯಾಗಲಿ ಎಂದು ನರಬಲಿ ಕೊಡುತ್ತಿದ್ದರು. ಅದು ಆ ಜನರ ನಂಬಿಕೆಗಳಿಗೆ ಪ್ರಿಯವಾದ ಆಚರನೆಯಾಗಿತ್ತು. ಆ ನರಬಲಿಯ ಸಾತ್ವಿಕ ರೂಪವೇ ಮುಡಿ ಕೊಡುವುದು. ನರಬಲಿ ಪಾಪ ಎಂದು ಹೇಳಿದ ನಂತರ ನಾಗರೀಕ ಸಮಾಜ ಮಾನವ ಜೀವದ ಮೌಲ್ಯವನ್ನು ಕಂಡುಕೊಂಡಂತೆ ನರಬಲಿ ಕುಗ್ಗುತ್ತಾ ಬಂದಿತ್ತು. ರುಂಡ ಕತ್ತರಿಸುವ ಬದಲಿಗೆ ಆ ತಲೆಯ ಕೂದಲನ್ನು ದೇವರಿಗೆ ಸಲ್ಲಿಸಿದರೆ ಸರಿ ಎನ್ನುವ ಆಚರಣೆಯನ್ನು ಮಾನವ ಅನುಸರಿಸಿಕೊಂಡು ಬಂದನು.

ದೇವರಿಗೆ ಹಣ್ಣು–ಕಾಯಿ ಸಲ್ಲಿಸುವಾಗ ತೆಂಗಿನ ಕಾಯಿ ಒಡೆಯುತ್ತಾರೆ ಬಾಳೆ ಹಣ್ಣನ್ನು ಚಿವುಟುತ್ತಾರೆ. ಅದು ಬಲಿಯ ಸಾತ್ವಿಕ ರೂಪ. ಹಿಂಸಾತ್ಮಕ ಆಚರಣೆ–ಯ ಸಾತ್ವಿಕ ರೂಪಗಳಾಗಿ ಇವುಗಳು ಆಚರಣೆಗೆ ಬಂದಿವೆ. ಉಪನಿಷತ್ತುಗಳು ವರ್ಣಿಸುವಂತೆ ದೇವರು ನಿರಾಕಾರ ಎಂಬ ಪದಗಳನ್ನು ಬಳಸುತ್ತಾರೆ. ಇದು ಬಯಲನ್ನು ಕುರಿತು ಅವರು ಮಾತನಾಡುತ್ತಿದ್ದರು. ವಿಶ್ವದ ರಹಸ್ಯದ ಬಗ್ಗೆ ವಿಜ್ಞಾನವೂ ಏನನ್ನೂ ಅಂತಿಮವಾಗಿ ಹೇಳಲು ಸಾಧ್ಯವಾಗಿಲ್ಲ, ಅಂತೆಯೇ ಆಧ್ಯಾತ್ಮವೂ ಸಹ. ಆಧ್ಯಾತ್ಮದ ಮೂಲ ಆಶಯ ಹುಡುಕಾಟ, ವಿಜ್ಞಾನದ ಮೂಲ ಆಶಯವೂ ಅದೇ ಆಗಿದೆ. ಅದನ್ನು ಸಂಶೋಧನೆ ಎನ್ನುತ್ತೇವೆ. ಆಧ್ಯಾತ್ಮಕ್ಕೂ ವಿಜ್ಞಾನಕ್ಕೂ ದ್ವಂದ್ವ ಇಲ್ಲ. ಇದನ್ನು ಹುಟ್ಟುಹಾಕಿರುವವರು ಪುರೋಹಿತ ವರ್ಗ. ಜ್ಞಾನ ವಿಜ್ಞಾನಕ್ಕೂ ಧರ್ಮದ ಮೂಲ ಅನ್ವೇಷನೆಗೂ ವೈರುಧ್ಯವಿಲ್ಲ.

ನನ್ನ ವ್ಯಕ್ತಿಗತವಾದ ನಂಬಿಕೆ ತಿಳಿವಳಿಕೆ ಎಂದ–ರೆ ಈ ಜಗತ್ತನ್ನೆಲ್ಲ ಸೃಷ್ಠಿ ಮಾಡಿರುವ ನಮ್ಮ ನಿಮ್ಮ ಹಾಗಿರುವ ಯಾರೋ ವ್ಯಕ್ತಿ ನಿಯಂತ್ರಿಸುತಿದ್ದಾನೆ ಎನ್ನುವುದನ್ನು ನನ್ನ ಮನಸ್ಸು ಒಪ್ಪುತ್ತಿಲ್ಲ. ಆದರೆ ಈ ಜಗತ್ತು ಶಕ್ತಿಯಿಂದ ಕೂಡಿದೆ. ಶಕ್ತಿಯಿಲ್ಲದೆ ಯಾವುದೂ ಇಲ್ಲ. ಆದರೆ ನಿಯಂತ್ರಿಸುವ ಸೃಷ್ಠಿ, ಸಂರಕ್ಷಣೆ, ನಾಶ ಮಾಡುವ ಸರ್ವಾಧಿಕಾರಿ ವ್ಯಕ್ತಿ ಇದ್ದಾನೆ ಎಂಬ ನಂಬಿಕೆ ನನಗಿಲ್ಲ. ಈ ಥರ ನೋಡಿದಾಗ ಮನುಷ್ಯ 84 ಲಕ್ಷ ಜೀವ ರಾಶಿಗಳಿಂದ ನಮ್ಮ ಸಾಂಪ್ರದಾಯಿಕ ತಿಳಿವಳಿಕೆ ಪಡೆದಿದ್ದಾನೆ. ಅನಂತ ಜೀವ ರಾಶಿಗಳಿವೆ ಎಂದು ಹಿರಿಯರು ಗುರುತಿದ್ದಾರೆ. ಜ್ಞಾನದ ಕಾರಣ–ಕ್ಕಾಗಿ ಮನುಷ್ಯ ಉಳಿದ ಜೀವರಾಶಿಗಳಿಗಿಂತ ಬಿನ್ನ. ಮನುಷ್ಯ ಕೂಡ ಆಹಾರ, ನಿದ್ರೆ, ಮೈಥುನ ಗುಣಗಳನ್ನು ಹೊಂದಿದ್ದಾನೆ. ಭಯವೇ ದೇವರ ಮೂಲ ಎಂದು ಪ್ರತಿಪಾಧಿಸಿದ್ದಾರೆ.

ಭಯದಿಂದ ದೇವರ ಸೃಷ್ಠಿಯಾಗಿದೆ. ನನಗೆ ಬಹಳ ದಿನ ದೇವರು ಕಾಡಿದ್ದುಂಟು. ಅದಕ್ಕಿಂತ ಹೆಚ್ಚು ದೆವ್ವ ಕಾಡಿದ್ದುಂಟು. ದೇವರ ಭಯಕ್ಕಿಂತ ಮಾನವ ಕುಲವನ್ನು ಕಾಡಿದ್ದು ದೆವ್ವ. ಈ ದೆವ್ವದ ಉದಾತ್ತ ರೂಪವೇ ದೇವರು. ದೇವರ ಕಚ್ಚಾ ರೂಪವೆ ದೇವರು. ಆ ಭಯದ ಸೃಷ್ಟಿ ಮೊದಲು ದೆವ್ವ. ಮನುಷ್ಯ ವಿಕಾಸವಾದಂತೆ, ಹೊಸ ಆವಿಷ್ಕಾರಗಳ ಹಾಗೆ ಜಗತ್ತು ಅರ್ಥ ಆದಂತೆ ಅದರ ಕ್ರಿಯೆಗಳನ್ನು ಗ್ರಹಿಸಿದಂತೆ ಮನುಷ್ಯನಿಗೆ ದೆವ್ವದ ಭಯ ಕಡಿಮೆಯಾಯಿತು. ಸಾಥ್ವಿಕ ಕಲ್ಪನೆ ಅವನಲ್ಲಿ ಬೆಳೆದು ದೇವರು ಎಂಬ ವಿಶಾಲವಾದ ಶಕ್ತಿಯ ಪರಿಕಲ್ಪನೆಯಾಗಿ ದೇವರು ಸೃಷ್ಟಿಯಾಗಿರಬಹುದು. ಆಸ್ತಿಕರು, ನಾಸ್ತಿಕರು, ಅನಾಸ್ತಿಕರು, ಅಜ್ಞೇಯವಾದಿಗಳು ಇದ್ದಾರೆ. ಈ ನಾಲ್ಕು ಬಗೆಯ ಚಿಂತನೆಗಳು ಪ್ರಚಲಿತದಲ್ಲಿವೆ.

ಉಪನಿಶಕ್ತಾರರಿಗಿಂತ ಒಂದು ಸಾವಿರ ವರ್ಷ ಹಿಂದಿನ ವೈಚಾರಿಕರು ಲೋಕಾಯತರು. ಅವರ ನಾಯಕನೇ ಚಾರ್ವಾಕ. ಅವರೆಲ್ಲ ಪ್ರಾಚೀನ ಕಾಲದ ಕಾಮ್ರೇಡ್ಸ್. ಲೋಕಾಯತರು ಧ್ಯಾನವನ್ನು ಬಿಟ್ಟುಕೊಟ್ಟಿರಲಿಲ್ಲ. ಪ್ರಜ್ಞೆಯ ವಿಸ್ತರಣೆಯನ್ನು ಹೇಳಿದರು. ಆದರ ಧ್ಯಾನಸಕ್ತರಾಗಿದ್ದರು. ಹಿಂದಿನ ಕಾಲದ ವೈಚಾರಿಕರಲ್ಲಿ ಮೇಳೈಸಿದ ವಿಚಾರಗಳು ಧ್ಯಾನ ಮತ್ತು ಪ್ರಜ್ಞೆ, ಧ್ಯಾನ ಮತ್ತು ಪ್ರಜ್ಞೆಯನ್ನು ಸಮ್ಮಿಳನಗೊಳಿಸಿದವನು ಬುದ್ಧ. ವಿಚಾರವಾದಿಗಳು ಪ್ರಜ್ಞೆಯಲ್ಲಿದ್ದು ಧ್ಯಾನವನ್ನು ಬಿಟ್ಟಿದ್ದಾರೆ. ಧಾರ್ಮಿಕರು ಪ್ರಜ್ಞೆ ಬಿಟ್ಟು ಧ್ಯಾನದಲ್ಲಿ ಮುಳುಗಿದ್ದಾರೆ. ಮಠಗಳು, ಮಸೀದಿಗಳು ಧ್ಯಾನವನ್ನು ಬೆಳೆಸುತ್ತಿಲ್ಲ, ಪ್ರಜ್ಞೆಯ ವಲಯವನ್ನೂ ವಿಸ್ತರಿಸುತ್ತಿಲ್ಲ. ಇವು ಮಾನವ ಸಮಾಜಕ್ಕೆ ಕಂಠಕವಾಗಿವೆ.

ಮಣ್ಣ ಬಿಟ್ಟು ಮಡಕೆ ಇಲ್ಲ. ತನ್ನ ಬಿಟ್ಟು ದೇವರಿಲ್ಲ ಎಂದು ಜನಪದರು ಹಿಂದೆಯೇ ಹೇಳಿದ್ದಾರೆ. ಗುಡಿ ಚರ್ಚು ಮಸೀದಿಗಳಲ್ಲಿ ದೇವರಿಲ್ಲ. ಅಲ್ಲಿರುವುದು ಕಲ್ಲು ಮಣ್ಣಿನ ಮೂರ್ತಿಗಳಷ್ಟೆ.

ಈ ನಂಬಿಕೆಗಳನ್ನು ಹೇಗೆ ವಿಕಾರ ಗೊಳಿಸುತ್ತಾರೆ ಸ್ಥಾಪಿತ ಹಿತಾಸಕ್ತಿಗಳು ಎಂದರೆ ಕೋತಿಗಳು ಸಮುದ್ರ ಸೇತುವೆ ಕಟ್ಟಿದರು ಎಂಬುದನ್ನು ನಂಬಿ ಎನ್ನುತ್ತಾರೆ, ಕೃಷ್ಣನಿಗೆ 16 ಸಾವಿರ, ದಶರಥನಿಗೆ 60ಸಾವಿರ, ಪಾರ್ವತಿ ಕೊಳೆಯಿಂದ ಗಣೇಶ, ಇಲಿ ವಾಹನ, ಯಮನಿಗೆ ಕೋಣ, ಶನಿಗೆ ಕೋಣವೇ ವಾಹನ ಎಂಬುದನ್ನು ನಂಬಿ ಎನ್ನುತ್ತಾರೆ. ಒಬ್ಬ ಶ್ರದ್ದಾವಂತ ಆಸ್ತಿಕನಿಗೂ ನಾಸ್ತಿಕಕನಿಗೂ ವ್ಯತ್ಯಾಸ ಕಡಿಮೆ. ಜನರಲ್ಲಿ ಹಣ ಜಾಸ್ತಿ ಆಗುತ್ತಿದೆ. ಕೋಟಿಗಟ್ಟಲೆ ಆಡಂಬರದ ಆಚರಣೆಗಳು, ಅದ್ದೂರಿ ಉತ್ಸವಗಳ ಮೂಲಕ ತಮ್ಮ ಅಹಂಕಾರ ವ್ಯಕ್ತಪಡಿಸುತ್ತಿದ್ದಾರೆ. ದೇವರ ಧರ್ಮದ ಹೆಸರಿನಲ್ಲಿ ಹಣ ಪೋಲು ಮಾಡುತ್ತಿದ್ದಾರೆ. ಅದೇ ಹಣವನ್ನು ಸಮಾಜದ ದೀನ ದಲಿತರು, ದುರ್ಬಲರ ಏಳಿಗೆಗೆ ಬಳಸಬಹುದು. ಆದರೆ ಅವರಿಗೆ ಇನ್ನೂ ಮನಸ್ಸು ಬರುತ್ತಿಲ್ಲ. ಇದರಿಂದಾಗಿ ತಿರುಪತಿ ಹುಂಡಿಗಳು ಉಬ್ಬುತ್ತಲಿವೆ. ಅದೊಂದು ಸ್ವಿಸ್ ಬ್ಯಾಂಕ್ ಇದ್ದಂತೆ. ಅಲ್ಲಿ ಕೋಟ್ಯಾಂತರ ರೂಪಾಯಿಗಳ ಆಭರಣಗಳಿವೆ. ಅದು ಪಾಪದ, ಸಮಾಜವನ್ನು ವಂಚಿಸಿದ, ಸರ್ಕಾರವನ್ನು ವಂಚಿಸಿದ ಹಣ. ಪಾಪದ ಹಣದಲ್ಲಿ ದೇವರಿಗೂ ಒಂದು ಪಾಲು ಕೊಟ್ಟು ಸಮಾಧಾನ ಪಡುವ ಮನಸ್ಸುಗಳು. ದೇವಾಲಯ, ಚರ್ಚು, ಮಸೀದಿಗಳನ್ನು ರಾಷ್ಟ್ರೀಕರಣ ಮಾಡಬೇಕು. ಕೇರಳದ ಪದ್ಮನಾಭ ದೇವಸ್ಥನ ರಾಷ್ಟ್ರಿಕರಣ ಮಾಡಿ ಆ ರಾಜ್ಯವನ್ನು ಅಭಿವೃದ್ಧಿಪಡಿಸಬಹುದು. ಅದು ಜನರ ಸಂಪತ್ತು. ದೇವರ ಸಂಪತ್ತಲ್ಲ. ನಮ್ಮ ಜನ ಹೋರಾಟ ಮಾಡಬೇಕಾದ್ದು ಇದಕ್ಕೆ. ಸಂಪತ್ತುಗಳು ದೇವಾಲಯದಲ್ಲಿ ಕೊಳೆಯಬಾರದು. ಜನತೆಗೆ ಸೇರಬೇಕು. ಜನರ ಸಂಪತ್ತು ಜನರಿಗೇ ಸೇರಬೇಕು. ದೇವಾಲಯಗಳಿಗೆ, ಮಠಗಳಿಗೆ ಸಂಪತ್ತು ಇರಬಾರದು.

ಆರು ವರ್ಷಗಳ ಹಿಂದೆ ಮಡೆ ಸ್ನಾನದ ವಿರುದ್ದ ಹೋರಾಟ ಮಾಡಿದ್ದೇವೆ. ಮೌಢ್ಯ ಪ್ರತಿಬಂಧಕ ಕಾನೂನು ಬರಬೇಕೆಂದು ಎಲ್ಲರ ಒತ್ತಾಸೆಯಾಗಿ ಕಾನೂನು ಬರಬೇಕಿದೆ. ಮು.ಮಂತ್ರಿಗಳು ಗಂಭೀರವಾಗಿ ಇದನ್ನು ಪರಿಗಣಿಸಿದ್ದಾರೆ. ಸಹಜವಾಗಿ ಭಿನ್ನಾಭಿಪ್ರಾಯಗಳು ಬಂದಿವೆ. ಇವುಗಳನ್ನು ಬಗೆ ಹರಿಸಿಕೊಳ್ಳಬೇಕು. ಅನಗತ್ಯ ಭಯ ಬೇಕಿಲ್ಲ. ಜನರನ್ನು ಸುಲಿಗೆಯಿಂದ ಹೊರ ತರಲು ಇಂಥ ಕಾನೂನನ್ನು ಸರ್ಕಾರ ಜಾರಿಗೆ ತರಲೇಬೇಕು. ಕೇಂದ್ರ ಸರ್ಕಾರದ ಬಜೆಟ್ ಗಿಂತ ಹೆಚ್ಚು ಹಣ ಖರ್ಚಾಗುವುದು ಇಂಥ ಆಚರಣೆಗಳಿಗಾಗಿಯೇ. ಮನುಷ್ಯನನ್ನು ಧೈನ್ಯಾವಸ್ಥೆಗೆ ತರುವುದು ಧರ್ಮದ ಕೆಲಸವಲ್ಲ. ದೇವರ ಹೆಸರಿನಲ್ಲಿ ನಡೆಯುತ್ತಿರುವ ಸುಲಿಗೆಯ ವಿರೋಧಿಗಳು ನಾವು. ಧರ್ಮ ದೇವರ ಹೆಸರಿನಲ್ಲಿ ಅಮಾಯಕರ ಶೋಷಣೆ ತಪ್ಪಿಸುವುದು ಸರ್ಕಾರದ ಕರ್ತವ್ಯ. ಮತ ಬ್ಯಾಂ–ಕಿಗೆ ಹಾನಿಯಾಗುತ್ತೆ ಎಂದು ಇದನ್ನು ಕೈಬಿಡುವುದು ಸರಿಯಿಲ್ಲ. ಸತಿ ಸಹಗಮನ ಪದ್ದತಿ ರದ್ದಾಗದಿದ್ದರೆ ಎಷ್ಟೋ ಹೆಣ್ಣುಮಕ್ಕಳು ಸಾಯುತ್ತಿದ್ದರು. ಅಂ–ದೂ ಪುರೋಹಿತ ವರ್ಗ ಅದನ್ನು ವಿರೋಧಿಸಿತ್ತು. ಪೂಜಾರಿ ಪುರೋಹಿತ ವರ್ಗ ಎಂದೂ ಜೀವಪರ ಆಲೋಚನೆಯನ್ನು ಬೆಂಬಲಿಸಿಲ್ಲ. ಅವರಿಗೆ ನಿಜವಾದ ಧರ್ಮ ಶ್ರದ್ದೆಯಿಲ್ಲ. ಶೋಷಣೆಯನ್ನು ತಪ್ಪಿಸಲು ಒಂದು ರಾಜದಂಡ ಬೇಕು. ಇದು ನಾಡಿನ ಜನರ ಹಿತಕ್ಕಾಗಿ ಕಾನೂನು ಬರಬೇಕು. ಯಾವ ಬೆದರಿಕೆಗಳಿಗೂ ಜಗ್ಗದೇ ಕಾನೂನನ್ನು ಜಾರಿಗೆ ತರಬೇಕಾದ್ದು ಸರ್ಕಾರದ ಜವಾಬ್ದಾರಿ. ಇದಕ್ಕೆ ಚ್ಯುತಿ ಬಂದರೆ ಬೀದಿಗಿಳಿದು ಹೋರಾಟ ಅನಿವಾರ್ಯ. ಜನಪರ ಕಾನೂನು ಜಾರಿಗೆ ತರಲು ಪ್ರಜಾಸತ್ತಾತ್ಮಕ ಸರ್ಕಾರಗಳು ಹಿಂದೇಟು ಹಾಕಬಾರದು ಎಂಬುದು ನನ್ನ ವಿನಂತಿ ಮತ್ತು ಆಗ್ರಹ ಎಂದರು.

ಸಿ.ಐ.ಟಿ.ಯು ಬೆಂಗಳೂರು ದಕ್ಷಿಣ ಜಿಲ್ಲಾ ಅಧ್ಯಕ್ಷ ಕೆ.ಪ್ರಕಾಶ್ ಸ್ವಾಗತಿಸಿದರು. ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಿ.ಐ.ಟಿ.ಯು ರಾಜ್ಯಾಧ್ಯಕ್ಷರಾದ ವಿ.ಜಿ.ಕೆ.ನಾಯರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿ.ಐ.ಟಿ.ಯು ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಪ್ರತಾಪ್ ಸಿಂಹ ಮತ್ತು ಸಿ.ಐ.ಟಿ.ಯು ಬೆಂಗಳೂರು ದಕ್ಷಿಣ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎನ್. ಮಂಜುನಾಥ್ ವೇದಿಕೆಯಲ್ಲಿದ್ದರು.



ಶ್ರಮಿಕರ ಸ್ವಾತಂತ್ರ್ಯಕ್ಕಾಗಿ ಸೆಪ್ಟೆಂಬರ್ 2, 2016ರಂದು
17ನೇ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ ಕಾರ್ಮಿಕ ವರ್ಗದ ಮೇಲೆ ದಾಳಿಗಳಿಗೆ ಪ್ರತಿಯಾಗಿ ಕಾರ್ಮಿಕ ವರ್ಗದ ಅತಿ ದೊಡ್ಡ ಅಸ್ತ್ರವನ್ನು ಭಾರತದ ಕಾರ್ಮಿಕ ಆಂದೋಲನ ಒಟ್ಟಾಗಿ ಈ ವಾರ 17ನೆ ಬಾರಿಗೆ ಪ್ರಯೋಗಿಸುತ್ತಿದೆ. ಇದಕ್ಕೆ ದೇಶದೆಲ್ಲೆಡೆಯಂತೆ ರಾಜ್ಯದಲ್ಲೂ ಕಳೆದ ಐದು ತಿಂಗಳಿಂದ ಭರದ ಸಿದ್ಧತೆಗಳು ನಡೆದಿವೆ. ಮುಷ್ಕರದ ದಿನಗಳು ಹತ್ತಿರ ಬರುತ್ತಿದ್ದ ಹಾಗೆ, ಸರಕಾರ, ಮುಷ್ಕರಕ್ಕೆ ಕರೆ ಕೊಟ್ಟಿರುವ ಕೇಂದ್ರ ಕಾರ್ಮಿಕ ಸಂಘಗಳ ಬಳಿ ಚರ್ಚೆ ಮಾಡುವ ಬದಲಿಗೆ ಮುಷ್ಕರಕ್ಕೆ ಕರೆಯನ್ನೇ ಕೊಡದಿರುವ, ಯಾವ ಬೇಡಿಕೆಗಳೂ ಇಲ್ಲದ ಬಿಎಂಎಸ್ ಬಳಿ ಕೇಂದ್ರ ಸರ್ಕಾರ ಚರ್ಚೆ ನಡೆಸುತ್ತಿದೆ. ಈ ದೇಶದಲ್ಲಿ ಅಧಿಕೃತವಾಗಿ 11 ಕೇಂದ್ರ ಕಾರ್ಮಿಕ ಸಂಘಟನೆಗಳಿವೆ. ಈ ಸಂಘಟನೆಗಳಲ್ಲಿ 11 ಕೋಟಿ ಸದಸ್ಯರು ಇದ್ದಾರೆ. ಕೋಟಿಗಟ್ಟಲೆ ಸದಸ್ಯರಿರುವ ಎಲ್ಲಾ ಕಾರ್ಮಿಕ ಸಂಘಟನೆಗಳನ್ನು ಬದಿಗೊತ್ತಿ ಬಿಎಂಎಸ್ ಬಳಿ ಮಾತ್ರವೇ ಚರ್ಚೆ ನಡೆಸುತ್ತಿರುವ ಕೇಂದ್ರ ಸರ್ಕಾರದ ನಡೆಯ ಬಗ್ಗೆ ಮತ್ತು ದೇಶದ ಕಾರ್ಮಿಕರ, ನೌಕರರ ಸ್ವಾಭಿಮಾನವನ್ನು, ಸ್ವಾತಂತ್ರ್ಯವನ್ನು ದೇಶಿ ಮತ್ತು ವಿದೇಶಿ ಬಂಡವಾಳಗಾರರ ಕಾಲಬುಡಕ್ಕೆ ಅಡಮಾನ ಇಡಲು ಕೇಂದ್ರ ಸರ್ಕಾರದ ಏಜೆಂಟ್ ಆಗಿ ಬಿಎಂಎಸ್ ಕೆಲಸ ಮಾಡುತ್ತಿದೆಯೇ ಎಂಬ ಬಗ್ಗೆ ಸಹಜವಾಗಿಯೇ ಸಂದೇಹಗಳು ಎದ್ದಿವೆ.

ಎಸ್. ವರಲಕ್ಷ್ಮಿ

ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ, ಹೆಚ್‌ಎಂಎಸ್, ಟಿಯುಸಿಸಿ, ಎಐಸಿಸಿಟಿಯು ಮತ್ತು ವಿಮಾ, ಬ್ಯಾಂಕ್, ರೈಲ್ವೆ, ರಕ್ಷಣಾ, ರಾಜ್ಯ ಮತ್ತು ಕೇಂದ್ರ ಸೇವೆ ಸೆಪ್ಟಂಬರ್ 2ರಂದು 12 ಬೇಡಿಕೆಗಳಿಗಾಗಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿರುವುದು ತಮಗೆ ಈಗಾಗಲೇ ತಿಳಿದಿದೆ.

1991ರಲ್ಲಿ ನವ ಉದಾರೀಕರಣ ಪ್ರಾರಂಭವಾಗಿ ಇಂದಿಗೆ 25 ವರ್ಷಗಳಾಗಿವೆ. 25 ವರ್ಷಗಳಲ್ಲಿನ ಸಾಧನೆ ಎಂದರೆ ಎರಡು ಭಾರತಗಳ ಸೃಷ್ಟಿ. ಒಂದು ಬಡವರ ಭಾರತ ಮತ್ತೊಂದು ಶ್ರೀಮಂತರ ಭಾರತ. ಹಾಗೆಯೇ ಸಮಾಜದ ಅಭಿವೃದ್ಧಿಗೆ ಮೂಲಾಧಾರವಾಗಿರುವ, ಪ್ರತಿಯೊಂದು ವಸ್ತುವಿನ ಉತ್ಪಾದನೆಗೆ ಕಾರಣವಾಗಿರುವ ದುಡಿಮೆಯ, ದುಡಿಮೆಗಾರರ ಅಪಮೌಲ್ಯೀಕರಣ. 100 ಕೋಟಿ ಇದ್ದವರು ಇಂದು ಲಕ್ಷ ಕೋಟಿ ಒಡೆಯರಾಗಿ ಬದಲಾಗುತ್ತಿದ್ದಾರೆ. 100 ಕೋಟಿಯವರು ಲಕ್ಷ ಕೋಟಿಯವರಾಗಿ ಬದಲಾಗಲಿಕ್ಕೆ ಸರ್ಕಾರದ ಧೋರಣೆಗಳೇ ಬದಲಾದವು. ಈ ಧೋರಣೆಗಳ ವಿರುದ್ಧ ಹೋರಾಟವೇ ಸೆಪ್ಟಂಬರ್ 2ರ ಮುಷ್ಕರ.

ವ್ಯಾಪಕ ಪ್ರಚಾರ :

ಧೋರಣೆಗಳ ವಿರುದ್ಧದ ಹೋರಾಟ ಇದಾಗಿರುವುದರಿಂದ ಧೋರಣೆಗಳನ್ನು ಜನಸಾಮಾನ್ಯರಿಗೆ ಅರ್ಥ ಮಾಡಿಸುವುದು ಇಂದಿನ ತುರ್ತಾಗಿದೆ. 2016 ಮಾರ್ಚ್ 30ರಂದು ನವದೆಹಲಿಯ ಮಾವಳಂಕರ್ ಹಾಲ್‌ನಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟೀ ಸಮಾವೇಶವನ್ನು ನಡೆಸಿ ಮುಷ್ಕರಕ್ಕೆ ಕರೆಯನ್ನು ಕೊಡಲಾಗಿದೆ. ಅದರ ಪ್ರಕಾರ ಕರ್ನಾಟಕದಲ್ಲಿ ಇದುವರೆಗೂ ಸುಮಾರು 10 ಬಾರಿ ಜಂಟಿ ಸಭೆಗಳು ನಡೆದಿವೆ.

ಜೂನ್ 10ರಂದು ಬೆಂಗಳೂರಿನ ವರದಾಚಾರ್ ಮೆಮೊರಿಯಲ್ ಹಾಲ್‌ನಲ್ಲಿ ಸುಮಾರು 500 ಪ್ರಮುಖ ಕಾರ್ಯಕರ್ತರ ಜಂಟಿ ಸಮಾವೇಶವನ್ನು ನಡೆಸಿ ಹಲವು ಕಾರ್ಯಕ್ರಮಗಳಿಗೆ ಕರೆಯನ್ನು ಕೊಟ್ಟಿದೆ. ಅದರ ನಂತರ ಉಡುಪಿ, ದಕ್ಷಿಣ ಕನ್ನಡ, ದಾವಣಗೆರೆ, ಗುಲ್ಬರ್ಗ, ಬಳ್ಳಾರಿ, ಬಿಜಾಪುರ, ಮೈಸೂರು, ತುಮಕೂರು, ಕೋಲಾರ, ಧಾರವಾಡ, ಶಿವಮೊಗ್ಗ, ಚಿತ್ರದುರ್ಗ, ಬೆಂಗಳೂರು, ಜಿಲ್ಲೆಗಳಲ್ಲಿ ಜಂಟಿ ಸಭೆಗಳು ಜಿಲ್ಲಾ ಮಟ್ಟದ ಸಮಾವೇಶಗಳು ನಡೆದಿವೆ.

ಕ್ವಿಟ್ ಇಂಡಿಯಾ ಚಳುವಳಿಯ ಭಾಗವಾಗಿ ಆಗಸ್ಟ್ 9ರಂದು ರಾಜ್ಯದ ಹಲವು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಸಭೆಗಳು ನಡೆದಿವೆ.

ಮುಷ್ಕರದ ಭಾಗವಾದ ಸಿಐಟಿಯುವಿನ ಪಂಚಾಯತಿ, ವಾರ್ಡ್, ಸ್ಥಳೀಯ ಮತ್ತು ಹೋಬಳಿ ಮಟ್ಟದ ಸಮಾವೇಶಗಳು ಸುಮಾರು 194 ಕಡೆ ನಡೆದಿವೆ. 84 ತಾಲೂಕು ಸಮಾವೇಶಗಳು ನಡೆದಿವೆ. ಈಗಾಗಲೇ ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಬೆಳಗಾಂ, ಬಳ್ಳಾರಿ, ಬಿಜಾಪುರ, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಕಲಬುರಗಿ, ಹಾಸನ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ತುಮಕೂರು, ಉತ್ತರಕನ್ನಡ, ಉಡುಪಿ, ಚಿತ್ರದುರ್ಗ, ಬೀದರ್, ಯಾದಗಿರಿ ಜಿಲ್ಲೆಗಳಲ್ಲಿ ಜಿಲ್ಲಾ ಸಮ್ಮೇಳನಗಳು ನಡೆದಿವೆ. ಈ ಸಮ್ಮೇಳನಗಳ ತಯಾರಿಯ ಭಾಗವಾಗಿ ಕೆಳಹಂತದ ಸಮಿತಿಗಳ ಸಮ್ಮೇಳನಗಳು ಬಹಿರಂಗ, ರ‍್ಯಾಲಿಗಳ ಮುಖಾಂತರ ನಡೆಸಲಾಗಿದೆ. ವ್ಯಾಪಕವಾಗಿ ಕರಪತ್ರಗಳು, ಪೋಸ್ಟರ್‌ಗಳು ಗೋಡೆ ಬರಹಗಳು, ಪತ್ರಿಕಾ ಹೇಳಿಕೆಗಳು ಪತ್ರಿಕಾ ಗೋಷ್ಠಿಗಳನ್ನು ನಡೆಸಲಾಗಿದೆ.

ಈ ಹಂತದ ಸಮ್ಮೇಳನಗಳನ್ನು ನಡೆಸುವಾಗ ತಾಲೂಕು ಮಟ್ಟದಲ್ಲಿ ವಿಶೇಷ ಜಾಥಾಗಳನ್ನು ಕೆಲವೆಡೆ ಸಂಘಟಿಸಲಾಗಿದೆ. ಇನ್ನು ಕೆಲವೆಡೆ ಜಿಲ್ಲಾ ನಾಯಕರ ತಂಡಗಳು ಗ್ರಾಮ ಪಂಚಾಯ್ತಿ ಮಟ್ಟದ ವರೆಗೆ ಭೇಟಿ ಕೊಟ್ಟು ಕಾರ್ಯಕರ್ತರನ್ನು ಹುರಿದುಂಬಿಸಲಾಗುತ್ತಿದೆ, ಮಾತ್ರವಲ್ಲದೆ, ಸೆಪ್ಟಂಬರ್ 2ರ ಮುಷ್ಕರದ ಕುರಿತು ವಿಶೇಷ ನಿರ್ಣಯಗಳನ್ನು ಮಂಡಿಸಿ ಅದರ ಮೇಲೆ ವಿಶೇಷವಾಗಿ ಸಮ್ಮೇಳನಗಳು ಚರ್ಚೆಗಳನ್ನು ನಡೆಸಲಾಗಿದೆ.

ಸಿಐಟಿಯುಗೆ ಸಂಯೋಜನೆಯಾಗಿರುವ ಆಟೋಮೊಬೈಲ್ ಎಂಜಿನಿಯರಿಂಗ್ ಕಾರ್ಮಿಕ ಸಂಘಗಳು, ರೆಡಿಮಿಕ್ಸ್, ಟೆಕ್ಸ್‌ಟೈಲ್ ಸಂಬಂಧಿತ, ಸಾರ್ವಜನಿಕ ಕೈಗಾರಿಕೆಗಳು, ಏರ್ ಇಂಡಿಯಾ ಗುತ್ತಿಗೆ ಕಾರ್ಮಿಕರು, ಸಿಮೆಂಟ್, ವಿದ್ಯುತ್, ಆಹಾರ ಉತ್ಪಾದನೆ ಮಾಡುವ ಕಾರ್ಮಿಕ ಸಂಘಗಳು, ಘನ ಕೈಗಾರಿಕೆಗಳು, ಟೈರ್ಸ್ ಉತ್ಪಾದಿಸುವ ಕಾರ್ಮಿಕ ಸಂಘಗಳು, ಅಂಗನವಾಡಿ, ಬಿಸಿಯೂಟ, ಬೀಡಿ, ಆಶಾ, ಹಮಾಲಿ, ಬಿಎಸ್‌ಎನ್‌ಎಲ್ ನಾನ್ ಪರ್ಮನೆಂಟ್, ಗ್ರಾಮ ಪಂಚಾಯತಿ, ಮುನ್ಸಿಪಲ್ ಪೌರ ಕಾರ್ಮಿಕರು, ಕಟ್ಟಡ ಕಾರ್ಮಿಕರು ತಮ್ಮ ಆಡಳಿತ ಸಂಸ್ಥೆಗಳಿಗೆ ಮುಷ್ಕರದ ನೋಟೀಸುಗಳನ್ನು ನೀಡಿದ್ದಾರೆ.

ಹಾಗೆಯೇ ಇತರೆ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಬ್ಯಾಂಕ್ ವಿಭಾಗದಲ್ಲಿರುವ 9 ಕಾರ್ಮಿಕ ಸಂಘಗಳು, ರಕ್ಷಣಾ ವಿಭಾಗದಲ್ಲಿರುವ 12 ಘಟಕಗಳು, ವಿಮೆಯಲ್ಲಿರುವ 3 ಮತ್ತು 4ನೇ ವರ್ಗದ ನೌಕರರ ಸಂಘಟನೆಗಳು, ಸಾಮಾನ್ಯ ವಿಮೆಯಲ್ಲಿ ಕ್ಲಾಸ್ –1 ಅಧಿಕಾರಿಗಳಿಂದ ಕ್ಲಾಸ್ – 4ರತನಕ ಎಲ್ಲಾ ವಿಭಾಗಗಳು, ಬಿಎಸ್‌ಎನ್‌ಎಲ್,. ಕೇಂದ್ರ ಸರ್ಕಾರ ನೌಕರರ ಸಂಘಟನೆಗಳಾದ ಅಂಚೆ, ಆದಾಯ ಇಲಾಖೆ, ಆರೋಗ್ಯ, ಅಕೌಟೆಂಟ್ ಜನರಲ್, ನೀರಾವರಿ, ಹವಾಮಾನ, ಗಣತಿ ಮುಂತಾದ ಇಲಾಖೆಗಳ ನೌಕರರ ಸಂಘಟನೆಗಳು, ಪ್ರಮುಖವಾಗಿ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸಂಘಟನೆಗಳು ಈಗಾಗಲೇ ಮುಷ್ಕರದ ತಿಳುವಳಿಕೆ ಪತ್ರಗಳನ್ನು ನೀಡಿವೆ.

ಪ್ರತಿ ಜಿಲ್ಲೆಯಲ್ಲಿ ಆಯಾಯ ತಾಲೂಕು ಸಮಿತಿಗಳ ಹೆಸರಿನಲ್ಲಿ ಮುಷ್ಕರವನ್ನು ಬೆಂಬಲಿಸಿ ಕರಪತ್ರಗಳನ್ನು, ಪೋಸ್ಟರಗಳನ್ನು ಮುದ್ರಿಸಲಾಗುತ್ತಿದೆ. ಉದಾಹರಣೆಗೆ ಜೆಸಿಟಿಯು ರಾಜ್ಯ ಸಮಿತಿಯಿಂದ 1 ಲಕ್ಷ ಕರಪತ್ರಗಳು, 25 ಸಾವಿರ ಪೋಸ್ಟರ್‌ಗಳು ಹಾಗೆಯೇ ಸಿಐಟಿಯು ರಾಜ್ಯ ಸಮಿತಿಯಿಂದ 12 ಬೇಡಿಕೆಗಳ ಕುರಿತ ಸಿಐಟಿಯು ಕೇಂದ್ರ ಸಮಿತಿಯಿಂದ ಬಂದ ಲೇಖನಗಳನ್ನು ಕನ್ನಡಕ್ಕೆ ಭಾಷಾಂತರಿಸಿ 25 ಸಾವಿರ ಪುಸ್ತಕಗಳು, ರಸ್ತೆ ಸುರಕ್ಷತಾ ಕಾಯ್ದೆಯ ಕುರಿತು 20 ಸಾವಿರ ಪುಸ್ತಕಗಳು, ನಿರುದ್ಯೋಗ ಕುರಿತು 5 ಸಾವಿರ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ವಿವಿಧ ವಿಚಾರಗಳ ಕುರಿತು ವಿಚಾರ ಸಂಕಿರಣಗಳನ್ನು ಸಂಘಟಿಸಿದೆ.

ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯಿಂದ 2 ಲಕ್ಷ ಕರಪತ್ರ, 800 ಕಾರ್ಖಾನೆಗಳಿಗೆ ಕರಪತ್ರ ಹಂಚಿಕೆ, 8 ಕಡೆ ಬಹಿರಂಗ ಸಭೆಗಳು, ಹಾಗೆಯೇ ಬೆಂಗಳೂರು ದಕ್ಷಿಣದಿಂದ 1 ಲಕ್ಷ ಕರಪತ್ರ, ಬಹಿರಂಗ ಸಭೆಗಳು ಮನೆ ಮನೆ ಕರಪತ್ರ ಹಂಚುವ ಕಾರ್ಯಕ್ರಮಗಳು, ಇಡೀ ಬೆಂಗಳೂರಿನ 4 ಜಿಲ್ಲೆಗಳಲ್ಲಿ ಪಂಜಿನ ಮೆರವಣಿಗೆಗಳು, ಬೈಕ್ ರ‍್ಯಾಲಿಗಳು, ಬೀದಿ ಬದಿ ಸಭೆಗಳನ್ನು ಆಯೋಜಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೆಸಿಟಿಯುವಿನಿಂದ ಇಡೀ ಜಿಲ್ಲೆಯಲ್ಲಿ ವಾಹನ ಜಾಥಾಗಳನ್ನು, 5 ತಾಲೂಕುಗಳಲ್ಲಿ ಬೈಕ್ ಜಾಥಾಗಳನ್ನು, ಗ್ರಾಮಾಂತರ ಪ್ರದೇಶದಲ್ಲಿ ಕಾಲ್ನಡಿಗೆ ಜಾಥಾಗಳನ್ನು ನಡೆಸಲಾಗುತ್ತಿದೆ. ಹೀಗೆ ಎಲ್ಲಾ ಜಿಲ್ಲೆಗಳಲ್ಲಿಯೂ ಬೈಕ್ ಜಾಥಾಗಳು, ಕಾಲ್ನಡಿಗೆ ಜಾಥಾಗಳು ಮನೆ ಮನೆ ಪ್ರಚಾರ, ಬೀದಿ ಬದಿ ಸಭೆಗಳು, ಪಂಜಿನ ಮೆರವಣಿಗೆಗಳನ್ನು ನಡೆಸಲಾಗುತ್ತಿದೆ.

ರಾಜ್ಯದಾದ್ಯಂತ ಈಗಾಗಲೇ ಸುಮಾರು 10 ಲಕ್ಷ ಕರಪತ್ರಗಳು, 1 ಲಕ್ಷಕ್ಕೂ ಹೆಚ್ಚು ಪೋಸ್ಟರ್‌ಗಳನ್ನು ಮುದ್ರಿಸಿ ವ್ಯಾಪಕ ಪ್ರಚಾರ ನಡೆಸಲಾಗುತ್ತಿದೆ. ಇದರೊಟ್ಟಿಗೆ ವಿಮಾ ನೌಕರರು, ಬ್ಯಾಂಕ್ ನೌಕರರು, ಎಲ್‌ಐಸಿ ವಿಮಾ ಏಜೆಂಟ್ ಸಂಘಟನೆಗಳು, ಕೇಂದ್ರ ಸೇವೆ, ಬಿಎಸ್‌ಎನ್‌ಎಲ್, ರಕ್ಷಣಾ, ರೈಲ್ವೆ ಮುಂತಾದ ಸಂಘಟನೆಗಳು ಸಾವಿರಾರು ಕರಪತ್ರಗಳನ್ನು, ಪೋಸ್ಟರ್‌ಗಳನ್ನು, ಕಿರುಹೊತ್ತಿಗೆಗಳು, ವಿವಿಧ ಹಂತದ ಕಾರ್ಯಕರ್ತರ ಸಭೆಗಳನ್ನು ಆಯೋಜಿಸಿ ಮುಷ್ಕರದ ಸಿದ್ಧತೆಯನ್ನು ನಡೆಸಲಾಗುತ್ತಿದೆ.

ಮುಷ್ಕರಕ್ಕೆ ತಡೆಯೊಡ್ಡುವ ಪ್ರಯತ್ನಗಳು:

ಸ್ವಾತಂತ್ರ್ಯ ಪೂರ್ವದಿಂದಲೂ ಸಾಮಾನ್ಯ ಜನತೆ ಧ್ವನಿಗಳನ್ನು ಎತ್ತಿದಾಗ ಅದನ್ನು ಮುಗಿಸುವುದೇ ಬಂಡವಾಳ, ಪಾಳೇಗಾರಿ ಮತ್ತು ಭೂಮಾಲಿಕ ಸಾಮಾಜಿಕ ವ್ಯವಸ್ಥೆಯ ಗುರಿ. ಇದು ಈ ದೇಶದ ಯಾವುದೇ ಚಳುವಳಿಗಳಿಗೂ ಹೊಸದಲ್ಲ.

ಹಾಗೆಯೇ ಸೆಪ್ಟಂಬರ್ 2ರ ಮುಷ್ಕರವನ್ನು ಕೆಲವು ರಾಜಕೀಯ ಪ್ರೇರಿತ ಎನ್ನುತ್ತಿದ್ದಾರೆ. ರಾಜಕೀಯ ಪ್ರೇರಿತ ಎಂದರೆ ಎಡಪಂಥೀಯ ಗುಂಪುಗಳು ಮಾತ್ರವೇ ನಡೆಸುತ್ತಿರುವ ಮುಷ್ಕರವೇ ಇದು? ಅಲ್ಲ. ಬಲಪಂಥೀಯ ಮತ್ತು ಎಡಪಂಥೀಯ, ಸುಧಾರಣಾವಾದದ ಎಲ್ಲಾ ಕಾರ್ಮಿಕ ಸಂಘಗಳು ಸೇರಿ ಕರೆ ಕೊಟ್ಟಿರುವ ಮುಷ್ಕರ ಇದು.

2015ರ ಮುಷ್ಕರ 2 ದಿನ ಇದ್ದ ಹಾಗೆ ಬಿಎಂಎಸ್ ಮುಷ್ಕರದಿಂದ ಹಿಂದೆ ಸರಿದರೂ ಅದರ ಸದಸ್ಯರು ಹಿಂದೆ ಸರಿಯದೇ ಮುಷ್ಕರದಲ್ಲಿ ಭಾಗಿಯಾದರು. 15 ಕೋಟಿ ಕಾರ್ಮಿಕರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದರೂ ಕೇಂದ್ರ ಸರ್ಕಾರ ಬೇಡಿಕೆಗಳ ಕುರಿತಂತೆ ಸಕಾರಾತ್ಮಕವಾಗಿ ಸ್ಪಂದಿಸುವ ಬದಲಿಗೆ ದಾಳಿಗಳನ್ನು ಮತ್ತಷ್ಟು ತೀವ್ರಗೊಳಿಸಿತು. ಕಾರ್ಮಿಕರಿಗೆ ಮತ್ತು ನೌಕರರಿಗೆ ಇರುವ ಹಕ್ಕುಗಳು ಒಂದೊಂದೇ ಸಂಪೂರ್ಣವಾಗಿ ಕಳಚಿಬೀಳುತ್ತಿರುವುದನ್ನು, ಸಾರ್ವಜನಿಕ ಕೈಗಾರಿಕೆಗಳು, ಆರ್ಥಿಕ ರಂಗಗಳ:ಲ್ಲಿ ವಿದೇಶಿ ಮತ್ತು ಖಾಸಗಿ ಬಂಡವಾಳ ಬರುತ್ತಿರುವುದರಿಂದ ದೇಶದ ಸಾರ್ವಭೌಮತೆಗೆ ಬರುವ ಅಪಾಯವನ್ನು ಅರಿತು ದೇಶಪ್ರೇಮಿ ಕಾರ್ಮಿಕ ಸಂಘಟನೆಗಳು ಮತ್ತೆ ಒಂದುಗೂಡಿ ಮಾರ್ಚ್ 30, 2016ರಂದು ದೆಹಲಿಯಲ್ಲಿ ಸಮಾವೇಶ ನಡೆಸಲು ತೀರ್ಮಾನಿಸಿದವು. ಈ ತೀರ್ಮಾನದ ಭಾಗವಾಗಿದ್ದ ಬಿಎಂಎಸ್‌ಗೆ ನಾಗಪುರ್‌ನಿಂದ ಬುಲಾವ್‌ನಿಂದಾಗಿ ಬಿಎಂಎಸ್ ತಾವು ಕಾರ್ಮಿಕ ಸಂಘಟನೆಗಳ ಭಾಗವಾಗಿರಲು ಮತ್ತು ಮುಷ್ಕರದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ ಎಂದು ನೇರವಾಗಿ ತಿಳಿಸುವ ಬದಲಿಗೆ "ಕೇಂದ್ರ ಸರ್ಕಾರ ಮಾತುಕತೆ ನಡೆಸಲು ಸಿದ್ಧವಿದೆ, ಆದ್ದರಿಂದ ಮುಷ್ಕರದ ಪ್ರಯತ್ನಗಳು ರಾಜಕೀಯ ಪ್ರೇರಿತ" ಎಂದು ಹೇಳಿ ಸಮಿತಿಯಿಂದ ಹೊರಗುಳಿದರು. ಕಾರ್ಮಿಕ ಕಾನೂನುಗಳ ಬದಲಾವಣೆ, ಗುತ್ತಿಗೆ ಕಾರ್ಮಿಕ ಪದ್ಧತಿಗೆ ತರುತ್ತಿರುವ ಬದಲಾವಣೆಗಳು ಬಿಎಂಎಸ್ ಅಡಿಯಲ್ಲಿರುವ ಸದಸ್ಯರಿಗೆ ಅನ್ವಯವಾಗುವುದಿಲ್ಲವೆ? ಆ ಸದಸ್ಯರಿಗೆ ಇವರ ಉತ್ತರ ಏನು?

ಮುಷ್ಕರದ ದಿನಗಳು ಹತ್ತಿರ ಬರುತ್ತಿದ್ದ ಹಾಗೆ ಮುಷ್ಕರಕ್ಕೆ ಕರೆ ಕೊಟ್ಟಿರುವ ಕಾರ್ಮಿಕ ಸಂಘಗಳ ಬಳಿ ಚರ್ಚೆ ಮಾಡುವ ಬದಲಿಗೆ ಮುಷ್ಕರಕ್ಕೆ ಕರೆಯನ್ನೇ ಕೊಡದಿರುವ, ಯಾವ ಬೇಡಿಕೆಗಳೂ ಇಲ್ಲದ ಬಿಎಂಎಸ್ ಬಳಿ ಕೇಂದ್ರ ಸರ್ಕಾರ ಚರ್ಚೆ ನಡೆಸುತ್ತಿದೆ. ಈ ದೇಶದಲ್ಲಿ ಅಧಿಕೃತವಾಗಿ 11 ಕೇಂದ್ರ ಕಾರ್ಮಿಕ ಸಂಘಟನೆಗಳಿವೆ. ಈ ಸಂಘಟನೆಗಳಲ್ಲಿ 11 ಕೋಟಿ ಸದಸ್ಯರು ಇದ್ದಾರೆ. ಕೋಟಿಗಟ್ಟಲೆ ಸದಸ್ಯರಿರುವ ಎಲ್ಲಾ ಕಾರ್ಮಿಕ ಸಂಘಟನೆಗಳನ್ನು ಬದಿಗೊತ್ತಿ ಬಿಎಂಎಸ್ ಬಳಿ ಮಾತ್ರವೇ ಚರ್ಚೆ ನಡೆಸುತ್ತಿರುವ ಕೇಂದ್ರ ಸರ್ಕಾರದ ನಡೆ ಪಾರದರ್ಶಕವೇ ಅಥವಾ ಪ್ರಜಾಸತ್ತಾತ್ಮಕವಾಗಿದೆಯೇ ಎಂಬ ಪ್ರಶ್ನೆಗಳು ಹೇಳುತ್ತಿವೆ. ದೇಶದ ಕಾರ್ಮಿಕರ, ನೌಕರರ ಸ್ವಾಭಿಮಾನವನ್ನು, ಸ್ವಾತಂತ್ರ್ಯವನ್ನು ದೇಶಿ ಮತ್ತು ವಿದೇಶಿ ಬಂಡವಾಳಗಾರರ ಕಾಲಬುಡಕ್ಕೆ ಅಡಮಾನ ಇಡಲು ಕೇಂದ್ರ ಸರ್ಕಾರದ ಏಜೆಂಟ್ ಆಗಿ ಬಿಎಂಎಸ್ ಕೆಲಸ ಮಾಡುತ್ತಿದೆಯೇ ಎಂಬ ಅನುಮಾನ ಬಾರದೇ ಇರಲಾರದು.

ಮಾಧ್ಯಮಗಳಲ್ಲಿ ಕೂಡಾ ಇಂದು ದೇಶ ವಿಭಜನೆ, ಜನರ ಅಶಾಂತಿಯನ್ನು ಕೆದಕುವ, ದುಡಿಯುವ ಜನರ ಐಕ್ಯತೆಯನ್ನು ಮುರಿಯುವ ವಿಚಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಮತ್ತು ಪ್ರಾಮುಖ್ಯತೆ ಕೊಡಲಾಗುತ್ತಿದೆ. ವಿದೇಶಿ ಬಂಡವಾಳದ ಪರವಾಗಿ, ಉದಾರೀಕರಣದ ನೀತಿಗಳನ್ನು ವಿಜೃಂಭಿಸಲಾಗುತ್ತಿದೆ. ಯಾವುದೇ ವಿಭಾಗದ ನೌಕರರ – ಕಾರ್ಮಿಕ ಚಳುವಳಿಗಳ ಹೋರಾಟಗಳನ್ನು ಆರ್ಥಿಕ ಪ್ರಶ್ನೆಗಳಿಗೆ ಮಾತ್ರ ಸೀಮಿತ ಮಾಡಿ ನೋಡಲಾಗುತ್ತಿದೆ. ಏಕೆಂದರೆ ಇಂದಿನ ಪತ್ರಿಕೆಗಳ ಮಾಲೀಕರು ಕೂಡಾ ದೊಡ್ಡ ಬಂಡವಾಳಗಾರರು ಎಂಬುದನ್ನು ನಾವು ಮರೆಯುವಂತಿಲ್ಲ.

ರಾಜ್ಯದಲ್ಲಿ ಈಗಾಗಲೇ, ಅಡಿಕೆ, ತೆಂಗು, ನೀರಾವರಿ ಪ್ರಶ್ನೆಗಳ ಮೇಲೆ ರೈತರು, ವೇತನ ತಾರತಮ್ಯ ವಿರೋಧಿಸಿ ರಾಜ್ಯ ಸರ್ಕಾರಿ ನೌಕರರು, ಖಾಸಗೀಕರಣದ ವಿರುದ್ಧ ಬ್ಯಾಂಕ್ ನೌಕರರು ಈಗಾಗಲೇ ಹೋರಾಟ ನಡೆಸುತ್ತಿದ್ದಾರೆ, 2–3 ಸುತ್ತಿನ ಬಂದ್‌ಗಳನ್ನು ರಾಜ್ಯದಲ್ಲಿ ನಡೆಸಲಾಗಿದೆ.

ಇಂದು ಸಿಐಟಿಯುವನ್ನೊಳಗೊಂಡಂತೆ ಇತರೆ ಜೆಸಿಟಿಯುವಿನ ಸಂಘಟನೆಗಳು, ರೈತ ಸಂಘಟನೆಗಳು, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳು ಸೇರಿ ಈ ಮುಷ್ಕರ ಯಶಸ್ಸು ಮಾಡಲು ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಹಾಗೆಯೇ ರಾಜ್ಯದ ಮತ್ತು ದೇಶದ ಎದೆಪಕ್ಷಗಳು ಕೂಡಾ ಈ ಮುಷ್ಕರನವನ್ನು ಬೆಂಬಲಿಸಿವೆ.

ರಾಜ್ಯದಲ್ಲಿಟ್ಟಿರುವ 18 ಬೇಡಿಕೆಗಳು ಒಂದು ವಿಭಾಗದ ಬೇಡಿಕೆಗಳಲ್ಲ, ರಾಜ್ಯದ 6 ಕೋಟಿ 30 ಲಕ್ಷ ಜನರ ಬೇಡಿಕೆಗಳಾಗಿರುವುದರಿಂದ ಸಂಘ, ಪಕ್ಷಬೇಧಗಳನ್ನು ಮರೆತು ರಾಜ್ಯದ ಜನತೆಯ ಮತ್ತು ದೇಶದ ಒಟ್ಟು ಜನತೆಯ ಅಭಿವೃದ್ಧಿಯನ್ನು ಸಾಧಿಸೋಣ. ■

ಕರ್ನಾಟಕದಲ್ಲಿ ಮಹಿಳೆಯರ ಪರಿಸ್ಥಿತಿ



ಮಹಿಳಾ ಪುರವಾಣಿ

ಕೆ. ನೀಲಾ

ಜನವಾದಿ ಮಹಿಳಾ ಸಂಘಟನೆಯ ಒಂಬತ್ತನೆಯ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದ ಮಹಿಳೆಯರ ಪರಿಸ್ಥಿತಿಯಲ್ಲಿ ಆದ ಹೊಸ ಬೆಳವಣಿಗೆಗಳ, ಬದಲಾವಣೆಗಳ ಬಗ್ಗೆ ಬರೆಯುತ್ತಾರೆ ಪ್ರಸಿದ್ಧ ಲೇಖಕಿ ಮತ್ತು ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕೆ. ನೀಲಾ

ನವಉದಾರವಾದ, ಸಾಮ್ರಾಜ್ಯಶಾಹಿ ಮತ್ತು ಕೋಮುವಾದವು ಒಟ್ಟೈಸಿಕೊಂಡು ಫ್ಯಾಸಿಜಂ ರೂಪದಲ್ಲಿ ಜಗತ್ತಿನಾದ್ಯಂತ ಮತ್ತು ದೇಶದಾದ್ಯಂತ ಮಹಿಳೆಯರ ಬದುಕನ್ನು ನುಂಗಿ ನೊಣೆಯುತ್ತಿರುವ ಬಾರ್ಬರಿಕ ಗಳಿಗೆಯ ಹೊತ್ತಿನಲ್ಲಿ ನಮ್ಮ ಸಂಘಟನೆಯ ಸಮ್ಮೇಳನ ನಡೆಯುತ್ತಿದೆ. ದಲಿತರು, ಅಲ್ಪಸಂಖ್ಯಾತರು, ಶ್ರಮಿಕ ಮಹಿಳೆಯರು ಭಯದ ಬದುಕು ದೂಡುತ್ತಿರುವವರು. ಈ ಪ್ರಶ್ನೆಗಳೊಂದಿಗೆ ಕಟ್ಟಕಡೆಯ ಮಹಿಳೆಯರ ಹಕ್ಕಿನ ಪ್ರಶ್ನೆಯನ್ನು ಎಂದಿನಂತೆ ಆದ್ಯತೆಯಾಗಿ ಕೈಗೆತ್ತಿಕೊಳ್ಳಬೇಕಿದೆ. ಆದಿವಾಸಿ, ಬುಡಕಟ್ಟು, ಅಲೆಮಾರಿ ಮತ್ತು ಹಿಜಡಾ ಲೋಕವು ತಲ್ಲಣದ ದಿನಗಳನ್ನು ದೂಡುತ್ತಿದೆ. ತುಂಬಾ ಆತಂಕದ ಸಂಗತಿಗಳನ್ನು ನಾವಿಲ್ಲಿ ಚರ್ಚಿಸಲೇಬೇಕಿದೆ.

ಅತ್ಯಾಚಾರ, ದೌರ್ಜನ್ಯಗಳು, ಮರ್ಯಾದೆಗೇಡು ಹತ್ಯೆಗಳು:

ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರ ಮೇಲೆ ನಡೆದ ಅತ್ಯಾಚಾರ ದೌರ್ಜನ್ಯದ ಪಟ್ಟಿ ಬಹಳ ದೊಡ್ಡದಿದೆ. ಧರ್ಮ ದೈವದ ಹೆಸರಿನಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ-ಅತ್ಯಾಚಾರಗಳು ಘಟಿಸಿವೆ. ಕರ್ನಾಟಕದಲ್ಲಿನ ರಾಮಚಂದ್ರಾಪುರ ಮಠದ ಸ್ವಾಮಿ ಎಂದು ಕರೆಸಿಕೊಳ್ಳುವ ವ್ಯಕ್ತಿಯು ರಾಮಕಥಾ ಗಾಯಕಿಯ ಮೇಲೆ ನಿರಂತರ ಅತ್ಯಾಚಾರ ನಡೆಸುತ್ತಿರುವುದಾಗಿ ದೂರು ದಾಖಲಾಗಿತ್ತು. ಯಾವುದೇ ರೀತಿಯ ವಿಚಾರಣೆಯನ್ನೇ ಆರೋಪಿಯನ್ನು ಖುಲಾಸೆ ಮಾಡಿದ ಕ್ರಮದಿಂದ ನ್ಯಾಯ ನಮ್ಮಿಂದ ಗಾವುದ ದೂರವಾಗಿ ಇಂದಿಗೂ ಮರಿಚಿಕೆಯೇ ಆಗಿದೆ. ಧರ್ಮಸ್ಥಳ ಮತ್ತು ಉಜಿರೆ ಎಂಬ ಎರಡು ಹಳ್ಳಿಗಳ ವ್ಯಾಪ್ತಿಯಲ್ಲಿಯೇ ನೂರಾರು ಅಸಹಜ ಸಾವುಗಳು ಘಟಿಸಿದ ವರದಿ ಪೋಲಿಸ ಇಲಾಖೆಯಿಂದಲೇ ಬಂದಿದೆ. ಇವುಗಳಲ್ಲಿ ಒಂದಾದ ಸೌಜನ್ಯ ಕೊಲೆಯಲ್ಲಿ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಸಂಬಂಧಿಕರ ಕೈವಾಡವಿದೆ ಎಂದು ಶಂಕಿಸಿ ತೀವ್ರ ಹೋರಾಟಗಳೇ ನಡೆದವು. ಸಾವಿರಾರು ಜನರು ರಸ್ತೆಗಿಳಿದು ಹೋರಾಡಿದರೂ ಅಂತಿಮವಾಗಿ ಸಿಬಿಐ ವರದಿಯು ಆರೋಪಿಗಳನ್ನು ನಿರಪರಾಧಿಯೆಂದು ಕ್ಲೀನ್ ಚಿಟ್ ನೀಡಿದೆ. ಕರ್ನಾಟಕದಲ್ಲಿ ಅದರಲ್ಲಿಯೂ ಮಂಡ್ಯ ಮೈಸೂರು ಹಾಸನ ಪ್ರದೇಶದಲ್ಲಿ ಮರ್ಯಾದೆಗೇಡು ಹತ್ಯೆಗಳು ಕ್ರೌರ್ಯದ ಸ್ವರೂಪ ಪಡೆಯುತ್ತಿವೆ. ಗಟ್ಟಿಗೊಳ್ಳುತ್ತಿರುವ ಪಾಳೇಗಾರಿ ನಂಬಿಕೆಗಳು ಜಾತಿ ಅಸ್ಮಿತೆಯನ್ನು ಕ್ರೂರವಾಗಿಸುತ್ತಿವೆ. ತಂದೆ-ಯೇ ತನ್ನ ಮಗಳು ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಂಡ ಕೋಪಕ್ಕೆ ಕುತ್ತಿಗೆಯ ಮೇಲೆ ಕಾಲಿಟ್ಟು ಹತ್ಯೆಗೈದು ಪೋಲಿಸರಿಗೆ ಹೇಳುತ್ತಾನೆ ಎಂದರೆ ಹೆತ್ತೊಡಲಿನಲ್ಲಿಯೂ ಎಂತಹ ಕ್ರೌರ್ಯ ಹುಟ್ಟು ಹಾಕಿದೆ ಈ ಜಾತಿ ತಾರತಮ್ಯ ಮತ್ತು ಮಹಿಳೆಯ ಆಯ್ಕೆಯ ಹಕ್ಕಿನ ನಿರಾಕರಣೆ ಎಂಬುದನ್ನು ಅರಿಯಬೇಕು.

ಎಳೆಕಂದಗಳು ಅಪೌಷ್ಠಿಕತೆಯಿಂದ ಸಾಯುತ್ತಿವೆ. ಮಹಿಳೆಯರ ದೇಹವನ್ನು ವ್ಯಾಪಾರಿ ಸರಕಾಗಿಸಲಾಗಿದೆ. ಆದ್ದರಿಂದಲೇ ಅಕಾರಣವಾಗಿ ಗರ್ಭಾಶಯವನ್ನು ಕಿತ್ತು ಹಾಕಿ ಹಣ ದೋಚುವ ವೈದ್ಯರು ಮತ್ತವರ ಆಸ್ಪತ್ರೆಗಳಿಗೇನು ಬರವಿಲ್ಲ. ಕಾಡುಗೊಲ್ಲರ ಹಟ್ಟಿಗಳಲ್ಲಿ ದೈವದ ಹೆಸರಿನಲ್ಲಿ ಸ್ವತ: ಪೂಜಾರಿಗಳೇ ಗರ್ಭಾಶಯ ತೆಗೆಸಿಕೊಳ್ಳುವಂತೆ ಭಯಪಡಿಸುತ್ತಿದ್ದಾರೆ. ಹೆಣ್ಣು ಭ್ರೂಣ ಹತ್ಯೆಯು ನಿಂತಿಲ್ಲ. ಹಾಗೆಂದೇ ಸಾವಿರ ಪುರುಷರಿಗೆ 940 ಮಹಿಳೆಯರು ಇರುವರು. ಅಲ್ಲದೇ ಈಗಲೂ ಹೆಂಗೂಸುಗಳ ಲಿಂಗಾನುಪಾತದಲ್ಲಿ ತೀವ್ರ ಕುಸಿತವಿದೆ. ಇರುವ ಭ್ರೂಣಲಿಂಗ ಪತ್ತೆ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಬದಲು ಕೇಂದ್ರದ ಮಹಿಳಾ ಮತ್ತು ಮಕ್ಕಳ ಸಚಿವರು ಭ್ರೂಣಲಿಂಗ ಪತ್ತೆಯನ್ನು ಕಡ್ಡಾಯಗೊಳಿಸುವ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ.

ಅಕ್ಷರ, ಅನ್ನ, ಆರೋಗ್ಯದ ಪ್ರಶ್ನೆಗಳು ಮರೀಚಿಕೆಯೇ?

ಗಂಡು ಹೆಣ್ಣಿನ ನಡುವಿನ ಶಿಕ್ಷಣದ ಅಂತರವು 16.68% ಇದೆ. ದಲಿತ ಮಹಿಳಾ ಸಾಕ್ಷರತೆ-ಯು ಇನ್ನೂ ಕಡಿಮೆ ಇದೆ. ಕೊಡುವ ಶಿಕ್ಷಣದಲ್ಲಿ ಲಿಂಗ ಸಮಾನತೆಯ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ. ಮಾತ್ರವಲ್ಲ ಮಹಿಳಾ ಸಾಧನೆಯ ಚಿತ್ರಣವಿರುವ ಪಠ್ಯಗಳು ಇಲ್ಲವಾಗಿವೆ. ಮಹಿಳೆಯಿಲ್ಲದ ಮಹಿಳಾ ನಿರ್ಲಕ್ಷ್ಯದ ಪಠ್ಯವನ್ನು ಓದಿಸುವುದರಿಂದ ಮಕ್ಕಳು ಏಕಪಕ್ಷೀಯ ದೃಷ್ಟಿಕೋನ ಹೊಂದಿದವರು ಆಗುವುದರೊಂದಿಗೆ ಪುರುಷಪ್ರಧಾನ ನಂಬಿಕೆಗಳನ್ನು ಬೆಳೆಸಿಕೊಂಡು ಮುಂದಕ್ಕೆ ಲಿಂಗತಾರತಮ್ಯದ ಸಮಾಜದೊಂದಿಗೆ ಕೈಜೋಡಿಸುತ್ತಾರೆ.

ಕರ್ನಾಟಕದಲ್ಲಿ 51.5% ಮಹಿಳೆಯರು ಅನಿಮಿಯಾದಿಂದ ಬಳಲುತ್ತಿರುವರು. ಪೌಷ್ಠಿಕಾಂಶದ ಕೊರತೆಯಿಂದಾಗಿ ಹುಟ್ಟುವ 1000 ಮಕ್ಕಳಲ್ಲಿ 41 ಗಂಡುಕೂಸುಗಳು 42 ಹೆಂಗೂಸುಗಳು ಸಾವನ್ನಪ್ಪುತ್ತಿವೆ. 1 ಲಕ್ಷ ಗರ್ಭಿಣಿಯರಲ್ಲಿ 178 ತಾಯಂದಿರರು ಸಾವನ್ನಪ್ಪುತ್ತಿದ್ದಾರೆ. ಶೇಕಡಾ 94% ಅಂಗವಿಕಲರು ಬಿ.ಪಿ.ಎಲ್ ಕುಟುಂಬಗಳಿಗೆ ಸೇರಿದವರಾಗಿದ್ದಾರೆ. ಆರೋಗ್ಯದ ಸವಲತ್ತುಗಳನ್ನು ಬಿ.ಪಿ.ಎಲ್ ರೇಷನ್ ಕಾರ್ಡಗಳಿಗೆ ತಳುಕುಹಾಕಿರುವ ಪರಿಣಾಮ ಬಹುಸಂಖ್ಯಾತರು ಆರೋಗ್ಯ ಚಿಕಿತ್ಸೆಗಳಿಂದ ವಂಚಿತರಾಗಿದ್ದಾರೆ. ಕೈ ಗೆಟುಕದ ಖಾಸಗಿ ಆಸ್ಪತ್ರೆಗಳು, ಸೀಮಿತವಾಗಿರುವ ಸರ್ಕಾರಿ ಆಸ್ಪತೆಗಳ ನಡುವೆ ಜನಸಾಮಾನ್ಯರು ಮತ್ತು ಮಹಿಳೆಯರು ಜೀವದ ಆಸೆಯನ್ನೇ ಕಳೆದುಕೊಳ್ಳುವಂತಾಗಿದೆ. ಶೇಕಡಾ 39 % ಜನ ಆರ್ಥಿಕ ಸಮಸ್ಯೆಗಳಿಂದ ಕನಿಷ್ಟ ಚಿಕಿತ್ಸೆಗಳಿಂದ ದೂರವುಳಿಯುವಂತಾಗಿದೆ.

ಚುನಾವಣಾ ಗಿಮಿಕ್ ಗಳಿಗಾಗಿ ಬಡವರ ಬದುಕನ್ನು ತೆರೆದಿಟ್ಟು ಕುಟುಂಬಕ್ಕೆ 30 ಕೆ.ಜಿ ನೀಡುತ್ತಿದ್ದ ಅಕ್ಕಿಯನ್ನು ತಲಾ 10 ಕೆ.ಜಿ ಗಿಳಿಸಿ, ಈಗ ತಲಾ 3 ಕೆ.ಜಿ ಗಿಳಿಸಿದ್ದಾರೆ. ಈಗಿರುವ ಆಹಾರ ಭದ್ರತಾ ಕಾಯ್ದೆಯ ಪ್ರಕಾರ ಶೇ.40 ಕ್ಕೂ ಹೆಚ್ಚು ಜನರು ರೇಷನ್ ವಂಚಿತರಾಗುತ್ತಾರೆ. ಸಾರ್ವತ್ರಿಕ ವಿತರಣಾ ವ್ಯವಸ್ಥೆಯು ಬಲಗೊಳಿಸಬೇಕು.ಕರ್ನಾಟಕ ಸರ್ಕಾರ ಜಾರಿಗೆ ತರುತ್ತಿರುವ ಬಯೋ ಮೆಟ್ರಿಕ್ ಕಾರ್ಡ್ ಕೂಪನ್ ವ್ಯವಸ್ಥೆಯು ಅವ್ಯವಸ್ಥೆಯಿಂದ ಕೂಡಿದ್ದು ಸಚಿವರಿಗೆ ವಾಸ್ತವಿಕತೆಯ ಅರಿವಿಲ್ಲದ್ದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ನೀರು ಕೇಳಿದರೆ ಪೋಲಿಸ್ ಲಾಠಿಯು ಬಾರ್ಬರಿಕವಾಗಿ ಮಹಿಳೆಯರ ಮೇಲೇರಗಿದೆ. ಮಹದಾಯಿ ಹೋರಾಟದಲ್ಲಿ ಭಾಗಿಯಾದ ಯಮನೂರಿನ ತಾಯಂದಿರು ನೀರು ಕೇಳಿದರೆ ರಾಜ್ಯ ಸರಕಾರವು ನಾಗರೀಕ ಸಮಾಜವೇ ತಲೆತಗ್ಗಿಸುವಂತೆ ಅವರ ಮೇಲೆ ಹಲ್ಲೆ ಮಾಡಿದೆ.

ಗಟ್ಟಿಗೊಳ್ಳುತ್ತಿರುವ ಮಹಿಳಾ ವಿರೋಧಿ ಆಚರಣೆಗಳು-ನಂಬಿಕೆಗಳು

ಒಂದೆಡೆ ವರದಕ್ಷಿಣೆ ಕಾರಣವಾಗಿ ಬಡವರ ಮದ್ಯಮ ವರ್ಗ ಮೇಲ್ಮದ್ಯಮವರ್ಗದವರ ಹೆಣ್ಣುಮಕ್ಕಳ ಮದುವೆಗಳಿಗೆ ಕಂಟಕ ಒದಗುತ್ತಿದ್ದ-ರೆ ಇನ್ನೊಂದೆಡೆ ಬಾಲ್ಯವಿವಾಹಗಳು ಎಗ್ಗಿಲ್ಲದೆ ನಡೆಯುತ್ತಿವೆ. ಬಾಲ್ಯವಿವಾಹಗಳ ಅನಿವಾರ್ಯತೆಗೆ ಒಡ್ಡಿಕೊಳ್ಳುವಂತೆ ಭಯಾನಕ ವಾತಾವರಣವು

ಪುಟ 13 ಕ್ಕೆ

ವಿಶಿಷ್ಟ ಸ್ವಾತಂತ್ರ್ಯ ದಿನಾಚರಣೆ-ಸಸಿ ನೆಡುವ ಅಭಿಯಾನ

ಆಗಸ್ಟ್ 15, 2014 ರಂದು ಕೋಲಾರ ಜಿಲ್ಲೆಯ ಸುಮಾರು 210 ಗ್ರಾಮಗಳಲ್ಲಿ ಮಹಿಳೆಯರು ಗುಂಪು ಗುಂಪಾಗಿ ನಿಂತು ಸಾಮೂಹಿಕವಾಗಿ ಸಸಿ ನೆಡುವ ಕೆಲಸದಲ್ಲಿ ನಿರತರಾಗಿದ್ದರು. ದೇಶದ 68 ನೇ ಸ್ವಾತಂತ್ರ್ಯ ದಿನದಂದು ಜಿಲ್ಲೆಯ ಈ ಗ್ರಾಮಗಳಲ್ಲಿ ಒಟ್ಟಾರೆ ಸುಮಾರು 30 ಸಾವಿರ ಸಸಿಗಳನ್ನು ನೆಡಲಾಗಿದೆ.

ಯಾಕೆ ಮೂವತ್ತು ಸಾವಿರ?

ಮೇ ತಿಂಗಳಿನಲ್ಲಿ 'ಜನವಾದಿ ಮಹಿಳಾ ಸಂಘಟನೆ'ಯ ಒಂದು ದಿನದ ಸಾಮೂಹಿಕ ಸದಸ್ಯತ್ವ ಆಂದೋಲನದ ಮೂಲಕ 28 ಸಾವಿರಕ್ಕೂ ಅಧಿಕ ಸದಸ್ಯತ್ವ ನೋಂದಾಯಿಸಲಾಗಿದೆ. ಆ ನಂತರ ಆದ ಸದಸ್ಯತ್ವ ಸೇರಿ ಜಿಲ್ಲೆಯ ಸದಸ್ಯತ್ವ ಸುಮಾರು 30 ಸಾವಿರದಷ್ಟಾಗಿದೆ. ಈ ಪ್ರತಿಯೊಂದು ಸದಸ್ಯತ್ವಕ್ಕೆ ಒಂದು ಸಸಿ ನೆಡುವುದು ಎಂಬ ಯೋಜನೆಯಂತೆ ಕಾರ್ಯಕ್ರಮ ರೂಪಿಸಿ ಯಶಸ್ವಿಯಾದ ಸಸಿ ನೆಡುವ ಈ ಆಂದೋಲನ ನಡೆದಿದೆ.

ಅಂದೋಲನ'ದ ಹಿಂದಿನ ಸ್ಫೂರ್ತಿ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ-ಯಂದು ಅಂದರೆ ಮಾರ್ಚ್ 8, 2014ರಂದು ಕೋಲಾರ ಜಿಲ್ಲೆಯಲ್ಲಿ ಮಹಿಳೆಯರಿಗೆ ಬಸ್ಸುಗಳಲ್ಲಿ ಆಸನಗಳನ್ನು ಕಾಯ್ದಿರಿಸುವ ಹಕ್ಕೊತ್ತಾಯಕ್ಕಾಗಿ ನಡೆಸಿದ ಹೋರಾಟದ ಭಾಗವಾಗಿ ಅದೇ ದಿನ 'ಉರಟ ಅಗ್ರಹಾರ' ಎಂಬ ಗ್ರಾಮದಲ್ಲಿ ಸದಸ್ಯತ್ವ ನೋಂದಾವಣೆ ಉದ್ಘಾಟನೆ ನಡೆಯಿತು. ಈ ಸಂದರ್ಭದಲ್ಲಿ 100 ಹಳ್ಳಿಗಳಲ್ಲಿ ಇಂತಹದನ್ನು ಒಮ್ಮೆಲೆ ಏಕೆ ಮಾಡಬಾರದೆಂಬ ಆಲೋಚನೆಯೊಂದಿಗೆ ರೂಪುಗೊಂಡ ಬೃಹತ್ ಮಟ್ಟದ ಅಭಿಯಾನದ ಚಿಂತನೆಯೇ ಈ ಸಾಮೂಹಿಕ ಸದಸ್ಯತ್ವ ಆಂದೋಲನದ ಹಿಂದಿನ ಪ್ರೇರಣೆ.

ಕೋಲಾರ ಜಿಲ್ಲಾ ಜನವಾದಿ ಮಹಿಳಾ ಸಂಘಟನೆ

'28,730 ಮಹಿಳೆಯರ ಸದಸ್ಯತ್ವ ನೋಂದಾಯಿಸಿದ ಚಾರಿತ್ರಿಕ ಅಭಿಯಾನ'– ವಿ. ಗೀತಾ

ಜನವಾದಿ ಮಹಿಳಾ ಸಂಘಟನೆಯ ಕೋಲಾರ ಜಿಲ್ಲಾ ಸಮಿತಿಯು 2014ರಲ್ಲಿ ಯೋಜಿಸಿದ ಒಂದು ಸಾಮೂಹಿಕ ಆಂದೋಲನವು ವಿಶೇಷವಾಗಿ ಎಲ್ಲರ ಗಮನ ಸೆಳೆಯಿತು. ಅದು ಮಹಿಳಾ ಸಂಘಟನೆಯ ಸಾಮೂಹಿಕ ಸದಸ್ಯತ್ವ ಆಂದೋಲನ ಹಾಗು ಸಾಮೂಹಿಕವಾಗಿ ಸಸಿ ನೆಡುವ ಕಾರ್ಯಕ್ರಮ.

28,730 ಮಹಿಳಾ ಸದಸ್ಯತ್ವ ನೋಂದಾವಣೆ

ಜನವಾದಿ ಮಹಿಳಾ ಸಂಘಟನೆಯ ಕೋಲಾರ ಜಿಲ್ಲಾ ಸಮಿತಿಯಿಂದ ಈ 'ಏಕದಿನ ಸದಸ್ಯತ್ವ ಅಭಿಯಾನ'ವು ಮೇ 30, 2014 ನಡೆಯಿತು. ಅಂ-ದು ಒಂದೇ ದಿನ 28,730 ಮಹಿಳಾ ಸದಸ್ಯತ್ವ ನೋಂದಾವಣೆಯಾಗಿದೆ. ಏಕಕಾಲದಲ್ಲಿ ಕೋಲಾರ ಜಿಲ್ಲೆಯ 5 ತಾಲ್ಲೂಕುಗಳ 210 ಹಳ್ಳಿ ಮತ್ತು ನಗರ ಪ್ರದೇಶದಲ್ಲಿ, 9 ತಂಡಗಳ ಮೇಲುಸ್ತುವಾರಿಯಲ್ಲಿ ಸದಸ್ಯತ್ವ ನೋಂದಾವಣೆ ನಡೆಸಲಾಗಿದೆ. ಸುಮಾರು 1,600 ಕಾರ್ಯಕರ್ತರು ಹಾಗೂ ಮುಖಂಡರು, ಹಲವಾರು ಹಿತೈಷಿಗಳು ಈ ಅಭಿಯಾನದಲ್ಲಿ ಭಾಗಿಗಳಾಗಿದ್ದರು. ಜನ ಸಮುದಾಯದಿಂದ ಸಿಕ್ಕ ಅಭೂತಪೂರ್ವ ಸ್ಪಂದನೆಯಿಂದಾಗಿ ಜಿಲ್ಲೆಯ ಮಹಿಳಾ ಚಳುವಳಿಯಲ್ಲಿ ಇದು ಒಂದು ಹೊಸದಾಖಲೆ ಸೃಷ್ಟಿಸಿದೆ ಎಂದರೆ ತಪ್ಪಾಗಲಾರದು.

ಈ ಅಭಿಯಾನದ ಸಂದರ್ಭದಲ್ಲಿ ಗುರುತಿಸಲಾದ ಸಮಸ್ಯೆಗಳ ಆಧಾರದಲ್ಲಿ ಹೊಸ ಚಳುವಳಿ ಕಟ್ಟಲು ನಿರ್ಣಯಿಸಲಾಗಿದೆ. ಜಿಲ್ಲೆಯ 5 ತಾಲ್ಲೂಕುಗಳ ಸುಮಾರು 175 ಹಳ್ಳಿ/ನಗರ ಪ್ರದೇಶಗಳಲ್ಲಿ ಕನಿಷ್ಠ ಒಂದು ಹಳ್ಳಿಗೆ 175 ಸದಸ್ಯತ್ವದಂತೆ, 5,000 ಮಹಿಳಾ ಸದಸ್ಯರನ್ನು ಏಕದಿನದಲ್ಲಿ ನೋಂದಾಯಿಸುವುದು, ಕೋಲಾರದಲ್ಲಿ 14,000, ಬಂಗಾರಪೇಟೆಯಲ್ಲಿ 3,500, ಶ್ರೀನಿವಾಸಪುರದಲ್ಲಿ 3,500, ಮಾಲೂರು 3,500, ಮುಳಬಾಗಿಲಿನಲ್ಲಿ 3,500 ಸದಸ್ಯತ್ವ ಗುರಿ ನಿಗದಿ ಮಾಡಿಕೊಂಡು ಯೋಜಿಸಲಾಗಿತ್ತು. 175 ಹಳ್ಳಿಗಳಲ್ಲಿ ಗ್ರಾಮಸಭೆ/ಘಟಕಗಳ ಸಭೆ/ಸಮಾವೇಶಗಳನ್ನು ನಡೆಸುವುದು ಮತ್ತು ಸಮಿತಿಗಳನ್ನು ರಚಿಸುವುದು. ಸದಸ್ಯರಾದವರ ಪಟ್ಟಿಯನ್ನು ತಯಾರಿಸುವುದು. ಸದಸ್ಯತ್ವ ಅಭಿಯಾನ ಅನುಷ್ಠಾನ ರೂಪುರೇಷೆ ಚರ್ಚಿಸಲು ಜಿಲ್ಲಾ ಮಟ್ಟದ ಸಮಾವೇಶವನ್ನು ಜಿಲ್ಲಾ ಕೇಂದ್ರದಲ್ಲಿ ನಡೆಸುವುದು. ನಿಗದಿತ ನಮೂನೆಯಲ್ಲಿ ಪ್ರತಿ ಗ್ರಾಮದಿಂದ ಗ್ರಾಮದ ಸಮಸ್ಯೆಗಳ ಕುರಿತು ಮಾಹಿತಿ ಸಂಗ್ರಹಿಸುವುದು ಮುಂತಾದುವನ್ನು ಯೋಜನೆ ಒಳಗೊಂಡಿತ್ತು. ಈ ನಾನಾ ದೃಷ್ಟಿಯಿಂದಲೂ ಆಂದೋಲನ ಯಶಸ್ಸು ಸಾಧಿಸಿದೆ.

ಪೂರ್ವಭಾವಿ ಜಿಲ್ಲಾ ಸಮಾವೇಶ

ಆಂದೋಲನಕ್ಕೆ ಪೂರ್ವಬಾವಿಯಾಗಿ ಜಿಲ್ಲಾ ಸಮಾವೇಶವೊಂದನ್ನು ಸಂಘಟಿಸಿಲಾಗಿತ್ತು. ಈ ಸಮಾವೇಶದಲ್ಲಿ ಸಭೆಗಳು ಹಾಗೂ ಪೂರ್ವ ತಯಾರಿಗಳು ನಡೆದ ಪ್ರದೇಶದಿಂದ ಅಗತ್ಯ ಮಾಹಿತಿ ಸಂಗ್ರಹಿಸಿದ ನಮೂನೆಯೊಂದಿಗೆ ಕಾರ್ಯಕರ್ತರು ಅತ್ಯಂತ ಉತ್ಸಾಹದಿಂದ ಭಾಗವಹಿದ್ದರು. ಅಲ್ಲಿ ಸಾಮೂಹಿಕ ಸದಸ್ಯತ್ವ ಆಂದೋಲನದ ಕುರಿತು ಎಲ್ಲರಿಗೂ ಮನನ ಮಾಡಿಕೊಡಲಾಯಿತು. ಸಭೆಗಳನ್ನು ನಡೆಸಿದ ಪ್ರತಿಹಳ್ಳಿಯಿಂದಲೂ ಕಾರ್ಯಕರ್ತರು ಭಾಗವಹಿಸಿದ್ದು ವಿಶೇಷವಾಗಿತ್ತು.

ಪುಟ 13 ಕ್ಕೆ

ಮಹಿಳಾ ಪುರವಾಣಿ



ಜನವಾದಿ ಮಹಿಳಾ ಸಂಘಟನೆಯ ಹೋರಾಟಗಳು

– 'ಜನಶಕ್ತಿ' ಕಂಡಂತೆ

ಜನವಾದಿ ಮಹಿಳಾ ಸಂಘಟನೆ ಕೋಲಾರದಲ್ಲಿ ಸೆ.26–28 ವರೆಗೆ ತನ್ನ 9ನೇ ಸಮ್ಮೇಳನವನ್ನು ನಡೆಸುತ್ತಿದೆ. ಮಂಡ್ಯದಲ್ಲಿ ನಡೆದ 8ನೇ ಸಮ್ಮೇಳನದ ನಂತರದ ಅವಧಿಯಲ್ಲಿ ಮಹಿಳೆಯರನ್ನು ಬಾಧಿ ಸುವ ವಿಷಯಗಳ ಬಗ್ಗೆ ಸಂಘಟನೆ ಹಲವು ಚಳುವಳಿ ನಡೆಸಿದೆ ಹಾಗೂ ಮಧ್ಯಪ್ರವೇಶ ಮಾಡಿದೆ. ಜನಶಕ್ತಿ ಇವುಗಳ ವರದಿ ಮಾಡುತ್ತಾ ಬಂದಿದೆ. ಅಂತಹ ಕೆಲವು ಪ್ರಮುಖ ಹೋರಾಟ, ಚಳುವಳಿಗಳ, ಮಧ್ಯಪ್ರವೇಶಗಳ ವರದಿಗಳ ಕೆಲವು ಆಯ್ದ ಭಾಗಗಳು ಇಲ್ಲಿವೆ.

ಅನ್ಯಾಯದ ವಿರುದ್ಧ ಎಚ್ಚರಿಕೆ ಗಂಟೆ ಹಂತಕನ ಸೆರೆ: ಹೋರಾಟಕ್ಕೆ ಸಂದ ಜಯ

ಸೆಪ್ಟೆಂಬರ್ 19, 2013

ಹೆಂಡತಿ ಸಿ.ಬಿ.ವೀಣಾ ಮತ್ತು ಎರಡು ವರ್ಷದ ಮಗು ದೀಪ್ತಿಯನ್ನು ಕೊಂದು ತಲೆಮರೆಸಿಕೊಂಡಿದ್ದ ಎಸ್.ಕೆ.ಸಂತೋಷ್ ಕುಮಾರನನ್ನು ಬಂಧಿಸಬೇಕೆಂದು ಕೋಲಾರದಲ್ಲಿ ನಡೆದ ಪ್ರಗತಿಪರ ಸಂಘಟನೆಗಳ ಹೋರಾಟಕ್ಕೆ ಜಯ ಸಿಕ್ಕಿದೆ. ಪುದುಚೇರಿಯಲ್ಲಿ ತಲೆಮರೆಸಿಕೊಂಡಿದ್ದ ಸಂತೋಷನನ್ನು ಸೆಪ್ಟೆಂಬರ್ 18ರಂದು, ಅಂದರೆ ಅನಿರ್ದಿಷ್ಟ ಧರಣಿಯ 29ನೇ ದಿನದಂದು ಬಂಧಿಸುವಲ್ಲಿ ಕೋಲಾರ ಪೊಲೀಸರ ಒಂದು ತಂಡ ಯಶಸ್ವಿಯಾಗಿದೆ. ಜುಲೈ 10ರಂದು ಕೋಲಾರದ ತನ್ನ ಮನೆಯಲ್ಲಿ ವರದಕ್ಷಿಣೆ ದಾಹಕ್ಕಾಗಿ ಮತ್ತು ಹೆಣ್ಣು ಮಗು ಜನಿಸಿದೆ ಎಂಬ ಕಾರಣಕ್ಕೆ ಹೆಂಡತಿ ಮತ್ತು ಮಗುವನ್ನು ಕೊಂದು ಪರಾರಿಯಾಗಿದ್ದ ಅರೋಪಿಯನ್ನು ಬಂಧಿಸುವಂತೆ ಆಗ್ರಹಿಸಿ ವೀಣಾಳ ತಂದೆ–ತಾಯಿ ಹಾಗೂ ಇತರ ಬಂಧುಗಳನ್ನು ಸೇರಿಸಿಕೊಂಡು ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ಆಗಸ್ಟ್ 21 ರಿಂದ ಕೋಲಾರ ಜಿಲ್ಲಾಧಿಕಾರಿ ಕಚೇರಿ ಮುಂದೆ ನಡೆದ ಅನಿರ್ದಿಷ್ಟ ಧರಣಿ ಹೂಡಿದರು. ಧರಣಿಗೆ ಸಿಪಿಐ(ಎಂ), ಸಿಐಟಿಯು, ಕೆಪಿಆರ್. ಎಸ್, ಎಸ್ಎಫ್ಐ, ಡಿವೈಎಫ್ಐ ಮೊದಲಾದ ಸಂಘಟನೆಗಳಲ್ಲದೆ ದಸಂಸ, ಸಮತಾ ಸೈನಿಕ ದಳ ಮೊದಲಾದ ಸಂಘಟನೆಗಳೂ ಕೈಜೋಡಿಸಿದ್ದವು. ಪೊಲೀಸ್ ಹಾಗೂ ಜಿಲ್ಲಾಡಳಿತದ ನಿರ್ಲಕ್ಷ್ಯವನ್ನು ಖಂಡಿಸಿ ಹಲವು ರೀತಿಯ ಹೋರಾಟಗಳನ್ನು ನಡೆಸಲಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಯು.ಟಿ. ಖಾದರ್ ಮತ್ತು ಜಿಲ್ಲೆಯ ಜನಪ್ರತಿನಿಧಿಗಳ ನಿರ್ಲಜ್ಜ ನಡೆಯನ್ನು ಖಂಡಿಸಲಾಗಿತ್ತು. ಕೊನೆಗೂ ಕೋಲಾರ ಮಾತ್ರವೇ ಅಲ್ಲದೆ ಇಡೀ ಕರ್ನಾಟಕದ ಪ್ರಗತಿಪರ ಚಳವಳಿಯಲ್ಲಿ ದಾಖಲಾಗುವಂಥ ಒಂದು ಮಹತ್ವದ ಜನ ಚಳವಳಿಯ ಒತ್ತಡಕ್ಕೆ ಮಣಿದ ಅಧಿಕಾರಿಗಳು ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಿದ್ದಾರೆ. ಇದು ಹೋರಾಟಕ್ಕೆ ಸಂದ ದೊಡ್ಡ ಜಯವೇ ಆಗಿದೆ.



ಈ ಹಿನ್ನೆಲೆಯಲ್ಲಿ, ಸೆಪ್ಟೆಂಬರ್ 20ರಂದು, ಅಂದರೆ ಅನಿರ್ದಿಷ್ಟ ಧರಣಿಯ 30ನೇ ದಿನದಂದು ಧರಣಿ ಟೆಂಟ್ನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಸಂಘಟನೆಗಳ ಪ್ರಮುಖರು ಧರಣಿ ಮುಕ್ತಾಯವನ್ನು ಪ್ರಕಟಿಸಿದರು. ಆದರೆ, ಈ ಹೋರಾಟ ಇಲ್ಲಿಗೇ ನಿಲ್ಲುವುದಿಲ್ಲ ಎಂದೂ ಘೋಷಿಸಿದರು.

ಆರೋಪಿ ತಪ್ಪಿಸಿಕೊಳ್ಳಲು ಪ್ರಮುಖ ಕಾರಣ–ರಾದ ಕೋಲಾರ ನಗರ ಸರ್ಕಲ್ ಇನ್ಸಪೆಕ್ಟರ್ ಕೆ.ಎನ್. ರಮೇಶರನ್ನು ಸೇವೆಯಿಂದ ಅಮಾನತು ಮಾಡಲೇಬೇಕು ಎಂದು ಮುಖಂಡರು ಆಗ್ರಹಿಸಿದರು. ಚಾರ್ಜ್ ಶೀಟ್ ಸಲ್ಲಿಸುವಾಗ ಆರೋಪಿ ನುಣುಚಿಕೊಳ್ಳಲು ಆಗದ ರೀತಿಯಲ್ಲಿ ಸಂಬಂಧಿತ ಅಧಿಕಾರಿಗಳು ಎಚ್ಚರದಿಂದ ನಡೆದುಕೊಳ್ಳಬೇಕು ಎಂದೂ ಸಂಘಟನೆಗಳ ಪ್ರಮುಖರಾದ ಜಿ.ಸಿ. ಬಯ್ಯಾರೆಡ್ಡಿ, ವಿ. ಗೀತಾ, ಗಾಂಧಿನಗರ ನಾರಾಯಣಸ್ವಾಮಿ, ಟಿ. ವಿಜಯಕುಮಾರ್, ಪಂಡಿತ್ ಮುನಿವೆಂಕಟಪ್ಪ ಮೊದಲಾದವರು ಹೇಳಿದರು.

ಮಹಿಳೆಯರ ಮೇಲೆ ದೌರ್ಜನ್ಯ ಎಸಗುವವರು ಹಾಗೂ ಅದಕ್ಕೆ ಕುಮ್ಮಕ್ಕು ಕೊಡುವ ಮತ್ತು ನಿರ್ಲಕ್ಷ್ಯ ತೋರುವ ಅಧಿಕಾರಿಗಳಿಗೆ ಈ ಯಶಸ್ವಿ ಹೋರಾಟ ಒಂದು ಎಚ್ಚರಿಕೆಯ ಗಂಟೆಯಾಗಿದೆ.

ಸೆಪ್ಟೆಂಬರ್ 19 ರಂದು ಹೋರಾಟದ ಜಯವನ್ನು ಮುಖಂಡರು. ಘೋಷಿಸಿದರು.



ಸೌಜನ್ಯ ಪ್ರಕರಣ ಸಿಬಿಐಗೊಪ್ಪಿಸಲು ಒತ್ತಾಯಿಸಿ ಮಂಗಳೂರಿನಲ್ಲಿ ಬೃಹತ್ ಪ್ರತಿಭಟನೆ

ಅಕ್ಟೋಬರ್ 9, 2013

ಧರ್ಮಸ್ಥಳದ ಹದಿ ಹರೆಯದ ಕು। ಸೌಜನ್ಯಾ ಅವಳ ಮೇಲೆ ಅತ್ಯಾಚಾರ ನಡೆಸಿ ಬಳಿಕ ಕೊಲೆಗೈದ ಘಟನೆ ನಡೆದು ಅಕ್ಟೋಬರ್ 9 ಕ್ಕೆ ಒಂದು ವರ್ಷ ತುಂಬಿದ್ದರೂ, ಪ್ರಭಾವಿಗಳ ಒತ್ತಡಕ್ಕೆ ಒಳಗಾಗಿ ಪೋಲೀಸ್ ಇಲಾಖೆಯಾಗಲೀ ಜಿಲ್ಲಾಡಳಿತವಾಗಲೀ ಸರಿಯಾದ ತನಿಖೆಯನ್ನು ನಡೆಸದೆ ಕಾನೂನು ನ್ಯಾಯಗಳಿಗೆ ಅಪಚಾರ ನಡೆಸುತ್ತಿರುವ ಹಿನ್ನೆಲೆಯಲ್ಲಿ ಬೆಳ್ತಂಗಡಿ ಸೇರಿದಂತೆ ದ.ಕ.ಜಿಲ್ಲೆಯ ನಾಗರಿಕರು ಡಿವೈಎಫ್ಐ, ಜನವಾದಿ ಮಹಿಳಾ ಸಂಘ (ಜೆಎಂಎಸ್), ಎಸ್ಎಫ್ಐಗಳ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಅಕ್ಟೋಬರ್ 9 ರಂದು ದ.ಕ. ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿದರು. (ಸೌಜನ್ಯ ಪ್ರಕರಣದ ವಿವರಗಳು ಹಾಗೂ ಈ ವರೆಗಿನ ಹೋರಾಟದ ಬಗ್ಗೆ 'ಜನಶಕ್ತಿ'ಯ ಕಳೆದ ಸಂಚಿಕೆಯಲ್ಲಿ ವಿಸ್ತೃತ ವರದಿ ಬಂದಿದೆ.) 50 ವಾಹನಗಳ ಬೃಹತ್ ಜಾಥಾವನ್ನು ಸೌಜನ್ಯಾಳ ತಂದೆ ಚಂದಪ್ಪ ಗೌಡ ಮತ್ತು ತಾಯಿ ಕುಸುಮಾವತಿ ಬೆಳ್ತಂಗಡಿಯಲ್ಲಿ ಬೆಳಗ್ಗೆ ಉದ್ಘಾಟಿಸಿದರು.

ಪ್ರಭಾವಿ ವ್ಯಕ್ತಿಗಳಿಂದ ಪೊಲೀಸರ ನಿಷ್ಕ್ರಿಯತೆ

ಜನವಾದಿ ಮಹಿಳಾ ಸಂಘಟನೆಯ ಅಖಿಲ ಭಾರತ ಉಪಾಧ್ಯಕ್ಷರೂ ರಾಜ್ಯ ಸಭಾ ಸದಸ್ಯರೂ ಆದ ಡಾ।ಟಿ. ಎನ್.ಸೀಮಾ ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು. ತಾನು ಇದೇ ಮೊದಲ ಬಾರಿಗೆ ಮಂಗಳೂರಿಗೆ ಬರುತ್ತಿದ್ದರೂ ಸಂತೋಷದಿಂದ ಬರುತ್ತಿಲ್ಲ; ದುಃಖದಿಂದ ಬರುವಂತಾಗಿದೆ ಎಂದು ಖೇದ ವ್ಯಕ್ತಪಡಿಸಿದರು.

ಸೌಜನ್ಯಾಳ ಅತ್ಯಾಚಾರ ಹಾಗೂ ಕೊಲೆ ಇದೊಂದೇ ಪ್ರತ್ಯೇಕವಾದುದಲ್ಲ. ದೇಶಾದ್ಯಂತ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಗಳ ಹಿನ್ನೆಲೆಯಲ್ಲಿ ಇಂಥದೊಂದು ಘಟನೆ ನಡೆದಿದೆ. ಈ ಜಿಲ್ಲೆಯಲ್ಲಿ ಪೊಲೀಸರು ಮಹಿಳೆಯರಿಗೆ ರಕ್ಷಣೆ ಕೊಡಲು ಇದ್ದಾರೆಯೇ ಅಥವಾ ದೌರ್ಜನ್ಯ ಎಸಗುವವರಿಗೆ ರಕ್ಷಣೆ ನೀಡಲು ಇದ್ದಾರೆಯೇ ಎಂದು ಸವಾಲು ಹಾಕಿದರು. ಪೊಲೀಸರು ಯಾಕೆ ನಿಷ್ಕ್ರಿಯರಾಗಿದ್ದಾರೆ? ಅವರು ಯಾರ ಹಿತವನ್ನು ಕಾಯುತ್ತಿದ್ದಾರೆ? ಧರ್ಮಸ್ಥಳ ಘಟನೆಯ ಹಿಂದೆ ಪ್ರಭಾವಿ ವ್ಯಕ್ತಿಗಳು ಇದ್ದುದ್ದರಿಂದ ಪೊಲೀಸರ ನಿಷ್ಕ್ರಿಯತೆ ಎಂಬುದು ನಮಗೆ ವ್ಯಕ್ತವಾಗುತ್ತದೆ ಎಂದು ಅವರು ತಿಳಿಸಿದರು.

ಪೋಲೀಸರು ಸಮರ್ಥರಲ್ಲ ಎನ್ನಲಾಗುವುದಿಲ್ಲ. ದೆಹಲಿ, ಮಣಿಪಾಲ ಪ್ರಕರಣಗಳಲ್ಲಿ ಶೀಘ್ರಗತಿಯಿಂದ ತನಿಖೆಯಾಗಿದೆ. ಸೌಜನ್ಯಾಳ ಪ್ರಕರಣದಲ್ಲಿ ಪೋಲೀಸರು ಯಾಕೆ ಸಮರ್ಥರಾಗಿಲ್ಲ? ರಾಜ್ಯ ಸಿಓಡಿ ಪೋಲೀಸರ ತನಿಖೆಯ ಬಗ್ಗೆ ನಾಗರಿಕರಿಗೆ ವಿಶ್ವಾಸವಿಲ್ಲ. ಆದ್ದರಿಂದ ಸಿಬಿಐ ತನಿಖೆಗೆ ಸದ್ರಿ ಪ್ರಕರಣವನ್ನು ಹಸ್ತಾಂತರಿಸಬೇಕು. ತಮ್ಮ ಗುಂಪಿನ ಸಂಸದರು ರಾಜ್ಯಸಭೆ, ಲೋಕಸಭೆಗಳಲ್ಲಿ ಈ ಪ್ರಶ್ನೆಯನ್ನು ಎತ್ತುವುದಲ್ಲದೆ, ಪ್ರಧಾನಿ ಹಾಗೂ ಸೋನಿಯಾ ಗಾಂಧಿಯವರಿಗೂ ಪ್ರಕರಣವನ್ನು ತಿಳಿಸುವುದಾಗಿ ಡಾ।ಸೀಮಾ ಹೇಳಿದರು. ನಿಜ ಅಪರಾಧಿಗಳನ್ನು ಪತ್ತೆ ಮಾಡುವವರೆಗೆ ವಿಶ್ರಮಿಸುವುದಿಲ್ಲ ಎಂದೂ ಭರವಸೆ ನೀಡಿದರು.

ಕಳೆದ ಹತ್ತು ವರ್ಷಗಳಲ್ಲಿ ಧರ್ಮಸ್ಥಳ ಉಜಿರೆ ಗ್ರಾಮಗಳಲ್ಲಿ ನಡೆದ ಅಸಹಜ ಸಾವುಗಳ ಅಂಕೆ ಸಂಖ್ಯೆಗಳನ್ನು ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಪಡೆದಿದ್ದ ತಖ್ತೆಯೊಂದನ್ನು ಅವರು ಪ್ರದರ್ಶಿಸಿ, ಈ ಭಾಗದಲ್ಲಿ 104 ಮಹಿಳೆಯರ ಸಾವುಗಳು ಅಸಹಜ ಸಾವುಗಳೆಂದು ದಾಖಲಾಗಿವೆ. ಅಂ–ದರೆ ಇಷ್ಟು ಸಾವುಗಳು ಮುಚ್ಚಿ ಹೋಗುತ್ತಿವೆ ಎಂದು ಅರ್ಥ. ಈಗ ಕೆಲವು ವರ್ಷಗಳ ಹಿಂದೆ ಧರ್ಮಸ್ಥಳದಲ್ಲಿ ಪದ್ಮಲತಾ ಎಂಬ ವಿದ್ಯಾರ್ಥಿನಿ ಅತ್ಯಾಚಾರಕ್ಕೊಳಗಾಗಿ ಬಳಿಕ ಕೊಲೆಗೀಡಾದಳು. ಅವಳ ತಂದೆ ಪಂಚಾಯತು ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದೇ ಕಾರಣ. ಆ ಗ್ರಾಮದಲ್ಲಿ ಚುನಾವಣೆ ನಡೆಸದೆ ಸದಸ್ಯರನ್ನು ನೇಮಿಸುವ ಪದ್ಧತಿ ಅಲ್ಲಿನದು. ಅದಕ್ಕೆ ವಿರುದ್ಧವಾಗಿ ನಡಕೊಂಡಾತನ ಕುಟುಂಬ ದೌರ್ಜನ್ಯಕ್ಕೊಳಗಾಗುತ್ತದೆ. ಇವತ್ತಿನಂತೆ ಆವತ್ತೂ ಪ್ರಗತಿಪರ ಸಂಘಟನೆಗಳು ಸಿಓಡಿ ತನಿಖೆಗಾಗಿ ಒತ್ತಾಯಿಸಿ ಹೋರಾಟ ಮಾಡಿದ್ದವು. ಆದರೆ 'ಪತ್ತೆಯಾಗದ ಪ್ರಕರಣ' ಎಂದು ಸಿಓಡಿ ಚುಕ್ತಾ ಮಾಡಿತ್ತು. ಅವತ್ತಿನಂತೆ ಇವತ್ತೂ ಸಿಓಡಿ ನಡೆದುಕೊಳ್ಳುತ್ತಿದೆ. ಡಾ॥ ಅಂಬೇಡ್ಕರ್ ವಿರಚಿತ ಸಂವಿಧಾನ ಆ ಸೀಮೆಯಲ್ಲಿ ಚಾಲ್ತಿಯಲ್ಲಿಲ್ಲವೇ ಎಂದು ಕೆ.ನೀಲಾ ಪ್ರಶ್ನಿಸಿದರು.

ಪ್ರಗತಿಪರ ಸಂಘಟನೆಗಳು, ಚಿಂತಕರಿಂದ ಪ್ರಖರ ವಾಗ್ದಾಳಿ:

ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷರಾದ ಎನ್. ಎಲ್.ಭರತ್ ರಾಜ್, ಭಾರತ ಜ್ಞಾನ ವಿಜ್ಞಾನ ಸಮಿತಿ, ಸಮತಾ ವೇದಿಕೆ ಕರ್ನಾಟಕ ರಾಜ್ಯ ಸಂಚಾಲಕರಾದ ಎನ್.ಪ್ರಭಾ, ಎಸ್ಎಫ್ಐ ರಾಜ್ಯ ವಿದ್ಯಾರ್ಥಿನಿ ಉಪಸಮಿತಿ ಅಧ್ಯಕ್ಷೆ ರೇಣುಕಾ, ದ.ಕ. ಜಿಲ್ಲಾ ಮಹಿಳಾ ದೌರ್ಜನ್ಯ ವೇದಿಕೆಯ ಮರ್ಲಿನ್ ಮಾರ್ಟಿಸ್, ವಿಚಾರವಾದಿ ಸಂಘಗಳ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷರಾದ ಖ್ಯಾತ ವಿಚಾರವಾದಿ ಪ್ರೊ।ನರೇಂದ್ರ ನಾಯಕ್, ಬರಹಗಾರ್ತಿ ಹಾಗೂ ಜನಪರ ಹೋರಾಟಗಾರ್ತಿ ಅತ್ರಾಡಿ ಅಮೃತಾ ಶೆಟ್ಟಿ, ಬೆಳ್ತಂಗಡಿ ತಾಲೂಕಿನ ಕಾರ್ಮಿಕ ಮುಖಂಡ ಬಿ.ಎಂ.ಭಟ್, ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು.

ಹೋರಾಟ ಮುಂದವರಿಸಲು ಸಂಕಲ್ಪ:

ಬೆಳಿಗ್ಗೆ ಹನ್ನೊಂದೂವರೆಯಿಂದ ಮಧ್ಯಾಹ್ನ ಎರಡು ಗಂಟೆಯವರೆಗೂ ಪ್ರತಿಭಟನಾ ಸಭೆ ನಡೆಯಿತು. ತಲೆಯೊಡೆಯುವಂಥ ಬಿಸಿಲಿದ್ದರೂ ಎಲ್ಲರೂ ಕೊನೆಯವರೆಗೆ ಭಾಗವಹಿಸಿದ್ದರು. ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಲೇಖಕಿಯರ ಸಂಘ, ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರಲ್ಲದೆ, ಕರಾವಳಿಯ ಅನೇಕ ಪ್ರಗತಿಪರ ಲೇಖಕಿಯರು ಬುದ್ಧಿಜೀವಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸೌಜನ್ಯಾಳ ತಾಯಿ ಕುಸುಮಾವತಿ, ತಂದೆ ಚಂದಪ್ಪ ಗೌಡ, ಸೋದರ ಮಾವ ವಿಠಲ ಇವರೂ ವೇದಿಕೆಯಲ್ಲಿ ಕುಳಿತಿದ್ದರು. ತಾಯಿ ಕುಸುಮ, ಸೋದರ ಮಾವ ವಿಠಲ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಜನವಾದಿ ಮಹಿಳಾ ಸಂಘಟನೆಯ ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷೆ ಹೇಮಲತಾ ಸ್ವಾಗತಿಸಿದರು. ಬೆಳ್ತಂಗಡಿಯ ಯುವಜನ ಮುಖಂಡ ಶೇಖರ ಲಾಯಿಲ ಅವರು ಪ್ರಾಸ್ತಾವಿಕವಾಗಿ ಸೌಜನ್ಯ ಪ್ರಕರಣದ ವಿವರಗಳನ್ನು ತಿಳಿಸಿದರು. ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಿರಣ ಪ್ರಭಾ ವಂದಿಸಿದರು. ಡಿವೈಎಫ್ಐ ಜಿಲ್ಲಾ ಸಮಿತಿ ಕಾರ್ಯದರ್ಶಿ ಹಾಗೂ ಮಂಗಳೂರು ನಗರ ಕಾರ್ಪರೇಟರ್ ದಯಾನಂದ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

‘ಜಾತಿ-ಅಂತಸ್ತು-ಮರ್ಯಾದೆ’ ಹೆಸರಿನಲ್ಲಿ ಮುಗ್ಧ ಹೆಣ್ಣೊಬ್ಬಳ ಸಜೀವ ದಹನ

ವರದಿ-ಎನ್.ಎಲ್. ಭರತ್‌ರಾಜ್

ಮೇ 3, 2014

ಈ ಅಂತರ್ ಜಾತೀಯ ವಿವಾಹವನ್ನು, ಪ್ರೇಮ ವಿವಾಹವನ್ನು ತಡೆಯಲು ಯತ್ನಿಸಿ ವಿಫಲವಾದ ಜಾತಿವಾದಿ ಶಕ್ತಿಗಳು ಶಿಲ್ಪಾ ಎಂಬ ಒಬ್ಬ ಮುಗ್ದ ಯುವತಿಯನ್ನು ಬರ್ಬರವಾಗಿ ಕೊಂದು ತಮ್ಮ ಕರಾಳ ಮುಖವನ್ನು ಪ್ರದರ್ಶಿಸಿವೆ. ಮಂಡ್ಯ ಜಿಲ್ಲೆಯಲ್ಲಿ ನಡೆದಿರುವ ಈ ‘ಮರ್ಯಾದಾ ಹತ್ಯೆ’ ಎನ್ನಲಾಗುವ ಈ ನಾಚಿಕೆಗೇಡಿನ ‘ಅವಮಾರ್ಯಾದೆ’ ಹತ್ಯೆ ಕುರಿತು ಒಂದು ವರದಿ.



"ತಾಳಿ ಪೂಜೆ ಮಾಡಿಸ್ತೀವಿ ಅಂತ ಕರೆದು-ಕೊಂಡು ಹೋಗಿ, ಕತ್ತಿಗೆ ಹಗ್ಗ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಲು ಬಂದರು. ನಾನು ತಪ್ಪಿಸಿಕೊಂಡು ಓಡಿದಾಗ ಹಿಂದೆ ಅಟ್ಟಿಸಿಕೊಂಡು ಬಂದು ಕೆಳಕ್ಕೆ ಕೆಡವಿ, ಕೈಯಿಂದ ಅದುಮಿ ಸುಸ್ತು ಮಾಡಿದರು. ಗುಂಡಿಯೊಳಗೆ ಬೀಳಿಸಿ, ಮುಖ ಹಾಗೂ ಎದೆ ಮೇಲೆಲ್ಲಾ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದರು. ಈ ರಾಕ್ಷಸರಿಗೆ ತಕ್ಕ ಶಿಕ್ಷೆ ಕೊಡಿಸಿರಕ್ಕ.. .. ಅವರನ್ನು ಮಾತ್ರ ಬಿಡಬೇಡಿ.. .. ನನ್ನ ಬದುಕಿಸಿರಿ, ನನಗೆ ನೀರು ಕೊಡಿ.. .." ಎಂದು ಆ ಮಹಿಳೆ ಗೋಗರೆ-ಯುತ್ತಿದ್ದ ಸನ್ನಿವೇಶ ಕಂಡ ಎಂತಹವರಿಗೂ ಕರುಳು ಚುರುಕ್ ಎನ್ನುತ್ತಿತ್ತು.

ಪ್ರೇಮ ವಿವಾಹ

ಆ ಜೋಡಿ 2014 ರ ಹೊಸ ವರ್ಷದ ದಿನದಂದು ನೂರಾರು ಕನಸುಗಳೊಂದಿಗೆ ಮದುವೆಯಾಗಿತ್ತು. ಮದುವೆ ಮೈಸೂರು ಜಿಲ್ಲೆಯ ನಂಜನಗೂಡಿನ ನಂಜುಂಡೇಶ್ವರ ದೇವಾಲಯದಲ್ಲಿ ನಡೆದಿತ್ತು. ಪರಸ್ಪರ ಪ್ರೀತಿಸಿದ ಎರಡು ಜೀವಗಳು ಜಾತಿ ಗೋಡೆಗಳನ್ನು ಮೀರಿ ಆಗಿದ್ದ ಮದುವೆ ಅದು. ಹುಡುಗಿ ಹೆಸರು ಶಿಲ್ಪಾ. ಹುಡುಗನ ಹೆಸರು ಅಭಿಜಿತ್.

ಮೇಟಗಳ್ಳಿಯ ಭೈರವೇಶ್ವರ ನಗರದ ನಾಯಕ ಜನಾಂಗದ ಮುರುಗೇಶ್ ಹಾಗೂ ಮಂಗಳಮ್ಮ ದಂಪತಿಗಳ ಏಕೈಕ ಪುತ್ರಿ ಶಿಲ್ಪಾ. ಅದೇ ಪ್ರದೇಶದಲ್ಲಿ ವಾಸವಾಗಿದ್ದ ಪರಿಶಿಷ್ಟ ಜಾತಿಯ ಬಿಲ್ಲಯ್ಯ ಹಾಗೂ ನಾಗಮ್ಮ ದಂಪತಿಯ ಪುತ್ರ ಅಭಿಜಿತ್. 5 ವರ್ಷಗಳಿಂದ ಪ್ರೀತಿಸುತ್ತಿದ್ದವರು ಪ್ರೀತಿಗೆ ಅರ್ಥ ಬರುವ ರೀತಿಯಲ್ಲಿ ಜವಾಬ್ದಾರಿಯಾಗಿ ಮದುವೆಯಾದರು.

ಮದುವೆಗೆ ಮುಂಚೆ ಈ ಜೋಡಿಯನ್ನು ಬೇರ್ಪಡಿಸುವ ಯತ್ನ ಎರಡೂ ಕಡೆ-ಯ ಕುಟುಂಬದವರಿಂದ ನಡೆದಿತ್ತು. ಇದರಿಂದ ಬೇಸತ್ತ ಶಿಲ್ಪಾ ಹಾಗೂ ಅಭಿಜಿತ್ ಮನೆ ಬಿಟ್ಟು ದೂರ ಹೋದಾಗ ಶಿಲ್ಪಾಳ ತಂದೆ ಮುರುಗೇಶ್ ಮೇಟಗಳ್ಳಿ ಪೋಲೀಸ್ ಠಾಣೆಗೆ ದೂರು ನೀಡಿದ್ದರು. ಶಿಲ್ಪಾ ಮತ್ತು ಅಭಿಜಿತ್ ಹಾಗೂ ಎರಡೂ ಕಡೆಯ ಕುಟುಂಬದ ಪೋಷಕರನ್ನ ಕರೆಯಿಸಿ ಚರ್ಚಿಸಿದಾಗ ಎರಡೂ ಕಡೆಯ ಕುಟುಂಬದವರು ಈ ಅಂತರ್ಜಾತಿ ವಿವಾಹಕ್ಕೆ ಸಮ್ಮತಿ ನೀಡದೇ ವಿರೋಧ ವ್ಯಕ್ತಪಡಿಸಿದ್ದರು.

ಪೋಲೀಸ್ ಠಾಣೆಯಲ್ಲೇ ‘ಪಂಚಾಯ್ತಿ’ ನಡೆಸಿ ಶಿಲ್ಪಾ ಮತ್ತು ಅಭಿಜಿತ್ ಇನ್ನು ಮುಂದೆ ಭೇಟಿಯಾಗಬಾರದು, ಮಾತನಾಡಬಾರದು, ಎಂದು ಮುಚ್ಚಳಿಕೆ ಬರೆಯಿಸಿಕೊಂಡು ಕಳುಹಿಸಿದ್ದರಂತೆ. (ಸಂವಿಧಾನಬದ್ಧವಾದ ವ್ಯಕ್ತಿ ಸ್ವಾತಂತ್ರ್ಯ - ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕುಗಳನ್ನು ರಕ್ಷಿಸಬೇಕಾದ ಪೋಲೀಸ್ ಠಾಣೆಗಳಲ್ಲಿ ಏನು ನಡೆಯುತ್ತಿದೆ ನೋಡಿ!!) ತಮ್ಮ ಪೋಲೀಸ್ ಠಾಣೆಯನ್ನು ‘ಖಾಪ್’ ಪಂಚಾಯ್ತಿಯ ಕಟ್ಟೆಯಂತೆ ಪ್ರೇಮಿಗಳನ್ನು ದೂರ ಮಾಡಲು ಬಳಸಿರುವುದು ನಿಜಕ್ಕೂ ಖಂಡನಾರ್ಹ ಮತ್ತು ಸಂವಿಧಾನ ವಿರೋಧಿ ಕೃತ್ಯ ಕೂಡ.

ಆದರೆ ಪ್ರೀತಿಗೆ ಜಾತಿ ಅಂತಸ್ತು ಹಾಗೂ ಬರೆದು ಕೊಟ್ಟ ಮುಚ್ಚಳಿಕೆ ಎಲ್ಲವನ್ನು ಮೀರುವ ಶಕ್ತಿ ಇತ್ತು. ಕುವೆಂಪುರವರು ಹೇಳುವಂತೆ ‘ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು, ಎದೆಯ ದನಿಗೂ ಮಿಗಿಲಾದ ಶಾಸ್ತ್ರ ವಿಹುದೇನು? ಎಂಬಂತೆ ಹೊಸ ವರ್ಷದ ದಿನ ಶಿಲ್ಪಾ ಮತ್ತು ಅಭಿಜಿತ್ ಬಾಳ ಸಂಗಾತಿಗಾಳಾದರು.

ಆಪದ್ಭಾಂಧವನಂತೆ ನಟಿಸಿದ ಕೊಲೆಗಾರ

ಅಭಿಜಿತ್ ಮನೆಗೆ ಬಂದಾಗ ತಂದೆ ಬಿಲ್ಲಯ್ಯ ಹಾಗೂ ತಾಯಿ ನಾಗಮ್ಮ ಆತನನ್ನು ಮನೆಗೆ ಸೇರಿಸಲಿಲ್ಲ. ‘ಇವಳು ಬೇರೆ ಜಾತಿಯವಳು, ಅಲ್ಲದೆ ಇವಳಿಗೆ ಬಾಲ್ಯ ವಿವಾಹವಾಗಿತ್ತು. ಇವಳು ಅಪವಿತ್ರಳು. ಇಂತವಳು ಮನೆಗೆ ಸೊಸೆಯಾಗಿ ಬಂದರೆ ನನಗೆ ಇರುವ ಹೆಣ್ಣು ಮಗಳನ್ನು ಯಾರು ಮದುವೆಯಾಗುತ್ತಾರೆ. ನನ್ನ ಮನೆಗೆ ಕಾಲಿಡಬೇಡ’ ಎಂದು ಹೊರ ಹಾಕಿದರು.

ಈ ಸಂದರ್ಭದಲ್ಲಿ ಬಿಲ್ಲಯ್ಯನ ತಮ್ಮ ಪುಟ್ಟಸ್ವಾಮಿ ಆತನ ಹೆಂಡತಿ ಪ್ರಮೀಳ ಶಿಲ್ಪಾ ಮತ್ತು ಅಭಿಜಿತ್ ಜೋಡಿಗೆ ಆಶ್ರಯ ಕೊಡಲು ಮುಂದೆ ಬಂದರು. ಇದರ ಹಿಂದೆ ದುಷ್ಟ ಯೋಜನೆಯೊಂದು ಅಡಗಿದೆ ಎಂದು ಅರಿಯದೆ ಮುಗ್ದ ಪ್ರೇಮಿಗಳು ನಂಬಿ ಮೋಸ ಹೋದರು. .. ..ತಾಳಿ ಪೂಜೆ ಹೆಸರಿನಲ್ಲಿ ನರಸೀಪುರ ತಾಲ್ಲೂಕು, ..ಮುಡುಕುತೊರೆಯಲ್ಲಿ ಪೂಜೆ ಮಾಡಿಸಲಾಗಿದೆ. ಮತ್ತೆ ಮಳವಳ್ಳಿ ತಾಲ್ಲೂಕು ಮತ್ತಿತಾಳೇಶ್ವರ ದೇವಾಲಯದಲ್ಲಿ ಪೂಜೆ ಮಾಡಿಸಬೇಕು ಎಂದು ಅದೇ ದಿನ ರಾತ್ರಿ ನೆಲಮಾಕನಹಳ್ಳಿಯಲ್ಲಿ ತಂಗಿದ್ದಾರೆ.

ಶಿಲ್ಪಾಳ ಮೊಬೈಲನ್ನು ಕಿತ್ತುಕೊಂಡು ಸ್ವಿಚ್ ಆಫ್ ಕೂಡ ಮಾಡಿದ್ದಾರೆ. ...ಪುಟ್ಟಸ್ವಾಮಿ, ಪ್ರಮೀಳ ಬಿಲ್ಲಯ್ಯನ ಸೂಚನೆ ಮೇರೆಗೆ ಮಳವಳ್ಳಿ ತಾಲ್ಲೂಕು ಕನ್ನಳ್ಳಿ ಎಂಬಲ್ಲಿ ಕೊಲೆ ಮಾಡಲು ತೀರ್ಮಾನಿಸಿದ್ದಾರೆ.

ಆಗ ಪುಟ್ಟಸ್ವಾಮಿ ಮೂತ್ರ ವಿಸರ್ಜನೆ ಮಾಡುತ್ತೇನೆಂದು ಬೈಕ್ ನಿಲ್ಲಿಸಿದವನು, ಶಿಲ್ಪಾಳ ಕುತ್ತಿಗೆಗೆ ಹಗ್ಗವನ್ನು ಹಾಕಿ ಉಸಿರುಗಟ್ಟಿಸಲು ಯತ್ನಿಸಿದ್ದಾನೆ. ಶಿಲ್ಪ ಬಿಡಿಸಿಕೊಂಡು ಸುಮಾರು ಅರ್ಧ ಕಿ.ಲೋ. ಮೀಟರ್ ಓಡಿಹೋಗಿ ಸುಸ್ತಾಗಿ ಬಿದ್ದಾಗ ಕೈಯಿಂದ ಕುತ್ತಿಗೆಯನ್ನು ಅದುಮಿ ಮುಖಕ್ಕೆ ಮತ್ತು ಎದೆಯ ಭಾಗಕ್ಕೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ. ಶಿಲ್ಪಾ ಚೀರಾಡಿದಾಗ ಓಡಿಹೋಗಿದ್ದಾರೆ. ಶಿಲ್ಪಾ ತೆವಳಿಕೊಂಡು ಗದ್ದೆ ಒಳಗಿಂದ ರಸ್ತೆ ಬದಿಗೆ ಬಂದು ಬಿದ್ದಾಗ ಕನ್ನಳ್ಳಿ ಗ್ರಾಮಸ್ತರು ಮತ್ತು ಪಕ್ಕದ ಊರಿನ ಡಿವೈಎಫ್‌ಐನ ಕಾರ್ಯಕರ್ತ ಪ್ರಕಾಶ್, ಜನವಾದಿ ಮಹಿಳಾ ಸಂಘಟನೆ ಮುಖಂಡರಿಗೆ, ಅಪರಿಚಿತ ಮಹಿಳೆಯೊಬ್ಬರನ್ನು ಪೆಟ್ರೋಲ್ ಹಾಕಿ ಸಜೀವ ದಹನ ಮಾಡಲು ಪ್ರಯತ್ನಿಸಿರುವ ಬಗ್ಗೆ ವಿಷಯ ತಿಳಿಸಿದ್ದಾರೆ. ಇನ್ನೂ ಜೀವ ಇದೆ ಎಂದೂ ಮಾಹಿತಿ ನೀಡಿದ್ದಾರೆ. ಆಗ ಪೋಲೀಸ್ ಮತ್ತು ಆಂಬುಲೆನ್ಸ್‌ಗೆ ಫೋನ್ ಮಾಡಿ ಮಳವಳ್ಳಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕೊಂಡೊಯ್ಯಲಾಗಿದೆ.

ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ದೇವಿ, ಸುನೀತ, ಸುಶೀಲ, ಭಾಗ್ಯಮ್ಮ ಇವರುಗಳು ಶಿಲ್ಪಾಳನ್ನು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಡಿವೈಎಫ್ಐ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ಎನ್.ಎಲ್.ಭರತ್ ರಾಜ್ ಹಾಗೂ ವೈದ್ಯರು, ಪೋಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಸ್ವತಃ ಶಿಲ್ಪಾಳೇ ಇಡೀ ಘಟನೆಯನ್ನು ವಿವರಿಸಿದ್ದಾಳೆ ಮತ್ತು ತನ್ನ ತಾಯಿಯನ್ನು ನೋಡಬೇಕು ಅವರನ್ನು ಕರೆಯಿಸಿ ಎಂದು ಖುದ್ದು ಫೋನ್ ನಂಬರ್ ಹೇಳಿದಾಗ ಅವರ ತಾಯಿಯನ್ನು ಕರೆಸಲಾಗಿದೆ. ತಾಯಿ ಮತ್ತು ಸಂಘಟನೆಯವರೊಂದಿಗೆ ಮಾತನಾಡಿದ ಶಿಲ್ಪಾ, ಈ ಘಟನೆಗೆ ಕಾರಣರಾದ 4 ಮಂದಿಗೆ ಕಠಿಣ ಶಿಕ್ಷೆಯಾಗಬೇಕು. ಅವರನ್ನ ಬಿಡಬೇಡಿ, ನನ್ನನ್ನು ಬದುಕಿಸಿಕೊಳ್ಳಿ, ನನಗೆ ನೀರು ಕೊಡಿ. ಎಂದು ಪದೇ ಪದೇ ಹೇಳುವ ದೃಶ್ಯ ಮನ ಕಲಕುತ್ತಿತ್ತು.

ಈ ವಿಷಯ ಟಿ.ವಿ. ಮಾಧ್ಯಮಗಳಲ್ಲಿ ಸುದ್ಧಿಯಾದ ನಂತರ ಹಲವಾರು ಪ್ರಗತಿಪರ ಸಂಘಟನೆಗಳು ಈ ಘಟನೆಯನ್ನು ಖಂಡಿಸಿದವು. ಕೊನೆಗೆ ಶಿಲ್ಪಾ ತೀರಿಕೊಂಡಳು. ಶಿಲ್ಪಾಳ ಬಡ ಕುಟುಂಬಕ್ಕೆ ಶವಸಂಸ್ಕಾರ ಮಾಡಲು ಹಣವಿರಲಿಲ್ಲ. ಆಗ ಸಂಘಟನೆಗಳು ಮಾಧ್ಯಮದವರು, ದಾನಿಗಳು ರೂ. 60 ಸಾವಿರದಷ್ಟು ಸಹಾಯ ಮಾಡಿದ್ದಾರೆ. ಪ್ರಗತಿಪರ ಸಂಘಟನೆಗಳು, ತಾಲ್ಲೂಕು ಆಡಳಿತ ಸೇರಿ ಶವಸಂಸ್ಕಾರವನ್ನು ನಡೆಸಲಾಗಿದೆ.

ಮೈಸೂರು ಡಿ.ಸಿ. ಕಛೇರಿ ಮುಂದೆ ಪ್ರತಿಭಟನೆ

ಮೇ 3, 2014 ರಂದು ಶಿಲ್ಪಾಳ ಸಜೀವ ದಹನ ಖಂಡಿಸಿ, ಸಾಮಾಜಿಕ ನ್ಯಾಯಕ್ಕಾಗಿ ಒತ್ತಾಯಿಸಿ, ಅಂತರ್ಜಾತಿ ಮತ್ತು ಪ್ರೇಮ ವಿವಾಹಿತರಿಗೆ ರಕ್ಷಣೆ ಕೊಡಬೇಕೆಂದು ಒತ್ತಾಯಿಸಿ ಮೈಸೂರು ರೈಲ್ವೆ ನಿಲ್ದಾಣದಿಂದ ಡಿ.ಸಿ.ಕಛೇರಿ ತನಕ ಮೆರವಣಿಗೆ ನಡೆಸಿ ಧರಣಿ ಕೂರಲಾಯಿತು.

‘ಅತ್ಯಾಚಾರಿ ರಾಘವೇಶ್ವರ ಸ್ವಾಮೀಜಿಯನ್ನು ಜೈಲಿಗಟ್ಟಿ’

ವರದಿ - ಆರ್. ರಾಮಕೃಷ್ಣ

ಸೆಪ್ಟೆಂಬರ್ 28, 2015

‘ಬೀಳು ಹೋಗುತಿದೆ.. ..

ಹೂವಿನ ತೋಟ, ಕುರುಡು ಕೆಂಡದ ಮಳೆಯಲ್ಲಿ.....?

ಬೆಂಗಳೂರಿನ ‘ಸ್ವಾತಂತ್ರ್ಯ ಉದ್ಯಾನ’ ಎಂಬ ನೆರಳೇ ಇಲ್ಲದ ಬರಡು ಮೈದಾನದಲ್ಲಿ ಸುಡುಬಿಸಿಲಿನ ರಣರಣ ನಡು ಮಧ್ಯಾಹ್ನದಲ್ಲಿ ಆಳವಾದ ನೋವಿನ ಲೇಪನದೊಂದಿಗೆ ವೇದಿಕೆಯಿಂದ ಈ ಹಾಡು ಕೇಳಿಬರುತ್ತಿತ್ತು. ಅಂತರಂಗದ ನೋವಿನಾಳದಿಂದ ಈ ಹಾಡು ಹಾಡಿದವರು ಖ್ಯಾತ ಗಾಯಕಿ ಪ್ರೇಮಲತಾ. ಕಾಮಾಂಧ ಸ್ವಾಮೀಜಿಯೊಬ್ಬನ ಮೋಸ ಮತ್ತು ದೌರ್ಜನ್ಯವನ್ನು ದಿಟ್ಟವಾಗಿ ಎದುರಿಸುತ್ತಿರುವ ಮಹಿಳೆ ಇವರು.

ಸ್ವಾಮೀಜಿಯ ಅತ್ಯಾಚಾರಗಳ ಬಗೆಗೆ ಮಹಿಳೆಯರು ಒದಗಿಸುತ್ತಿರುವ ಸಾಕ್ಷ್ಯಗಳು ಒಂದೊಂದೇ ಹೊರಬಿದ್ದು ಕಣ್ಣಿದ್ದವರ ಮುಂದೇ ಈ ‘ಸಾಕ್ಷ್ಯಚಿತ್ರ’ಗಳೇ ದಟ್ಟೈಸುತ್ತಿದ್ದರೂ ರಾಜ್ಯದ ಘನ ಸರಕಾರ ಈ ಸ್ವಾಮೀಜಿಯ ಮೇಲೆ ಮೃದು ಧೋರಣೆ ತಳೆದಿದೆ. ನ್ಯಾಯಾಲಯದಲ್ಲಿ ಜಾಮೀನು ಪಡೆದುಕೊಳ್ಳುವವರೆಗೂ ಬಂಧಿ ಸದೇ ವಿಳಂಬ ಮಾಡಿದ್ದು ಅನುಮಾನಕ್ಕೆಡೆ ಕೊಡುತ್ತದೆ. ಸಮಾಜದ ಮೇಲೆ ಸಾಕಷ್ಟು ಪ್ರಭಾವ ಮತ್ತು ಹಿಡಿತ ಹೊಂದಿರುವ ಒಬ್ಬ ಬಲಾಢ್ಯ ಮಠವೊಂದರ ಹಿರಿಯ ಸ್ವಾಮೀಜಿ ಮುಗ್ಧ ಜನರ ಧಾರ್ಮಿಕ ನಂಬಿಕೆಗಳನ್ನು, ದೈವದ ಬಗೆಗಿನ ಭಯಭೀತಿಗಳನ್ನು, ತನ್ನ ಸ್ಥಾನಮಾನದ ಬಲವನ್ನು ದುರುಪಯೋಗ ಪಡಿಸಿಕೊಂಡು ಮಠದ ಭಕ್ತರಾದ ಮಹಿಳೆಯರ ಮೇಲೆ ಎರಗಿ ನಡೆಸಿರುವ ವಂಚಕ ಮತ್ತು ದೌರ್ಜನ್ಯಕಾರಿ ಕೃತ್ಯಗಳಿವು ಎಂಬುದು ಈ ಪ್ರಕರಣಗಳಲ್ಲಿ ಈಗ ಬಹುತೇಕ ನಿಸ್ಸಂಶಯ ಎಂಬಷ್ಟು ಸ್ಪಷ್ಟವಾಗಿ ಹೋಗಿದೆ. ವಿವಾಹಿತ ಮಹಿಳೆಯ ಮೇಲೆ ಮೇಲೆ ಹೀನಾಯ ಅತ್ಯಾಚಾರ... ಈಗ ಯುವತಿಯೊಬ್ಬಳು ಆಕೆ ಇನ್ನೂ ಅಪ್ರಾಪ್ತ ವಯಸ್ಸಿನ ಬಾಲಕಿಯಾಗಿದ್ದಾಗಿನಿಂದಲೇ ಆಕೆಯ ಮೇಲೆ ನಡೆಸಲಾದ ಅಮಾನವೀಯ ಕ್ರೌರ್ಯದ ಅನಾವರಣ, ಸಂತ್ರಸ್ತ ಮಹಿಳೆಯರೇ ದೂರು ನೀಡಿ ಬಂಧಿಸಲು ಆಗ್ರಹಗಳಿದ್ದರೂ ಬಂಧನವಿಲ್ಲ !!!

ಸರಕಾರದ ಈ ಧೋರಣೆಯನ್ನು ಒಪ್ಪುವುದು ಸಾಧ್ಯವೇ ಇಲ್ಲ. ಅತ್ಯಾಚಾರ ಆರೋಪಿ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮಿಯನ್ನು ಬಂಧಿಸಲೇಬೇಕೆಂದು ಒತ್ತಾಯಿಸಿ ವಿವಿಧ ಜನಪರ ಸಂಘಟನೆಗಳಿಂದ ರಾಜ್ಯಮಟ್ಟದ ಪ್ರತಿಭಟನಾ ರ್‍ಯಾಲಿಯೊಂದು ಸೆಪ್ಟೆಂಬರ್ 28, 2015 ರಂದು ನಡೆಯಿತು. ನಗರದ ರೈಲ್ವೆ ನಿಲ್ದಾಣದಲ್ಲಿ ನೆರೆದ ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು, ರೈತರು-ಕೃಷಿ ಕೂಲಿಕಾರರು, ಕಾರ್ಮಿಕರು, ಪ್ರಜಾಪಭುತ್ವ-ಮಾನವೀಯ ಮೌಲ್ಯಗಳಲ್ಲಿ ನಂಬಿಕೆ ಇಟ್ಟವರು ಒಂದುಗೂಡಿ ಹೆಜ್ಜೆ ಹಾಕಿದರು. ರಾಜ್ಯ ಸರಕಾರದ ಧೋರಣೆಗೆ ಧಿಕ್ಕಾರ ಹಾಕಿದರು. ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನಾ ಸಭೆಯನ್ನು ನಡೆಸಿದರು.



ಬಹಿರಂಗ ಸಭೆಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್. ವಿಮಲ ಅವರು ಮಾತನಾಡಿ ‘ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಸ್ವಾಮೀಜಿಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆರೋಪ ಪಟ್ಟಿಯೂ ಸಲ್ಲಿಕೆಯಾಗಿದೆ. ಆದರೂ ಆರೋಪಿಯನ್ನು ಬಂಧಿಸಿಲ್ಲ. ಸಾಮಾನ್ಯರ ಮೇಲೆ ಅತ್ಯಾಚಾರ ಅರೋಪದಡಿ ದೂರು ದಾಖಲಾದರೆ ಆರೋಪಿಯನ್ನು ಬಂಧಿಸಲಾಗುತ್ತದೆ. ಆದರೆ ಸ್ವಾಮೀಜಿಯ ವಿಷಯದಲ್ಲಿ ಈ ರಿಯಾಯಿತಿ ಎಕೆ’ ಎಂದು ಪ್ರಶ್ನಿಸಿದರು.

‘ಮಹಿಳೆಯರ ಮೇಲೆ ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ನಡೆದ ಪ್ರಕರಣಗಳ ತನಿಖೆಗಳು ಶೀಘ್ರಗತಿಯಲ್ಲಿ ನಡೆದು ಆರೋಪಿಗಳಿಗೆ ಶೀಘ್ರ ಶಿಕ್ಷೆ

ಪುಟ 12 ಕ್ಕೆ

AIDWA 9 ಸಮ್ಮೇಳನ
ಮಹಿಳಾ ಪುರವಣಿ

ರೇಗಾದಡಿ ಮಹಿಳೆಯರು ಬಹಳ ದೊಡ್ಡ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿರುವರು. ಆದರೆ ಕೆಲಸದ ಸ್ಥಳದಲ್ಲಿನ ಸೌಲತ್ತುಗಳನ್ನು ಒದಗಿಸುವಲ್ಲಿ, ತಕ್ಷಣ ಕೆಲಸ ಒದಗಿಸುವಲ್ಲಿ ಗ್ರಾಮ ಪಂಚಾಯತ್ ನಿರ್ಲಕ್ಷ್ಯ ತಾಳುತ್ತಿದೆ. ಆದರೆ ಉದ್ಯೋಗವನ್ನು ಖಾತ್ರಿಗೊಳಿಸುವ ಈ ಕಾಯ್ದೆಯು ಮಹಿಳೆಯರಿಗೆ ಬಹು ದೊಡ್ಡ ಶಕ್ತಿಯಾಗಿರುವುದರಿಂದ ಇದರ ಜಾರಿಯ ಹೊಣೆಯು ಮಹಿಳಾ ಚಳುವಳಿಯ ಮೇಲಿದೆ. ಆಡಳಿತ ಯಂತ್ರದ ಮೇಲೆ ಚಳುವಳಿಯ ಮೂಲಕ ಒತ್ತಡ ತರುವುದರೊದಿಗೆ ಸಮಾಜದಲ್ಲಿರುವ ಇತರೆ ಶ್ರಮಿಕ ಪರ ಶಕ್ತಿಗಳನ್ನು ಸೇರಿಸಿಕೊಂಡು ರೇಗಾ ಜಾರಿಗಾಗಿ ಮಹಿಳಾ ಚಳುವಳಿಯು ಗಂಭೀರ ಪ್ರಯತ್ನ ಮಾಡುವ ಅವಶ್ಯಕತೆ ಇದೆ. ನವ ಉದಾರವಾದವು, ಜಾಗತೀಕರಣವು ನಿರುದ್ಯೋಗ ಹುಟ್ಟು ಹಾಕುತ್ತಿದ್ದರೆ ಇದಕ್ಕೆ ಎದುರಾಗಿ ರೇಗಾ ಅಸ್ತ್ರವನ್ನು ಸಮರ್ಥವಾಗಿ ಕೈಗೆತ್ತಿಕೊಳ್ಳುವ ಸವಾಲನ್ನು ಸ್ವೀಕರಿಸಬೇಕಿದೆ. ಮತ್ತು ಸಮಸ್ತ ನಿರುದ್ಯೋಗಿ ಮಹಿಳೆಯರ ನೆರವಿಗಾಗಿ ರೇಗಾ ನಗರಕ್ಕೂ ವಿಸ್ತರಿಸಲು ಹಕ್ಕೊತ್ತಾಯ ಮಂಡಿಸಬೇಕಾಗುತ್ತದೆ. ಮಂಡ್ಯ ಮತ್ತು ಕಲ್ಬುರ್ಗಿಯಲ್ಲಿ ಈ ವರ್ಷ ನಡೆದ ರೇಗಾ ಕೆಲಸ ಇತರ ಜಿಲ್ಲೆಗಳಿಗೂ ಮಾದರಿಯಾಗಬೇಕು. ಇದು ಕೇವಲ ರೇಗಾ ಕೆಲಸ ಮತ್ತು ಕೂಲಿಯ ಪ್ರಶ್ನೆಯಾಗಿ ಉಳಿಯದೇ ಕೆರೆ ಕಟ್ಟೆಗಳ ನಿರ್ಮಾಣ ಬರದಿಂದ ಮುಕ್ತಿಯನ್ನೂ ಪಡೆಯುವ ದಾರಿಯಾಗಿದೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಜನವಾದಿಯು ಈ ನಿಟ್ಟಿನಲ್ಲಿ ಗಮನ ಹರಿಸಬೇಕು ಮತ್ತು ಕೆರೆ ಕಾಲುವೆಗಳನ್ನು ಉಳಿಸುವ ಜಲಜಾಗೃತಿಯ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಬೇಕು.

ಕಲಬುರಗಿಯಲ್ಲಿ 56 ಹಳ್ಳಿಗಳನ್ನು ತಲುಪಿದ ಮಹಿಳೆಯರ ರೇಗಾ ಅಭಿಯಾನ

ಕೆ. ನೀಲಾ

ಉದ್ಯೋಗ ಖಾತ್ರಿ ಕಾಯ್ದೆಯು ಜಾರಿಗೆ ಬಂದು ಬರೋಬ್ಬರಿ ಹತ್ತು ವರ್ಷಗಳಾದವು. ಕಾಯ್ದೆ ಬಂದ ವರ್ಷದಲ್ಲಿಯೇ ಬೀದರ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಕಾಯ್ದೆಯ ಬಗ್ಗೆ, ಅನುಷ್ಠಾನ ಮಾಡುವ ಬಗ್ಗೆ ಬಹು ದೊಡ್ಡ ಆಂದೋಲನವನ್ನೇ ನಡೆಸಲಾಗಿತ್ತು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷರಾದ ಸುಭಾಷಿಣಿ ಅಲಿ ಮತ್ತು ಮಹಿಳಾ ಸಂಘಟನೆಯ ಮುಖಂಡರಾದ ಬೃಂದಾ ಕಾರಟ್ ಮುಂತಾದವರು ಬೀದರ್‌ನ ಹೋರಾಟಗಳಿಗೂ, ಸಮಾವೇಶಗಳಿಗೂ ಬಂದಿದ್ದರು. ಉದ್ಯೋಗ ಖಾತ್ರಿ ಕಾಯ್ದೆಯ ಜಾರಿಗಾಗಿ ಮೂರು ಹಂತದ ಅಭಿಯಾನವು ಅಂದು ಜಿಲ್ಲೆಯಲ್ಲಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿ ದುಡಿಯುವ ವರ್ಗ ಎಚ್ಚೆತ್ತುಕೊಳ್ಳಲು ಸಾಧ್ಯವಾಗಿತ್ತು.

ಅಂತೆಯೇ ಕಳೆದೆರಡು ವರ್ಷಗಳಿಂದ ಕಲಬುರಗಿ ಜಿಲ್ಲೆಯಲ್ಲಿಯೂ ರೇಗಾ ಜಾರಿಗಾಗಿ ಅಜಾದ್‌ಪುರ ಗ್ರಾಮದಿಂದ, ಮೈಕ್ರೊ ಸಿಸ್ಟಮ್ ವಿಧಾನದಲ್ಲಿ ಆಂದೋಲನ ಆರಂಭಿಸಿದೆವು. ನೂರು ದಿನಗಳ ಕಾಲ ರೇಗಾ ಕಾಯಕದಲ್ಲಿ ತೊಡಗಿದ 300 ಮಹಿಳೆಯರು ಕೆರೆಯೊಂದನ್ನು ನಿರ್ಮಿಸಿ ನಾಡಿನ ಜನತೆಯ ಗಮನ ಸೆಳೆದಿದ್ದರು. ನಂತರದಲ್ಲಿ ಪಾಳಾ ಕೆರೆಯನ್ನು ಕೇಂದ್ರೀಕರಿಸಿಕೊಂಡು ರೇಗಾ ಆಂದೋಲನ ಆರಂಭಿಸಿದೆವು. ಹತ್ತು ಗ್ರಾಮ ಪಂಚಾಯತಿಗಳಲ್ಲಿ ರೇಗಾ ಜಾಗೃತಿ ಅಭಿಯಾನ ಕೈಗೊಳ್ಳಲಾಯಿತು. ಪಾಳಾ ಕೆರೆಯಲ್ಲಿ ಕೆಲಸ ಆರಂಭಗೊಂಡಿತು. ಹೋರಾಟವಿಲ್ಲದೆ ರೇಗಾ ಜಾರಿ ಒಂದ್ಹೆಜ್ಜೆಯೂ ಮುಂದಕ್ಕೆ ಹೋಗದ ಅನುಭವ ನಮ್ಮದಾಯಿತು.

ಹಿಂದಿನ ವರ್ಷದಂತೆ ಈ ವರ್ಷವೂ ಬರಗಾಲವೆಂಬುದು ಇನ್ನಷ್ಟು ನಿಷ್ಕರುಣಿಯಾಗಿ ಕಾಣಿಸಿಕೊಂಡಿತು. ನಮ್ಮ ಅಭಿಯಾನವನ್ನು ವಿಸ್ತರಿಸುವ ತೀರ್ಮಾನ ಮಾಡಿದೆವು. 'ಕೆಲಸದ ಹಕ್ಕು ನಮ್ಮ ಹಕ್ಕು, ಕೆರೆಯ ಪುನರುಜ್ಜೀವನ ಜಲವೇ ಜೀವನ' ಘೋಷಣೆಯಡಿ ರೋಜಗಾರ ದಿವಸವನ್ನು ಜಿಲ್ಲಾ ಪಂಚಾಯತಿಯ ನೆರವಿನೊಂದಿಗೆ ಆಳಂದ ತಾಲ್ಲೂಕಿನ ನರೋಣಾದ ಕೆರೆಯ ಮುಂದೆ ಇರುವ ಕ್ಷೇತ್ರ ಪಾಳ್ಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಹೆಸರಿನಲ್ಲಿ ಆಚರಿಸಿದೆವು. ಹೋರಾಟದ ಮೂಲಕ ರೇಗಾದ ಪ್ರಯೋಜನ ಪಡೆದ ಹಲವು ಹಳ್ಳಿಗಳ ಫಲಾನುಭವಿಗಳು ಬಾಜಾ-ಭಜಂತ್ರಿಯೊಂದಿಗೆ ಸಂಭ್ರಮದಿಂದ ಬಂದರು. ಹೀಗೆ ಹತ್ತಾರು ಹಳ್ಳಿಗಳಿಂದ ಹರಿದು ಬಂದ ಮಹಿಳೆ-ಪುರುಷರ ದಂಡು ನಾಲ್ಕು ಸಾವಿರ ದಾಟಿತ್ತು. ನಾವು ಕ್ರಮಿಸಬೇಕಾದ ದಾರಿಯ ಸೂಚಕವಾಗಿತ್ತು ಅಂದು ಬಂದ ಜನರಲ್ಲಿದ್ದ ನಿರೀಕ್ಷೆಗಳು.

ರೇಗಾ ಅಭಿಯಾನವನ್ನು ನಾವು ಕೈಗೆತ್ತಿಕೊಂಡಾಗೆಲ್ಲ ಅದು ಮೈಕ್ರೋದಿಂದ ಮ್ಯಾಕ್ರೊದತ್ತ ತಂತಾನೇ ವಿಸ್ತರಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿಯೇ ಆಳಂದ ತಾಲ್ಲೂಕಿನ ಗುಂಜಬಬಲಾದಿನಿಂದ ಪುಟಿದ ರೇಗಾ ಕೆಲಸದ ಆಗ್ರಹದ ಕಿಡಿಯು ಕ್ರಮೇಣ ನೂರಾರು ಹಳ್ಳಿಗಳಿಗೆ ವಿಸ್ತರಿಸಿಕೊಳ್ಳಲು ಸಾಧ್ಯವಾಯಿತು.



ಆಳಂದ ತಾಲ್ಲೂಕಿನ ಗುಂಜಬಬಲಾದನಲ್ಲಿ ಹೋರಾಟದ ಮೂಲಕ ಅರವತ್ತು ಜನರಿಗೆ ಕೆಲಸ ಕೊಡಿಸುವುದರೊಂದಿಗೆ ಆರಂಭವಾದ ನಮ್ಮ ಆಂದೋಲನವು, ಜಿಲ್ಲಾ ಪಂಚಾಯತಿ ಕೊಟ್ಟ ಎರಡು ವಾಹನಗಳಲ್ಲಿ ಎರಡು ತಂಡಗಳಾಗಿ ಹೊರಟವು. ಆರು ಜನ ಸಂಘಟಕರನ್ನೊಳಗೊಂಡ ಒಂದು ತಂಡವು ಗ್ರಾಮಗಳಲ್ಲಿ ಜನರನ್ನು ಸಂಘಟಿಸಿ, ಅವರ ಸಮಸ್ಯೆಗಳನ್ನು ಅರ್ಥೈಸಿಕೊಂಡು, ರೇಗಾ ಮಹತ್ವವನ್ನು ಮನನ ಮಾಡಿಸಿ, ಕೆಲಸ ಪಡೆದುಕೊಳ್ಳುವ ದಿಕ್ಕಿನತ್ತ ಪ್ರೇರಣೆ ಮಾಡುವುದು. ಆರು ಜನ ಶಿಕ್ಷಕರು ಮತ್ತು ಉಪನ್ಯಾಸಕರನ್ನೊಳಗೊಂಡ ಇನ್ನೊಂದು ತಂಡವು ಪ್ರೇರಣಾ ಸಭೆಯ ಮುಂದುವರೆದ ಭಾಗವಾಗಿ ಉದ್ಯೋಗ ಚೀಟಿ ಮತ್ತು ಕೆಲಸಕ್ಕಾಗಿ ಅರ್ಜಿಗಳನ್ನು ಗುಜರಾಯಿಸುವುದು ಮಾಡಿತು. ಗ್ರಾಮಗಳಲ್ಲಿ ಜನರ ದಾಖಲೆ ಪತ್ರಗಳನ್ನು ಜೆರಾಕ್ಸ್ ಮಾಡಿಸಿಕೊಳ್ಳಲು ಅನುಕೂಲವಿಲ್ಲದ ಕಾರಣ ನಮ್ಮ ಎರಡೂ ತಂಡದವರು ಒಂದೊಂದು ಜೆರಾಕ್ಸ್ ಯಂತ್ರಗಳನ್ನು ಜೊತೆಗೆ ಒಯ್ದು ಬೇಕಾದ ದಾಖಲೆಗಳ ಪ್ರತಿಗಳನ್ನು ಮಾಡಿ ಕೊಡುತ್ತಿದ್ದೆವು. ನಮ್ಮೆರಡೂ ವಾಹನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಫಾರಂ ನಂಬರ್ 1 ಮತ್ತು ಫಾರಂ ನಂಬರ್ 6 ಇಟ್ಟುಕೊಂಡಿರುತ್ತಿದ್ದೆವು. ಅರ್ಜಿಗೆ ಬೇಕಾದ ದಾಖಲೆಗಳನ್ನು ಜನರು ತುಂಬ ತ್ವರಿತವಾಗಿ ತರುತ್ತಿದ್ದರು. ಆದ್ದರಿಂದಲೇ ದಿನವೊಂದಕ್ಕೆ ಸುಮಾರು ಮುನ್ನೂರು ನಾಲ್ಕು ನೂರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳ ಅರ್ಜಿಗಳನ್ನು ತುಂಬಿಸಲಾಗಿದೆ. ಪ್ರತಿ ಗ್ರಾಮದಲ್ಲಿ ಕೆಲಸ ಬಯಸಿ ಬರುವವರ ಸಂಖ್ಯೆ ಹೆಚ್ಚತೊಡಗಿತು. ಪ್ರತಿ ಹಳ್ಳಿಯಲ್ಲಿಯೂ ಅರ್ಜಿಗಳನ್ನು ತುಂಬಿಸಿದ ಮೂರ್‍ನಾಲ್ಕು ದಿನಗಳಲ್ಲಿ ಎನ್.ಎಂ.ಆರ್. ಜನರೇಟ್ ಮಾಡಿಸಿ ಕೆಲಸ ಒದಗಿಸಲಾಗಿದೆ.

ಕೆರೆಗಳನ್ನು ಕೇಂದ್ರವಾಗಿಟ್ಟುಕೊಂಡು ಆರಂಭವಾದ ನಮ್ಮ ರೇಗಾ ಅಭಿಯಾನದಿಂದಾಗಿ 23 ಕೆರೆಗಳಲ್ಲಿ ಕೆರೆ ಹೂಳೆತ್ತುವ ಕಾಮಗಾರಿ ಆರಂಭಗೊಂಡಿದೆ.

ನಮ್ಮ ಅಭಿಯಾನದ ಗುರಿಯು ನೀರಿನ ಅಂತರ್ಜಲ ಮಟ್ಟ ಹೆಚ್ಚಿಸುವುದು, ಜನತೆಯ ಕೈಗೆ ಕೆಲಸ ದೊರಕಿಸುವುದು, ಕೂಲಿ ಪಾವತಿಯಾಗುವಂತೆ ನೋಡಿಕೊಳ್ಳುವುದು, ವಲಸೆ ತಪ್ಪಿಸುವುದು ಆಗಿರುವುದರಿಂದ ಅಭಿಯಾನವು ಈ ದಿಕ್ಕಿನಲ್ಲಿಯೇ ವ್ಯವಸ್ಥಿತವಾಗಿ ಸಾಗಿತು. ಕೆಲವು ಕಡೆ ಹೋರಾಟದ ಮೂಲಕವೇ ರೇಗಾ ಜಾರಿ ಸಾಧ್ಯವಾಗಿದೆ.

ಈವರೆಗೆ 45 ದಿನಗಳ ಅಭಿಯಾನ ನಡೆದಿದೆ. ಒಟ್ಟು 25 ಗ್ರಾಮ ಪಂಚಾಯತಿಗಳ 56 ಹಳ್ಳಿಗಳನ್ನು ತಲುಪಲು ಸಾಧ್ಯವಾಗಿದೆ. 23 ಕೆರೆಗಳು ಮತ್ತು 6 ಗೋಕಟ್ಟಾಗಳಲ್ಲಿ ಕಾಮಗಾರಿ ಆರಂಭ ಮಾಡಲಾಗಿದೆ. ಜೊತೆಗೆ ಕೃಷಿಗೆ ಮತ್ತು ರೈತರಿಗೆ ಅನುಕೂಲಕರವಾದ ಹೊಲಗಳಲ್ಲಿ ಕೃಷಿ ಹೊಂಡ ನಿರ್ಮಾಣ, ಹೊಲದ ಬದು ನಿರ್ಮಾಣ, ಅರಣಿ ನಿರ್ಮಿಸುವಂಥ ಕಾಮಗಾರಿಗಳಲ್ಲಿಯೂ ಶ್ರಮಿಕರು ಕೆಲಸ ಮಾಡುತ್ತಿರುವರು. ಈ ವರದಿ ಬರೆಯುವ ಹೊತ್ತಿನವರೆಗೆ ಆಳಂದ ತಾಲ್ಲೂಕ್ಕೊಂದರಲ್ಲಿಯೇ 2ಲಕ್ಷ 46 ಸಾವಿರ ಮಾನವ ದಿನಗಳಷ್ಟು ಕೆಲಸ ಸೃಷ್ಟಿಯಾಗಿವೆ. ಹಾಗೆಯೇ ಅಫಜಲಪುರ ತಾಲ್ಲೂಕಿನಲ್ಲಿ 40 ಸಾವಿರದಷ್ಟು ಕೆಲಸದ ಮಾನವ ದಿನಗಳು ಸೃಷ್ಟಿಯಾಗಿವೆ. ಮತ್ತು ಕಲಬುರಗಿಯ ಮೂರು ಗ್ರಾಮ ಪಂಚಾಯತ್‌ಗಳ ಹಳ್ಳಿಗಳಲ್ಲಿಯೂ ಶ್ರಮಿಕರು ಕೆಲಸ ಮಾಡುತ್ತಿರುವರು.

ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಹ ಕ್ರಮೇಣ ಹಿಂದಿನ ಆಲಸ್ಯ ಬಿಟ್ಟು, ಕಾಳಜಿಯಿಂದ, ಕುತೂಹಲದಿಂದ ಕೆಲಸಕ್ಕಿಳಿದರು. ಹಿಂದೆ ಗ್ರಾಮ ಪಂಚಾಯತಿಯ ಕೆಲವು ಚುನಾಯಿತ ಸದಸ್ಯರು, ಅಧಿಕಾರಿ-ಸಿಬ್ಬಂದಿಗಳು ಮತ್ತು ಗ್ರಾಮದಲ್ಲಿರುವ ಪಟ್ಟಭದ್ರ ಶಕ್ತಿಗಳು ಒಟ್ಟಾಗಿ ರೇಗಾ ಹಣ ಲೂಟಿ ಮಾಡಿರುವುದರ ಕರಾಳ ಇತಿಹಾಸವೇ ಇದೆ. ಈ ಗ್ರಾಮೀಣಾಭಿವೃದ್ಧಿ ವಿರೋಧಿ ಕೂಟವನ್ನು ಹಿಮ್ಮೆಟ್ಟಿಸದೆ ರೇಗಾ ನೈಜ ಅರ್ಥದಲ್ಲಿ ಜಾರಿಯಾಗುವುದಿಲ್ಲ. ನಮ್ಮ ಅಭಿಯಾನದ ಸಂದರ್ಭದಲ್ಲಿ ವೈಜಾಪುರ, ನರೋಣ, ಎಲೆನಾವದಗಿ ಮುಂತಾದ ಗ್ರಾಮ ಪಂಚಾಯತಿಗಳಲ್ಲಿ ಚುನಾಯಿತ ಸದಸ್ಯರು ರೇಗಾ ಬೆಂಬಲಿಸಿದ್ದು ನಮಗೆ ಸಂತಸ ತಂದಿದೆ.

ಈ ಅಭಿಯಾನದುದ್ದಕ್ಕೂ ನಮ್ಮೊಂದಿಗೆ ಕೈ ಜೋಡಿಸಿದವರು ಕಲಬುರಗಿ ನಗರದ ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು. ಬಹುಶಃ ಕರ್ನಾಟಕದಲ್ಲಿಯೇ ಈ ತೆರನಾಗಿ ಶಿಕ್ಷಕರು, ಪ್ರೊಫೆಸರ್‌ಗಳು, ಅಕಾಡೆಮಿಕ್ ಲೋಕದ ಅಕ್ಷರಸ್ಥರು ಮತ್ತು ಸಂಘಟಕರು ಒಟ್ಟಾಗಿ ಕಾಯ್ದೆಯೊಂದನ್ನು ಜಾರಿಗೊಳಿಸಲಿಕ್ಕಾಗಿ ತಳ ಹಂತದಿಂದ ಕಾರ್ಯತತ್ಪರವಾಗಿದ್ದು ಇದೇ ಮೊದಲಿರಬೇಕೇನೊ!

ಆದ್ದರಿಂದಲೇ ತುಂಬ ಸೂಕ್ಷ್ಮ ಸಂವೇದನೆಯುಳ್ಳ ಮತ್ತು ರೇಗಾ ಜಾರಿಯ ಬಗ್ಗೆ ತೀವ್ರ ಕಾಳಜಿ ಹೊಂದಿರುವ ಕಲಬುರಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಅಭಿನಂದನಾ ಪತ್ರದಲ್ಲಿ ನಮ್ಮ ಅಭಿಯಾನವನ್ನು 'ಗೋಲ್ಡನ್ ಮೊಮೆಂಟ್' (ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ಸಂದರ್ಭ) ಎಂದು ಶ್ಲಾಘಿಸಿರುವರು. ಜನರ ಸಂಕಟಗಳನ್ನು ಅರಿತು, ಸ್ಪಂದಿಸುವ ಸೂಕ್ಷ್ಮ ಸಂವೇದನಾಶೀಲ ಅಧಿಕಾರಿ ವರ್ಗವಿದ್ದಲ್ಲಿ ಮತ್ತು ತಳ ಹಂತದವರೆಗೂ ಹೋಗಿ ಕೆಲಸ ಮಾಡುವ ಸಂಘಟನೆಗಳಿದ್ದಲ್ಲಿ ರೇಗಾದಂತಹ ಕಾಯ್ದೆಯನ್ನು ಅತ್ಯದ್ಭುತವಾಗಿ ಜಾರಿ ಮಾಡಬಹುದು ಎನ್ನುವುದಕ್ಕೆ ನಮ್ಮ ಅಭಿಯಾನವು ಸಾಕ್ಷಿಯಾಗಿದೆ. ಅದ್ಭುತವಾದ ಐಕ್ಯತೆ, ಸಂಯೋಜನೆ ಮತ್ತು ಸಂಘಟನಾ ಶಕ್ತಿಯಿದ್ದಲ್ಲಿ ಪರಿಣಾಮಕಾರಿಯಾಗಿ ಸ್ಪಷ್ಟ ಫಲಿತಾಂಶದ ಕೆಲಸ ಮಾಡಬಹುದು. ಪ್ರತಿ ಗ್ರಾಮಗಳಲ್ಲಿ ಸಾವಿರಾರು ಜನರು ರೇಗಾದಡಿ ಕೆಲಸ ಆರಂಭ ಮಾಡಿದ್ದು ನಮಗಂತೂ ಖುಷಿ ತಂದಿದೆ. ಅದರಲ್ಲಿಯೂ ಮುನ್ನಳ್ಳಿ, ಕಡಗಂಚಿಯಂಥ ದೊಡ್ಡ ಗ್ರಾಮಗಳಲ್ಲಿ ಮಹಿಳೆಯರು ನೇತೃತ್ವ ವಹಿಸಿ, ಗ್ರಾಮ ಪಂಚಾಯತಿ ಘೇರಾವ್ ಮಾಡಿ, ಕೆರೆಯ ಹೂಳೆತ್ತುವ ಕಾಮಗಾರಿಯಲ್ಲಿ ಸಾವಿರಗಟ್ಟಲೆ ಜನರನ್ನು ಫಲಾನುಭವಿಗಳಾಗಿಸಿದ್ದು ಹೆಮ್ಮೆಯ ಸಂಗತಿ. ಕೆಲವು ಹಳ್ಳಿಗಳಲ್ಲಿ ದಂಪತಿಗಳು ಹಠ ಹಿಡಿದು ರೇಗಾ ಯಶಸ್ಸಿಗೆ ಟೊಂಕ ಕಟ್ಟಿ ನಿಂತಿದ್ದಾರೆ. ಆಂದೋಲನದಲ್ಲಿ ನಾಯಕತ್ವದ ದಂಡು ತಂತಾನೇ ಹೆಡೆಮುರಿದು ಏಳುವುದು ಎನ್ನುವುದಕ್ಕೆ ನಮ್ಮ ಅಭಿಯಾನವು ಸಾಕ್ಷಿಯಾಗಿ ನಿಂತಿದೆ. ●

ಅತ್ಯಾಚಾರಿ ರಾಘವೇಶ್ವರ ಸ್ವಾಮೀಜಿಯನ್ನು.........

ಪುಟ 11 ರಿಂದ

ನೀಡಬೇಕೆಂದು ನ್ಯಾ.ವರ್ಮಾ 2013ರಲ್ಲಿ ಸಲ್ಲಿಸಿದ ವರದಿಯಲ್ಲಿ ಪ್ರತಿಪಾದಿಸಿದ್ದಾರೆ. ಇಂತಹ ಉತ್ತಮ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಬೇಕು.? ಎಂದು ಅವರು ಸರಕಾರವನ್ನು ಒತ್ತಾಯಿಸಿದರು.

ಮೊದಲ ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿರುವುದನ್ನು ಸ್ವಾಗತಿಸಿ ರಾಘವೇಶ್ವರ ಪಡೆದುಕೊಂಡಿರುವ ಜಾಮೀನು ರದ್ದತಿಗೆ ಅಗತ್ಯವಾದ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು ಮತ್ತು ಈಗಾಗಲೇ ಪ್ರಾರಂಭಿಸಿರುವ ಎರಡನೇ ಪ್ರಕರಣದ ತನಿಖೆಯನ್ನು ಚುರುಕಾಗಿ ಮಾಡಿ ಮುಗಿಸಿ ದೋಷಾರೋಪ ಪಟ್ಟಿ ಸಲ್ಲಿಸಬೇಕೆಂದು ಆಗ್ರಹಿಸಿದರು.

'ಕಾಮಿಸ್ವಾಮಿ ಪರಪ್ಪನ ಆಗ್ರಹಾರದಲ್ಲಿ ಮುದ್ದೆ ಮುರಿಯಬೇಕು..'

ರಾಘವೇಶ್ವರ ಸ್ವಾಮೀಜಿ ಕಾನೂನಿಗಿಂತ ದೊಡ್ಡವರೇ? ಎಂದು ಪ್ರಶ್ನಿಸಿದ ವಿಮಲ ಕಾಮಿ ಸ್ವಾಮಿಯ ಎಲ್ಲ ಅತ್ಯಾಚಾರ ಆರೋಪಿಗಳಂತೆ ಪರಪ್ಪನ ಆಗ್ರಹಾರದ ಜೈಲಿನಲ್ಲಿ ಮುದ್ದೆ ಮುರಿಯಲೇ ಬೇಕು. ಸಂಘಟನೆಗಳ ಐಕ್ಯ ಚಳುವಳಿ ನ್ಯಾಯ ಸಿಗುವವರೆಗೆ ಹೋರಾಟ ನಿಲ್ಲಿಸುವುದಿಲ್ಲ ಎಂದು ಘೋಷಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕಿ ಎಸ್. ವರಲಕ್ಷ್ಮಿಯವರು ಮಾತನಾಡಿ 'ಈ ಹಿಂದೆ ಅತ್ಯಾಚಾರ ಆರೋಪಗಳು ಬಂದ ಸ್ವಾಮೀಜಿಗಳನ್ನು ಬಂಧಿಸಲಾಗಿದೆ. ಆದರೆ ರಾಮಚಂದ್ರಪುರದ ರಾಘವೇಶ್ವರ ಸ್ವಾಮೀಜಿ ಮೇಲ್ಜಾತಿಯ ಪ್ರಭಾವಶಾಲಿ ಸ್ವಾಮೀಜಿಯಾದ್ದರಿಂದ ಆತನನ್ನು ರಕ್ಷಿಸಲಾಗುತ್ತಿದೆ. ಅತ್ಯಾಚಾರ ಆರೋಪಿ ರಾಘವೇಶ್ವರ ಸ್ವಾಮೀಜಿಯ ಬಂಧನವಾಗುವವರೆಗೆ ಹೋರಾಟ ನಿಲ್ಲುವುದಿಲ್ಲ.' ಎಂದರು.

ಭಾರತ ವಿದ್ಯಾರ್ಥಿ ಫೆಡರೇಷನ್, ವಿದ್ಯಾರ್ಥಿನಿಯರ ಉಪಸಮಿತಿಯ ರಾಜ್ಯ ಸಂಚಾಲಕಿ ರೇಣುಕಾ ಕಹಾರ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ವಿ. ಗೀತಾ, ಉಪಾಧ್ಯಕ್ಷೆ ಗೌರಮ್ಮ, ಜಂಟೀ ಕಾರ್ಯದರ್ಶಿ ದೇವಿ, ಮಹಿಳೆಯರ ಸಮನ್ವಯ ಸಮಿತಿಯ ಮುಖಂಡರಾದ ಲಲಿತಾ ಶೆಣೈ, ಟಿ. ಲೀಲಾವತಿ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆಯ ಮಹಿಳಾ ಉಪಸಮಿತಿಯ ಸದಸ್ಯರಾದ ಸರೋಜಮ್ಮ ಮುಂತಾದವರು ವೇದಿಕೆಯಲ್ಲಿದ್ದರು. ಜನವಾದಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಲಕ್ಷ್ಮಿ ಕಾರ್ಯಕ್ರಮ ನಿರೂಪಿಸಿದರು.

ಸಭೆಯ ಬಳಿಕ ವಿವಿಧ ಸಂಘಟನೆಗಳ ಪ್ರತಿನಿಧಿಗಳ ನಿಯೋಗ ತೆರಳಿ ರಾಜ್ಯ ಮುಖ್ಯಮಂತ್ರಿಗಳ ಮುಖ್ಯಕಾರ್ಯದರ್ಶಿ ಸಿಂಧೆ ಅವರನ್ನು ಭೇಟಿಮಾಡಿ ಚಳುವಳಿಯ ಒತ್ತಾಯಗಳನ್ನು ಲಿಖಿತವಾಗಿ ಸಲ್ಲಿಸಿತು. ●

ಕರ್ನಾಟಕ ಮಹಿಳೆಯರ ಪರಿಸ್ಥಿತಿ......... ಪುಟ 9 ರಿಂದ

ಇನ್ನಷ್ಟು ಕಲುಷಿತಗೊಳ್ಳುತ್ತಿದೆ.

ನವಉದಾರವಾದ ಹುಟ್ಟಿಸುತ್ತಿರುವ ಕುರುಡು ಕಾಂಚಾಣ ದಾಹ

ವೈಯಕ್ತಿಕ ಬದುಕಿನ ಸಾಂಸ್ಕೃತಿಕ ಸಂಭ್ರಮಾಚರಣೆಗಳೆಲ್ಲ ಈಗ ಮಾರುಕಟ್ಟೆಯನ್ನು ತಣಿಸುವ ದಿಸೆಯಲ್ಲಿ ಪುನರ್‌ರಚನೆಗೊಳ್ಳುತ್ತಿವೆ. ಅದ್ದೂರಿ ಮದುವೆಗಳು, ಮಕ್ಕಳ ಹುಟ್ಟು ಹಬ್ಬದ ಆಚರಣೆಗಳು, ಬಸುರಿಯಿದ್ದಾಗ ನಡೆಸುವ ಸೀಮಂತ (ಕುಬುಸದ ಕಾರ್‍ಯ), ಮದುವೆಗೂ ಮುನ್ನದ ನೆಂಟಸ್ತನದ ಕಾರ್ಯಕ್ರಮಗಳೆಲ್ಲವೂ ಕುಟುಂಬದ ಆಚರಣೆಗಳಾಗಿ ಉಳಿಯದೆ ಈಗ ಅವು ಮಾರುಕಟ್ಟೆಯೊಂದಿಗೆ ತಳುಕು ಹಾಕಿಕೊಂಡು ಬೆಳೆಯುತ್ತಿವೆ. ಸಣ್ಣ ಪುಟ್ಟ ಸಂತೋಷಗಳನ್ನು ಹಂಚಿಕೊಳ್ಳಲು ವ್ಯಾಪಾರಿ ಸಂಬಂಧಗಳೇ ಜೋಡಿಸಿಕೊಳ್ಳುತ್ತಿವೆ.

ನಗರೀಕರಣ ಮತ್ತು ಅಪಾಯದಂಚಿನಲ್ಲಿ ಮಹಿಳಾ ಬದುಕು

ರೈತರಂತೂ ನಗರಕ್ಕೆ ವಲಸೆ ಬಂದು ಕಾರ್ಮಿಕರಾಗಿ ಮಾರ್ಪಟ್ಟು ಬಹಳ ಸಮಯವಾಯಿತು. ಇನ್ನು ಸರಕಾರಕ್ಕೂ ಹಳ್ಳಿಗಳು ಅಭಿವೃದ್ಧಿ ಹೊಂದುವುದಾಗಲಿ, ಅಲ್ಲಿನ ಜನಸಮುದಾಯವು ಘನತೆಯಿಂದ ಬದುಕುವುದಾಗಲಿ ಬೇಕಿಲ್ಲ. ಕಾರ್ಪೋರೇಟ್ ಹಿತಾಸಕ್ತಿ ಕಾಪಾಡಲು ಭ್ರಮಾತ್ಮಕ ಅಭಿವೃದ್ಧಿಯ ಪರಿಕಲ್ಪನೆಗಳನ್ನು ಹುಟ್ಟು ಹಾಕಿ ನಗರೀಕರಣಕ್ಕೆ ಪ್ರೇರೇಪಿಸುವ ನೀತಿಗಳನ್ನು ಸರಕಾರ ತರುತ್ತಿದೆ. ಮಹಿಳೆಯ ಶ್ರಮವನ್ನು ನಗರಗಳಲ್ಲಿ ಅತ್ಯಂತ ಕಡಿಮೆ ಬೆಲೆಗೆ ಖರಿದಿಸುವ ವ್ಯಾಪಾರ ವರ್ಗವು ಅನೇಕ ಕ್ಷೇತ್ರಗಳಲ್ಲಿ ತಲೆಯೆತ್ತಿವೆ. ದುಡಿಮೆಗೆ ತಕ್ಕ ಆರ್ಥಿಕ ಮೌಲ್ಯ ಸಿಗಲಾರದ್ದಕ್ಕಾಗಿ ಮಹಿಳೆಯು ದುಪ್ಪಟ್ಟು ದುಡಿಮೆಗೆ ಒಡ್ಡಿಕೊಳ್ಳುವ ಇಲ್ಲವೆ ದೇಹವನ್ನೇ ಸರಕಾಗಿಸಿಕೊಳ್ಳುವ ಒತ್ತಡ ಸೃಷ್ಟಿಸಲಾಗುತ್ತಿದೆ. ನಗರಗಳಲ್ಲಿ ತೀವ್ರಗೊಳ್ಳುತ್ತಿರುವ ನಿರುದ್ಯೋಗವು ಕ್ರೈಮ್ ಪ್ರವೃತ್ತಿಗೆ ಪೋಷಿಸುತ್ತಿದೆ. ಸೆಕ್ಸ್ ಮತ್ತು ಕ್ರೈಮ್ ಬೆಳೆದಲ್ಲಿ ಮಹಿಳೆಯ ಮೇಲೆ ಧಾಳಿಗಳು, ಅತ್ಯಾಚಾರಗಳು, ವೃದ್ಧೆಯರ ಕೊಲೆಗಳು ನಡೆಯುತ್ತಿವೆ. ಮಹಿಳೆಯರ ಮಾರಾಟ ಸಾಗಾಟದೊಂದಿಗೆ ಲೈಂಗಿಕ ವ್ಯಾಪಾರ ವಿಸ್ತರಣೆಗೊಳ್ಳುತ್ತ ಸಾಗುತ್ತದೆ.

ಬರ–ನೆರೆ ಕಣ್ಣೀರು

ಗೇಣು ಹೊಟ್ಟೆ ತುಂಬಿಸಿಕೊಳ್ಳಲು ವಲಸೆ ಹೋಗುವುದು ಅನಿವಾರ್ಯವಾಗಿದೆ. ಈ ಬಾರಿಯೂ ಕಳೆದ ವರ್ಷದಂತೆ ಬರಗಾಲವು ಅಸಹನೀಯವಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಜನತೆಯು ಕೆಲಸವಿಲ್ಲದೆ ಗುಳೆ ಹೋದರು. ಅದರೆ ಈ ಬಾರಿಯ ಗುಳೆಯು ಆಘಾತಕಾರಿಯಾಗಿತ್ತು. ಏಕೆಂದರೆ ಪ್ರತಿ ವರ್ಷ ಗುಳೆ ಹೋದವರು ದೊಡ್ಡ ಪಟ್ಟಣಗಳಲ್ಲಿ ಕೆಲಸ ಸಿಕ್ಕು ಅಲ್ಲಿಯೇ ಇರುತ್ತಿದ್ದರು. ಆದರೆ ಈ ವರ್ಷ ಮಹಾನಗರಗಳಲ್ಲಿಯೂ ಕೆಲಸ ಸಿಗದೆ ಹಳ್ಳಿಗೆ ವಾಪಾಸಾಗುತ್ತಿರುವ ಉದಾಹರಣೆಗಳೂ ಇವೆ. ಮತ್ತು ಇಲ್ಲಿಯೂ ಕೆಲಸ ಸಿಗದೆ ಬಹಳ ಕಷ್ಟ ಪಟ್ಟಿರುವರು. ಆಗೆಲ್ಲ ಮಹಿಳೆಯರು, ಬಾಲಕಿಯರು ಅನೇಕ ತೆರನಾದ ಹಿಂಸೆಗಳನ್ನು ಅನುಭವಿಸಿರುವರು. ಲೈಂಗಿಕ ದೌರ್ಜನ್ಯಗಳಿಗೂ ಬಲಿಯಾಗಿರುವರು.

ನೆರೆ ಬಂದಾಗಲೂ ಮಹಿಳೆಯರು ಇನ್ನಿಲ್ಲದ ಸಂಕಟಕ್ಕೆ ಒಳಗಾಗಿದ್ದರು. ಬರ ಬಂದಾಗಲೂ ಮಹಿಳೆಯರ ವಲಸೆಯಲ್ಲಿ ಹೆಚ್ಚಳವಾಗಿ, ವಿದ್ಯಾರ್ಥಿನಿಯರು ಶಾಲೆ ಬಿಡುವಂತಾಗಿ, ದುಪ್ಪಟ್ಟು ದುಡಿದರೂ ಕೂಲಿ ಸಿಗದಂತಾಗಿದೆ. ಜನರಿಗೆ ಕುಡಿಯುವ ನೀರು ಕೊಡಲು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲವೆಂದಾದರೆ ಬಾಟಲಿ ನೀರು ಎಲ್ಲಿಂದ ಬಂತು? ನೀರಿನ ಹಾಹಾಕಾರದ ಹೊತ್ತಿನಲ್ಲಿ ಟ್ಯಾಂಕರ್ ಮೂಲಕ ನೀರು ವಿತರಣೆಯೆಂಬುದೊಂದು ನೀರಿನ ಗುತ್ತಿಗೆದಾರರಿಗೊಂದು ಹಣ ಮಾಡುವ ದಂಧೆಯಾಗಿ ಬಂದಿದೆ. ಈಗಾಗಲೆ ಬತ್ತಿ ಹೋದ ಕೆರೆ ಬಾವಿಗಳಿಂದ ನೀರು ಸಿಗದ್ದರಿಂದ ಮಹಿಳೆಯರು ಐದಾರು ಕೀ.ಮೀ. ದೂರದಿಂದ ನೀರು ಹೊತ್ತು ತಂದಿದ್ದಾರೆ. ನೀರು ಸಿಗಲಾರದ್ದಕ್ಕೆ ಊರು ಬಿಟ್ಟಿದ್ದಾರೆ.

ರೇಗಾ ಮತ್ತು ಮಹಿಳೆ

ಕಳೆದ ಮೂರು ತಿಂಗಳಿಂದ ಕರ್ನಾಟಕ ರಾಜ್ಯದಲ್ಲಿ 500 ಕೋಟಿಯಷ್ಟು ರೇಗಾ ಕೂಲಿ ಹಣ ಬಾಕಿ ಉಳಿದಿದೆ. ಜನವಾದಿ ಮಹಿಳಾ ಸಂಘಟನೆ ಮುತುವರ್ಜಿ ವಹಿಸಿದ ಜಿಲ್ಲೆಗಳಲ್ಲಿ ಪರಿಸ್ಥಿತಿ ಸ್ವಲ್ಪ ಬೇರೆಯಿದೆ. ಕೂಲಿ ಉಳಿದುಕೊಂಡದ್ದಕ್ಕೆ ಕಾರಣವಾಗಿರುವ ಕೇಂದ್ರ ಸರಕಾರವು ಗ್ರಾಮೀಣ ಶ್ರಮಿಕ ವಿರೋಧಿ ನಂಬಿಕೆ ತಾಳಿದೆ ಎಂಬುದು ಕೂಲಿ ಪಾವತಿ ವಿಳಂಬದಿಂದ ಸಾಬೀತಾಗುವುದು. ಉದ್ಯೋಗವನ್ನು ಖಾತ್ರಿಗೊಳಿಸುವ ಈ ಕಾಯ್ದೆಯು ಮಹಿಳೆಯರಿಗೆ ಬಹು ದೊಡ್ಡ ಶಕ್ತಿಯಾಗಿರುವುದರಿಂದ ಇದರ ಜಾರಿಯ ಹೊಣೆಯು ಮಹಿಳಾ ಚಳುವಳಿಯ ಮೇಲಿದೆ. ನವ ಉದಾರವಾದವು, ಜಾಗತೀಕರಣವು ನಿರುದ್ಯೋಗ ಹುಟ್ಟು ಹಾಕುತ್ತಿದ್ದರೆ ಇದಕ್ಕೆ ಎದುರಾಗಿ ರೇಗಾ ಅಸ್ತ್ರವನ್ನು ಸಮರ್ಥವಾಗಿ ಕೈಗೆತ್ತಿಕೊಳ್ಳುವ ಸವಾಲನ್ನು ಸ್ವೀಕರಿಸಬೇಕಿದೆ. ಮತ್ತು ಸಮಸ್ತ ನಿರುದ್ಯೋಗಿ ಮಹಿಳೆಯರ ನೆರವಿಗಾಗಿ ರೇಗಾ ನಗರಕ್ಕೂ ವಿಸ್ತರಿಸಲು ಹಕ್ಕೊತ್ತಾಯ ಮಂಡಿಸಬೇಕಾಗುತ್ತದೆ. ಮಂಡ್ಯ ಮತ್ತು ಕಲ್ಬುರ್ಗಿಯಲ್ಲಿ ಈ ವರ್ಷ ನಡೆದ ರೇಗಾ ಕೆಲಸ ಇತರ ಜಿಲ್ಲೆಗಳಿಗೂ ಮಾದರಿಯಾಗಬೇಕು. ಇದು ಕೇವಲ ರೇಗಾ ಕೆಲಸ ಮತ್ತು ಕೂಲಿಯ ಪ್ರಶ್ನೆಯಾಗಿ ಉಳಿಯದೇ ಕೆರೆ ಕಟ್ಟೆಗಳ ನಿರ್ಮಾಣ ಬರದಿಂದ ಮುಕ್ತಿಯನ್ನೂ ಪಡೆಯುವ ದಾರಿಯಾಗಿದೆ.

ಕೊಳಚೆ ಪ್ರದೇಶದಲ್ಲಿರುವ ಮಹಿಳೆಯರ ಸ್ಥಿತಿಗತಿ

ಈಚೆಗಿನ ವರ್ಷಗಳಗಳಲ್ಲಿ ನಗರೀಕರಣ ಹೆಚ್ಚುತ್ತಿದೆ. ಅಂದರೆ ನಗರಗಳಲ್ಲಿ ಕೊಳಚೆ ಪ್ರದೇಶಗಳು ಹೆಚ್ಚುತ್ತಿವೆ ಎಂತಲೇ ಅರ್ಥ. ಇಲ್ಲಿ ವಾಸಿಸುವ ಹೆಣ್ಣುಮಕ್ಕಳ ಪರಿಸ್ಥಿತಿ ದಯನೀಯವೇ ಆಗಿರುತ್ತದೆ. ಇಲ್ಲಿನ ಮಹಿಳೆಯರು ಹೋಟೆಲ್ ಕೆಲಸಕ್ಕೆ, ಕಟ್ಟಡ ನಿರ್ಮಾಣದ ಕೆಲಸಕ್ಕೆ, ಮಾಲ್‌ಗಳಲ್ಲಿ ದಿನಸಿ ಹಸನು ಮಾಡುವುದಕ್ಕೆ, ಬಟ್ಟೆ ಅಂಗಡಿಗಳಲಿ ಮತ್ತಿತರ ಕೂಲಿ ಕೆಲಸಕ್ಕೆ ಹೋಗುವರು. ಹೋಮ್ ಬೇಸ್ಡ್ ಸೆಕ್ಸ್ ವರ್ಕ್ಸ್ ನಡೆಸುವುದರ ಜೊತೆಗೆ ಬೇರೆಡೆಯಿಂದಲೂ ಬಂದವರಿಗೆ ಈ ದಂ ಧೆ ನಡೆಸಲು ಗಂಟೆಯಾಧಾರಿತವಾಗಿ ಜಾಗವನ್ನು ಬಾಡಿಗೆ ಕೊಡಲಾಗುತ್ತಿದೆ. ನಿರುದ್ಯೋಗ ಕಾರಣವಾಗಿಯೂ ಕ್ರಮೇಣ ಈ ಕೆಲಸವನ್ನೇ ಮೂಲ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ನಮ್ಮ ಸಂಘಟನೆಗೆ ಆದ್ಯತೆಯಾಗಿ ಬರಲೆಬೇಕಾದ ಮಹಿಳಾ ಸಮುದಾಯವೆಂದರೆ ಭಂಗಿ ಕೆಲಸದಲ್ಲಿ ತೊಡಗಿಕೊಂಡಿರುವ ಮಹಿಳೆಯರ ಜೀವನ. ಮನುಷ್ಯರ ಕೊಳಕನ್ನು ಬಾಚುವ ಮತ್ತು ಶೌಚ ಸ್ವಚ್ಛತೆಯಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಆರೋಗ್ಯ, ಸಾಮಾಜಿಕ ಘನತೆಯಿಂದ ವಂಚಿತರಾಗಿದ್ದಾರೆ. ಮಲಹೊರುವ ಪದ್ಧತಿಯು ಕಾನೂನು ಬಾಹಿರವಾದರೂ ಕರ್ನಾಟಕದಲ್ಲಿ ಅನೇಕ ಕಡೆಗಳಲ್ಲಿ ಈ ಕೆಲಸವನ್ನು ಮಾಡಿಸಲಾಗುತ್ತಿದೆ. ಬಸಸ್ಟ್ಯಾಂಡ್ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿನ ಶೌಚಾಲಯಗಳ ನಿರ್ವಹಣೆಯಲ್ಲಿ ತೊಡಗಿರುವ ಮಹಿಳೆಯರು ಅತ್ಯಂತ ಅಪಮಾನಜನಕ, ಕಡುಬಡತನದ ಬದುಕು ಬಾಳುತ್ತಿರುವರು.

ಮುಸ್ಲಿಂ ಮಹಿಳೆಯರ ಸ್ಥಿತಿಗತಿ

ಮಹಿಳಾ ಪುರವಾಣಿ

ವ ು ು ಸ್ಲಿಂ ಸ ವು ು ದಾಂ ು ವ ನ್ನು ತಲ್ಲಣಕ್ಕೆ ಭಯದ ಮನಸ್ಥಿತಿಗೆ ಕಾರಣವಾಗುವಂತೆ ಕೋಮುವಾದಿ ಚಟುವಟಿಕೆಗಳು ಭುಗಿಲೇಳುತ್ತಿವೆ. ಇದರಿಂದ ಮುಸ್ಲಿಂ ಮಹಿಳೆಯರೂ ಆತಂಕ ಮತ್ತು ಭಯದಲ್ಲಿ ಬದುಕುವಂತಾಗಿದೆ. ಅತ್ಯಾಚಾರಗಳು, ದೌರ್ಜನ್ಯಗಳು ಘಟಿಸಿದಾಗ ಪ್ರತಿಭಟಿಸುವಲ್ಲಿ ಆಂತರಿಕ ಭಯದ ನಿಯಂತ್ರಣವೊಂದು ಅಡ್ಡಿ ಪಡಿಸುತ್ತಿದೆ. ಹೀಗಾಗಿ ಅನ್ಯಾಯದ ವಿರುದ್ಧ ದನಿಯೆತ್ತಲಾಗದೆ ಒಳಗೊಳಗೆ ಕುಸಿಯುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಶಿಕ್ಷಣದಿಂದಲೂ, ಆರೋಗ್ಯದಿಂದಲೂ, ಉದ್ಯೋಗದಿಂದಲೂ, ಆರ್ಥಿಕವಾಗಿಯೂ ಅತ್ಯಂತ ಹಿಂದಿರುವ ಮುಸ್ಲಿಂ ಮಹಿಳೆಯರು ಸಮುದಾಯದೊಳಗಿನ ಸಾಂಸ್ಕೃತಿಕ ನಿಯಂತ್ರಣದಿಂದಲೂ ಎರಡೂ ರೀತಿಯ ಸಂಕಟಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲಿಯೂ ಭಾರತದಲ್ಲಿ ಕೋಮುಧಾಳಿಯು ಫ್ಯಾಸಿಸ್ಟ್ ಸ್ವರೂಪ ಪಡೆಯುತ್ತಿರುವುದರಿಂದ ಮುಸ್ಲಿಂ ಮಹಿಳಾ ಸಮುದಾಯದಲ್ಲಿಯೂ ಪರಕೀಯ ಭಾವನೆ ಮಡುಗಟ್ಟುತ್ತಿರುವುದು ಹೆಚ್ಚು ಆತಂಕದ ಸಂಗತಿಯಾಗಿದೆ.

ಮಾಧ್ಯಮ ಮತ್ತು ಮಹಿಳೆ

ನವ ಉದಾರೀಕರಣ ನೀತಿಗಳಿಂದಾಗಿ ಮಹಿಳೆ ಮಾರುಕಟ್ಟೆಯ ಅನುಭೋಗದ ಸರಕಾಗಿ ಜಾಹಿರಾತು, ಸಿನಿಮಾ, ಧಾರವಾಹಿಗಳಲ್ಲಿ ಬಿಂಬಿತವಾಗುತ್ತಿದ್ದಾಳೆ. ಬಹುತೇಕ ಟಿವಿ ಛಾನಲ್‌ಗಳಲ್ಲಿ ಪುರುಷ ಪ್ರಧಾನ ಪಾಳೆಗಾರಿ ಮೌಲ್ಯಗಳನ್ನು, ಮೌಢ್ಯತೆಯನ್ನು, ವರ್ಣಾಶ್ರಮದ ಜಾತಿ ವ್ಯವಸ್ಥೆಯನ್ನು ಬಲಗೊಳಿಸುವ ಕಾರ್ಯಕ್ರಮಗಳೇ ಆಗಿವೆ. ನವಮಾಧ್ಯಮವಾಗಿ ಅಪಾರ ಮನ್ನಣೆ ಪಡೆಯುತ್ತಿರುವ ಸಾಮಾಜಿಕ ಜಾಲತಾಣಗಳು ಮಾಹಿತಿ ತಂತ್ರಜ್ಞಾನದ ಕೊಡುಗೆಯಾಗಿರುವುದೇನೋ ಸರಿಯಾದರೂ ಅದರ ದುರ್ಬಳಕೆಯೂ ವ್ಯಾಪಕವಾಗಿ ನಡೆಯುತ್ತಿದೆ. ಯುವ ಜನಾಂಗವನ್ನು ಬಹುತೇಕ ಆವರಿಸಿಕೊಂಡಿರುವ ಈ ಮಾಧ್ಯಮದ ಮೂಲಕವೂ ಮಹಿಳಾ ವಿರೋಧಿ, ಕೋಮುವಾದಿ ಸಿದ್ಧಾಂತವನ್ನು ಬೇಕಾಬಿಟ್ಟಿಯಾಗಿ ಹರಿಬಿಡಲಾಗುತ್ತಿದೆ. ●

28,730 ಮಹಿಳೆಯರ ಸದಸ್ಯತ್ವ .... ಪುಟ 9 ರಿಂದ

ಅಭಿಯಾನದ ಮುಂದಿನ ತಯಾರಿಗಳ ಭಾಗವಾಗಿ ಗ್ರಾಮಗಳಲ್ಲಿ ಸಂಘಟನೆಯ ಸರ್ವಸದಸ್ಯರ ಸಭೆಗಳನ್ನು ನಡೆಸುವುದು, ಸಂಘಟನಾ ಸಮಿತಿಗಳನ್ನು/ಘಟಕಗಳನ್ನು ರಚಿಸುವುದು. ಸಭೆಗಳನ್ನು ನಡೆಸುವುದು, ಅಭಿಯಾನದ ಯಶಸ್ವಿಗೆ ಮೇಲುಸ್ತುವಾರಿ ವಹಿಸುವುದು ಮುಂತಾಗಿ ನಿರ್ಧರಿಸಿ ಜಾರಿಗೊಳಿಸಲಾಯಿತು.

ಉತ್ತಮ ಪೂರ್ವ ತಯಾರಿಗಳೊಂದಿಗೆ ನಡೆದ ಅಂದೋಲನದಲ್ಲಿ ಗುರಿ ಮೀರಿ 210 ಹಳ್ಳಿಗಳಲ್ಲಿ ಸುಮಾರು 1,600 ಕ್ಕೂ ಹೆಚ್ಚಿನ ಕಾರ್ಯಕರ್ತರು, ಮುಖಂಡರು ಪಾಲ್ಗೊಂಡಿದ್ದರು. 40–50 ಹಳ್ಳಿಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಮುಖಾಂತರ, ಕೆಲವು ಹಳ್ಳಿಗಳಲ್ಲಿ ತಂಡಗಳ ಮುಖಾಂತರ ಸದಸ್ಯತ್ವ ನೋಂದಾವಣೆ ಬೆಳಿಗ್ಗೆಯಿಂದ ರಾತ್ರಿಯವರೆಗೂ ನಡೆದದ್ದು ವಿಶೇಷವಾಗಿದೆ.

ಅಭಿಯಾನ ವೀಕ್ಷಣೆಗೆ ಹಾಗೂ ಮಾರ್ಗದರ್ಶನಕ್ಕೆ ಸಂಘಟನೆಯ ರಾಜ್ಯ ಸಮಿತಿ ಸದಸ್ಯರು–ಮುಖಂಡರನ್ನು ಆಹ್ವಾನಿಸಲಾಗಿತ್ತು. ಸಂಗಾತಿಗಳಾದ ಕೆ.ಎಸ್. ವಿಮಲ, ದೇವಿ, ಶಾರದ, ಸುನಂದ, ಸುನೀತ ಮುಂತಾದವರು ಆಗಮಿಸಿ ಅಭಿಯಾನದ ಯಶಸ್ವಿಗೆ ಮಾರ್ಗದರ್ಶನ–ಸಹಕಾರ ನೀಡಿದರು.

ಸುಮಾರು 25 ದಿನಗಳ ಕಾಲ ಕೆಲಸ ಮಾಡಿದ ಎಲ್ಲಾ ಮುಖಂಡರಲ್ಲಿ ಸ್ಥಳೀಯ ಮಟ್ಟದ ಕಾರ್ಯಕರ್ತರಲ್ಲಿ ಸಂಜೆಯ ವೇಳೆಗೆ 'ನಾವೆಲ್ಲರೂ ಸೇರಿ ಜಿಲ್ಲೆಯಲ್ಲಿ ದೊಡ್ಡ ಸಾಧನೆಯನ್ನು ಮಾಡಿದ್ದೇವೆ.' ಎಂಬ ಹರ್ಷ ನಗುಮುಖದಲ್ಲಿ ಎದ್ದು ಕಾಣುತ್ತಿತ್ತು.

ಅನುಭವ ಹಂಚಿಕೆ–ಜಿಲ್ಲಾ ಸಮಾವೇಶ

ಪ್ರಬಲ ಮಹಿಳಾ ಚಳುವಳಿ– ಜನಾಂದೋಲನ ರೂಪಿಸುವ ನಿಟ್ಟಿನಲ್ಲಿ–ಎದ್ದು ಬರುವ ಚಳುವಳಿಯ ಅಲೆಗಳನ್ನು ಸಂಘಟನೆಯಾಗಿ ಪರಿವರ್ತಿಸುವ ದೂರದೃಷ್ಟಿಯಿಂದ ಅಭಿಯಾನದಲ್ಲಿ ತಳಮಟ್ಟದಲ್ಲಿ ಕೆಲಸ ಮಾಡಿದ ಎಲ್ಲಾ ಕಾರ್ಯಕರ್ತರ ಅಭಿಪ್ರಾಯ ಅನುಭವವನ್ನು ಹಂಚಿಕೊಳ್ಳುವ ಉದ್ದೇಶದಿಂದ ಅಭಿಯಾನದ ಮರುದಿನ 31–05–2014ರಂದು 'ಕಾರ್ಯಕರ್ತರ ಅನುಭವ ಹಂಚಿಕೆ–ಜಿಲ್ಲಾ ಸಮಾವೇಶ'ವನ್ನು ಕೋಲಾರದಲ್ಲಿ ಸಂಘಟಿಸಲಾಯಿತು.

ಸದಸ್ಯತ್ವ ಮಾಡಿರುವ ಪ್ರತಿ ಗ್ರಾಮಗಳಿಂದ 5 ಜನರಂತೆ ಸದಸ್ಯತ್ವದ ದಾಖಲೆ, ಹಣ, ಸದಸ್ಯರ ಪಟ್ಟಿಯೊಂದಿಗೆ ಆಹ್ವಾನಿಸಿಲಾಗಿತ್ತು. ಕಾರ್ಯಕರ್ತರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಕಾತುರ ಉತ್ಸಾಹ ತೋರಿದರು. 210 ಹಳ್ಳಿಗಳ ಸುಮಾರು 1,100ಕ್ಕೂ ಹೆಚ್ಚಿನ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

ನೀರಿನ ಬರದ ಬವಣೆಯಲ್ಲಿ ನಲುಗುತ್ತಿರುವ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆ ಜಾರಿಯಾಗಬೇಕೆಂಬ ಘೋಷಣೆಯೊಂದಿಗೆ ಗಿಡಕ್ಕೆ ನೀರು ಹಾಕುವ ಮುಖಾಂತರ ಸಮಾವೇಶಕ್ಕೆ ಚಾಲನೆ ನೀಡಲಾಯಿತು. ಅತ್ಯಂತ ಹೆಚ್ಚು ಸದಸ್ಯತ್ವ ನೋಂದಾಯಿಸಿದ ಬಂಗಾರಪೇಟೆ ತಾಲ್ಲೂಕಿನ ದೊಡ್ಡೂರು ಕರಪನಹಳ್ಳಿ ಘಟಕದ ಸರಸ್ವತಮ್ಮ, ಮಮತ ಅವರುಗಳು ಸದಸ್ಯತ್ವ ರಸೀದಿಯ ಉಳಿಕೆ ದಾಖಲೆಯನ್ನು ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿಯವರಿಗೆ ನೀಡುವ ಮುಖಾಂತರ ಸಮಾವೇಶ ಉದ್ಘಾಟನೆಗೊಂಡಿತು. ಹಿರಿಯ ಸಂಗಾತಿ ಕೆ.ಎಸ್.ವಿಮಲ ಉದ್ಘಾಟನೆ ಮಾಡಿದರು. 'ವಿಶಿಷ್ಟ ಅಭಿಯಾನ ಕೋಲಾರ ಜಿಲ್ಲೆಯಲ್ಲಿ ಅಲ್ಲದೆ ರಾಜ್ಯದಲ್ಲಿಯೂ ಒಂದು ಮಾದರಿಯನ್ನು ಸೃಷ್ಟಿಸಿದೆ. ನನ್ನ ಸಂಘಟನಾ ಅನುಭವದಲ್ಲಿ ದೊಡ್ಡ ಖುಷಿಯನ್ನು ನೀಡಿದೆ.' ಎಂದು ಅಭಿಪ್ರಾಯ ಅವರು ವ್ಯಕ್ತಪಡಿಸಿದರು.

ತಳಮಟ್ಟದ ಕಾರ್ಯಕರ್ತರು ತಮ್ಮ ಅನುಭವಗಳನ್ನು ಸಮಾವೇಶದಲ್ಲಿ ತೆರೆದಿಡುವುದರೊಂದಿಗೆ ಮಹಿಳೆಯರ ಮೇಲಿನ ದೌರ್ಜನ್ಯ, ಶಾಶ್ವತ ನೀರಾವರಿ, ಕುಡಿಯುವ ನೀರಿನ ಶುದ್ಧೀಕರಣ ಘಟಕಗಳ ಸ್ಥಾಪನೆ, ಆರೋಗ್ಯ ಶಿಬಿರಗಳು, ಗಿಡ ನೆಡುವ ಕಾರ್ಯಕ್ರಮ, ಶೌಚಾಲಯಗಳ ನಿರ್ಮಾಣ, ಸ್ತ್ರೀ ಶಕ್ತಿ ಸಂಘಗಳಿಗೆ ಸುತ್ತು ನಿಧಿ ಹೆಚ್ಚಳ ಮತ್ತು ಸಾಲ, ಶಿಕ್ಷಣ, ಆರೋಗ್ಯ, ನೈರ್ಮಲ್ಯ ಮುಂತಾದ ಪ್ರಶ್ನೆಗಳು–ಸಮಸ್ಯೆಗಳನ್ನು ಎತ್ತಿಕೊಂಡು ಜಿಲ್ಲೆಯಲ್ಲಿ ಹೋರಾಟ–ಕಾರ್ಯಕ್ರಮಗಳನ್ನು ರೂಪಿಸಲು ಅವರು ಸಲಹೆಗಳನ್ನಿತ್ತರು. ಈ ಎಲ್ಲಾ ಸಲಹೆಗಳನ್ನು ಆಧರಿಸಿ ಹಂತ ಹಂತವಾಗಿ ಹೋರಾಟಗಳನ್ನು ಕಾರ್ಯಕ್ರಮಗಳನ್ನು ರೂಪಿಸಲು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಅತಿಥಿಗಳಾಗಿ ಭಾಗವಹಿಸಿದ ಹಿರಿಯ ಸಂಗಾತಿ ಕೆ. ನೀಲಾ ಹಾಗೂ ಡಾ॥ ಮೀನಾಕ್ಷಿ ಬಾಳಿಯವರು ಈ ಸಾಧನೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ವಿದ್ಯಾರ್ಥಿ ಚಳುವಳಿಯ ನಾಯಕರು, ಸಾಮಾಜಿಕ ಕಾರ್ಯಕರ್ತರೂ ಆದ ಎಂ.ವಿ. ನಾರಾಯಣಸ್ವಾಮಿ, ಎಸ್‌ಎಫ್‌ಐ, ಡಿವೈಎಫ್‌ಐ, ಸಿಐಟಿಯು ಪರವಾಗಿ ಮುಖಂಡರು ಶುಭ ಕೋರಿ ಮಾತನಾಡಿದರು. ■

ಲಿಂಗರಾಜು, ಬೆಂಗಳೂರು

ರಾಜಕಾಲುವೆ ಒತ್ತುವರಿ ತೆರವು ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ

ಸಾಮಾನ್ಯರ ಮನೆಗಳನ್ನು ಒಡೆಯುವಾಗ ಯಾವುದೇ ಸರ್ವೆಯನ್ನು ನಡೆಸದೇ ಕೇವಲ ಹಳೇ ಕಾಲದ ಮ್ಯಾಪ್‌ಗಳನ್ನು ಇಟ್ಟುಕೊಂಡು ನಿರ್ದಾಕ್ಷಿಣ್ಯವಾಗಿ ಮನೆಗಳನ್ನು ನೆಲಸಮ ಮಾಡಿದ ಸರ್ಕಾರ, ಪ್ರಭಾವಿಗಳ ವಿಷಯ ಬಂದಾಗ ಸರ್ವೇ ನಡೆಸುವುದು, ದಾಖಲಾತಿ ಪರಿಶೀಲನೆ ಇತ್ಯಾದಿ ಕಾರಣಗಳನ್ನು ಮುಂದೊಡ್ಡಿ ಕಾಲ ನೂಕುತ್ತಿದೆ.

ಬೆಂಗಳೂರಲ್ಲೀಗ ರಾಜಕಾಲುವೆಯದ್ದೇ ಮನೆ ಮಾತು. ಬೆಂಗಳೂರು ನಗರದ ಸುತ್ತಲೂ ಸುಮಾರು 857 ಕಿ.ಮೀ. ಉದ್ದದಲ್ಲಿ ರಾಜಕಾಲುವೆಗಳು ಹರಡಿಕೊಂಡಿವೆ. ರಾಜಕಾಲುವೆ ಮತ್ತು ಇದಕ್ಕೆ ಸಂಬಂಧಿಸಿದ ಮೀಸಲು ಪ್ರದೇಶ ಸುಮಾರು 3,428 ಎಕರೆ. ಇದರಲ್ಲಿ ಸರಿಸುಮಾರು 1,500 ಎಕರೆಯಷ್ಟು ಪ್ರದೇಶ ಒತ್ತುವರಿಯಾಗಿದೆ ಎಂದು ಹೇಳಲಾಗುತ್ತಿದೆ! ಅಂದರೆ ಇದು ಸಾವಿರಾರು ಕೋಟಿ ಬೆಲೆ ಬಾಳುವ ಆಸ್ತಿ. ಸದ್ಯ ಸರ್ಕಾರ ಒತ್ತುವರಿ ತೆರವಿಗೆ ಮುಂದಾಗಿದೆ, ಇದರಿಂದ ನಿಜವಾದ ಪ್ರತ್ಯಕ್ಷ ಒತ್ತುವರಿದಾರರು ಆತಂಕಕ್ಕೆ ಒಳಗಾಗಿಲ್ಲ! ಏಕೆಂದರೆ ಅವರಿಗೆ ತಾವು ಒತ್ತುವರಿ ಮಾಡಿದ್ದೇವೆನ್ನುವುದು ಚನ್ನಾಗಿ ಗೊತ್ತು. ಆದರೆ ನಿಜವಾಗಿಯೂ ಆತಂಕಕ್ಕೆ ಒಳಗಾಗಿರುವುದು ಜನ ಸಾಮಾನ್ಯರು. ಇವರು ತಮಗರಿವಿಲ್ಲದೆಯೇ ಒತ್ತುವರಿದಾರರಾದವರು! ನಿಜ, ಪ್ರಭಾವಿಗಳು, ಹಣವಿದ್ದವರೂ ತಮ್ಮ ಕಟ್ಟಡವನ್ನು ಕೆಡವಿದರೂ ಅದನ್ನು ಅರಗಿಸಿಕೊಳ್ಳಬಲ್ಲವರು, ಅಥವಾ ಕೆಡವದಂತೆ ಮಾಡುವ ಎಲ್ಲ ಶಕ್ತಿ ಸಾಮರ್ಥ್ಯ ಹೊಂದಿದ್ದಾರೆ. ಆದರೆ ಸಾಮಾನ್ಯರು ಎರಡನ್ನೂ ತಡೆದುಕೊಳ್ಳಲಾರದವರು. ತಮ್ಮ ಮನೆಗೆ ಯಾವಾಗ ಸಂಚಕಾರ ಒದಗಲಿದೆಯೋ ಎಂಬ ಆತಂಕ ಬಹುತೇಕರಲ್ಲಿ ಇದೆ. ತಾವು ವಾಸ ಆರಂಭಿಸಿ ಬಹಳ ವರ್ಷಗಳೇ ಕಳೆದರೂ ರಾಜಕಾಲುವೆಯ ಸಣ್ಣ ಕುರುಹನ್ನೂ ನೋಡಿರದ ಜನ, ನಕ್ಷೆ ಹಿಡಿದು ಮಾರ್ಕ್ ಮಾಡಲು ಬಂದ ಕಂದಾಯ ಅಧಿಕಾರಿಗಳನ್ನು ಕಂಡು ಜನ ಗರಬಡಿದವರಂತೆ ನಿಂತಿದ್ದಾರೆ.


ಶ್ಯಾಮನೂರು ಶಿವಶಂಕರಪ್ಪ

ಸತೀಶ್ ರೆಡ್ಡಿ ನೋಡಿದರೆ ರಾಜಕಾಲುವೆ ಯೂ-ಟರ್ನ್!

ರಾಜಕಾಲುವೆ ಒತ್ತುವರಿ ಕಾರಣದಿಂದ ಈಗಾಗಲೇ ನೂರಾರು ಮನೆಗಳನ್ನು ಮುಲಾಜಿಲ್ಲದೇ ಉರುಳಿಸಲಾಗಿದೆ. ರಾಜಕಾಲುವೆ ಒತ್ತುವರಿಯಿಂದಾಗಿ ಐಟಿ-ಸಿಟಿ ನೆರೆಗೆ ತುತ್ತಾಗಿದ್ದರಿಂದ ನಗರದ ಫೇಸ್ ವ್ಯಾಲ್ಯೂಗೆ ಧ ಕ್ಕೆ ಬರಲಿದೆ ಎಂಬುದನ್ನು ಅರಿತ ಸರ್ಕಾರ ನಿದ್ದೆಯಿಂದ ಎಚ್ಚೆತ್ತಂತೆ ನಿರ್ದಾಕ್ಷಿಣ್ಯವಾಗಿ ಒತ್ತುವರಿ ತೆರವು ಕಾರ್ಯಾಚರಣೆಗಿಳಿದಿದೆ. ರಾಕ್ಷಸ ಸ್ವರೂಪದ ಜೆಸಿಬಿಗಳು ಮನೆಗಳನ್ನು ನೆಲಸಮ ಮಾಡುತ್ತಿವೆ. ಕಾಸಿಗೆ ಕಾಸು ಕೂಡಿಸಿ ಕನಸಿನ ಗೂಡೊಂದನ್ನು ಕಟ್ಟಿಕೊಂಡವರು ತಮ್ಮೆದುರೇ ತಮ್ಮ ಮನೆ ಕುಸಿದು ಬೀಳುತ್ತಿರುವುದನ್ನು ನೋಡಲಾಗದೇ ಗೋಳಾಡುವುದು ಕರುಳು ಕಿತ್ತು ಬರುವಂತಿದೆ. ಬಿಬಿಎಂಪಿಯವರು ತಮ್ಮ ಮನೆಯನ್ನು ಕೆಡವುದು ಗ್ಯಾರೆಂಟಿಯಾಗುತ್ತಿದ್ದಂತೆ ಕೆಲವರು ತಾವೇ ತೆರವು ಕಾರ್ಯಾಚರಣೆಗಿಳಿದು ಆಗಬಹುದಾದ ಹೆಚ್ಚಿನ ಹಾನಿಯನ್ನು ತಡೆಯಲು ಪ್ರಯತ್ನಿಸುತ್ತಿದ್ದಾರೆ. ಕಾರಣ ಕಾರ್ಯಾಚರಣೆಗಿಳಿದಿರುವ ಜೆಸಿಬಿಗಳು ಗುರ್ತಿಸಲ್ಪಟ್ಟ ಜಾಗವನ್ನು ತೆರವು ಮಾಡುವಾಗ ಅದರ ರಭಸಕ್ಕೆ ಮನೆಯ ಇತರೆ ಗೋಡೆಗಳು ಬಿರುಕು ಬೀಳತೊಡಗಿವೆ. ಕೆಲವರ ಮನೆಯನ್ನಂತೂ ಪೂರ್ತಿಯಾಗಿ ಕೆಡವಲಾಗಿದೆ. ಬಡಪಾಯಿಗಳು ಏಕಾಏಕಿ ಕಾರ್ಯಾಚರಣೆಯಿಂದ ಕಂಗಾಲಾಗಿ ತಮ್ಮ ಮನೆಯ ಅವಶೇಷಗಳೆದುರು ದಿಕ್ಕು ಕಾಣದೆ ಬಯಲಲ್ಲೇ ದಿನ ದೂಡುತ್ತಿದ್ದಾರೆ. ಪುನರ್ವಸತಿ ಕಲ್ಪಿಸಿ ಎಂದು ಜನ ಕೋರ್ಟ್ ಮೊರೆ ಹೋದರೆ, ಕೋರ್ಟು ಕೂಡ ಪುನರ್ವಸತಿ ಸಾಧ್ಯವಿಲ್ಲವೆಂದು ತನ್ನ ಬಾಗಿಲು ಮುಚ್ಚಿದೆ.

ತೆರವು ಕಾರ್ಯಾಚರಣೆಯಲ್ಲಿ ಎಷ್ಟೇ ಪ್ರಭಾವಿಗಳಿದ್ದರೂ ಮಣಿಯುವುದಿಲ್ಲ ಎಂಬ ಮಾತನ್ನು ಸರ್ಕಾರ ಆಡುತ್ತಿದೆಯಾದರೂ ಕೆಲವೆಡೆ ಸ್ಥಳೀಯ ರಾಜಕಾರಣಿಗಳ, ಬಿಲ್ಡರ್‌ಗಳ ಹಣಬಲಕ್ಕೆ ಶರಣಾಗಿರುವ ಉದಾಹರಣೆಗಳಿವೆ. ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಕೋಡಿಚಿಕ್ಕನಹಳ್ಳಿ ಅನುಗ್ರಹ ಲೇಔಟ್ ಪೂರ್ತಿ ನೆರೆಯಿಂದಾಗಿ ಮುಳುಗಡೆಯಾಗಿತ್ತು. ಈ ಲೇಔಟ್ ಮುಳುಗಡೆಯಾಗಲು ಇಲ್ಲಿ ಒತ್ತುವರಿ ಮಾತ್ರವೇ ಕಾರಣವಾಗಿರಲಿಲ್ಲ, ಬದಲಾಗಿ ರಾಜಕಾಲುವೆಯ ದಿಕ್ಕನ್ನೇ ಬದಲಾಯಿಸಿದ್ದರಿಂದಲೇ ನೆರೆಗೆ ತುತ್ತಾಗಿತ್ತು. ಈ ಕ್ಷೇತ್ರದ ಶಾಸಕ ಸತೀಶ್‌ರೆಡ್ಡಿ ಆಪ್ತರಿಗೆ ಸೇರಿದೆ ಎನ್ನಲಾದ ಜಮೀನು ಇರುವುದರಿಂದ ಬಹಳ ತಮ್ಮ ಪ್ರಭಾವ ಬಳಸಿ ಬಹಳ ಹಿಂದೆಯೇ ರಾಜಕಾಲುವೆಯನ್ನೇ ಮುಚ್ಚಿ ಹಾಕಿ, ಯು-ಟರ್ನ್ ಆಕಾರದಲ್ಲಿ ಅದರ ದಿಕ್ಕನ್ನೇ ಬದಲಾಯಿಸಲಾಗಿದೆ. ಇಲ್ಲಿ ಸದ್ಯ ಈ ರಾಜಕಾಲುವೆ ಲೇಔಟ್‌ನ ಮುಖ್ಯ ರಸ್ತೆಯೂ ಹೌದು! ಅಂದರೆ ಕಾಂಕ್ರಿಟ್ ಬ್ಲಾಕ್‌ಗಳನ್ನು ಹಾಕಿ ಮುಚ್ಚಿ ರಾಜಕಾಲುವೆಯನ್ನೇ ರಸ್ತೆ ಮಾಡಿ ಮಾಡಲಾಗಿದೆ.! ಇಲ್ಲೀಗ ರಾಜಕಾಲುವೆಯ ಇಕ್ಕೆಲಗಳಲ್ಲೂ ನಿವೇಶನಗಳನ್ನು ಮಾಡಿ ಮಾರಾಟ ಮಾಡಲಾಗಿದೆ. ಜನ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ರಾಜಕಾಲುವೆಯ ಮೇಲೆಯೇ ರಸ್ತೆ ಮಾಡುವ ಪ್ಲಾನ್‌ಗೆ ಅಧಿಕೃತ ಅನುಮತಿಯನ್ನೂ ನೀಡಲಾಗಿದೆ! ಹೀಗಿದ್ದೂ ಒತ್ತುವರಿ ತೆರವುವಿನಲ್ಲಿ ಇದನ್ನು ಹಾಗೆ ಕೈ ಬಿಡಲಾಗಿದೆ. ದೊಡ್ಡ ಬೊಮ್ಮಸಂದ್ರದ ಬಳಿ ರಾಜಕಾಲುವೆಯ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದು ಅಲ್ಲಿನ ಸ್ಥಳೀಯರು ದೂರು ನೀಡಿ ಪ್ರತಿಭಟನೆ ಮಾಡಿದರೂ ಈ ಬಗ್ಗೆ ಇನ್ನೂ ದಾಖಲಾತಿ ಪರಿಶೀಲಿಸಲಾಗುತ್ತಿದೆಯಂತೆ!

ಮಲ್ಲೇಶ್ವರಂನ ರಾಜೀವ್ ಗಾಂಧಿ ಪ್ರತಿಮೆ ಬಳಿ ಮಂತ್ರಿ ಸ್ಕ್ವೇರ್ ಮಳೆ ನೀರು ಕಾಲುವೆಯನ್ನೇ ಒತ್ತುವರಿ ಮಾಡಿ ಬಹು ಮಹಡಿ ಕಟ್ಟಡವನ್ನು ಕಟ್ಟಲಾಗುತ್ತಿದೆ. ಈ ಭಾಗದ ನಿವಾಸಿಗಳು ಈ ಸಂಬಂಧ ಬಿಬಿಎಂಪಿ ಆಯುಕ್ತರಿಗೆ ದೂರು ನೀಡಿದ್ದರೂ ಕಟ್ಟಡ ನಿರ್ಮಾಣದ ಕೆಲಸ ಮಾತ್ರ ನಿಂತಿಲ್ಲ. ಜಕ್ಕೂರು ಬಳಿ ಐಎಎಸ್, ಐಪಿಎಸ್ ಅಧಿಕಾರಿಗಳು ನಿರ್ಮಿಸಿರುವ 'ದಿ ಮೆಟ್ರೋಪಾಲಿಟನ್ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿ ಕೂಡ ರಾಜ ಕಾಲುವೆಯನ್ನು ಒತ್ತುವರಿ ಮಾಡಿ ಲೇಔಟ್ ನಿರ್ಮಾಣ ಮಾಡಿದೆ. ಈ ಬಗ್ಗೆ ಅಕ್ಕಪಕ್ಕದ ಗ್ರಾಮಸ್ಥರು ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಶ್ಯಾಮನೂರು ಶಿವಶಂಕರಪ್ಪ ಒಡೆತನದ ಎಸ್‌ಎಸ್ ಆಸ್ಪತ್ರೆಯೂ ರಾಜಕಾಲುವೆಯ ಮೇಲೆ ಇದೆ. ಈ ಬಗ್ಗೆ ಅನೇಕರು ದೂರು ನೀಡಿದ್ದಾರೆ. ಆದರೂ ವಿಳಂಬ ಮಾಡಲಾಗುತ್ತಿದೆ. ಚಿತ್ರನಟ ದರ್ಶನ್, ರಾಜ್ಯಸಭಾ ಸದಸ್ಯ ಎಂ.ಬಿ.ರಾಜೀವ್‌ಗೌಡ, ಶಾಸಕ ಹ್ಯಾರೀಸ್ ಸೇರಿದಂತೆ ಇನ್ನು ಅನೇಕ ಜನ ಪ್ರಭಾವಿಗಳು ರಾಜಕಾಲುವೆ ಒತ್ತುವರಿ ಮಾಡಿರುವ ಬಗ್ಗೆ ನಿಖರವಾದ ದಾಖಲಾತಿಗಳು ಇದ್ದರೂ ತೆರವು ಕಾರ್ಯಕ್ಕೆ ಮುಂದಾಗುತ್ತಿಲ್ಲ. ಕಾರಣ ಕೇಳಿದರೆ ಪ್ರಭಾವಿಗಳ ಒತ್ತುವರಿಯನ್ನು ಖಚಿತಪಡಿಸಿಕೊಳ್ಳಲು ಎಡಿಎಲ್‌ಆರ್ (ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಇಲಾಖೆ) ಸರ್ವೇ ಕಾರ್ಯ ನಡೆಸಬೇಕು. ಹೀಗಾಗಿ ಇದು ಬಿಬಿಎಂಪಿ ಕೆಲಸ ಅಲ್ಲ ಎಂದು ಹೇಳುತ್ತಿದೆ. ಇನ್ನು ಎಡಿಎಲ್‌ಆರ್ ಕೇಳಿದರೆ ಸರ್ವೇ ಮಾಡಿಸಲು ಸರ್ವೆಯರ್‌ಗಳೇ ಸಿಗುತ್ತಿಲ್ಲ ಎಂದು ಇವರ ಮೇಲೆ ಅವರು ಗೂಬೆ ಕೂರಿಸುತ್ತಾ ಅಡಗೂಲಜ್ಜಿ ಕತೆಗಳನ್ನು ಹೇಳುತ್ತಿದ್ದಾರೆ.

ಒರಾಯನ್ ಮಾಲ್ ಗೋಲ್ ಮಾಲ್

ರಾಜ್ಯ ಸರ್ಕಾರದಲ್ಲಿ ಮಂತ್ರಿಯಾಗಿರುವ ಎಂಆರ್ ಸೀತಾರಾಂ ಐಐಎಸ್‌ಸಿ ಬಳಿಯ 3 ಎಕರೆ ರಾಜಕಾಲುವೆ ಒತ್ತುವರಿ ಮಾಡಿದ್ದಾರೆ ಎಂಬ ಆಪಾದನೆಗಳಿವೆ. ಒರಾಯನ್ ಮಾಲ್, ಯುಬಿಸಿಟಿ, ಪ್ರೆಸ್ಟೀಜ್ ಗ್ರೂಪ್, ಪುರವಂಕರ, ಕೊಲಂಬಿಯಾ ಏಷಿಯಾ ಸೇರಿದಂತೆ ಅಂದಾಜು 350ಕ್ಕೂ ಹೆಚ್ಚಿನ ಪ್ರಭಾವಿ ಬಿಲ್ಡರ್‌ಗಳು ರಾಜಕಾಲುವೆ, ಬಫರ್ ಜೋನ್‌ಗಳನ್ನು ಕಬಳಿಕೆ ಮಾಡಿ ಲೇಔಟ್ ಮತ್ತು ಕಟ್ಟಡ ನಿರ್ಮಾಣ ಮಾಡಿರುವ ದಾಖಲಾತಿಗಳು ಲಭ್ಯ ಇವೆ. ಆದರೆ ಈವರೆಗೂ ಇವುಗಳ ಬಗ್ಗೆ ಬಿಬಿಎಂಪಿ ಮಾತನಾಡುತ್ತಿಲ್ಲ. ಅಂದರೆ ಸಾಮಾನ್ಯರ ಮನೆಗಳನ್ನು ಒಡೆಯುವಾಗ ಯಾವುದೇ ಸರ್ವೆಯನ್ನು ನಡೆಸದೇ ಕೇವಲ ಹಳೇ ಕಾಲದ ಮ್ಯಾಪ್‌ಗಳನ್ನು ಇಟ್ಟುಕೊಂಡು ನಿರ್ದಾಕ್ಷಿಣ್ಯವಾಗಿ ಮನೆಗಳನ್ನು ನೆಲಸಮ ಮಾಡಿದ ಸರ್ಕಾರ, ಪ್ರಭಾವಿಗಳ ವಿಷಯ ಬಂದಾಗ ಸರ್ವೇ ನಡೆಸುವುದು, ದಾಖಲಾತಿ ಪರಿಶೀಲನೆ ಇತ್ಯಾದಿ ಕಾರಣಗಳನ್ನು ಮುಂದೊಡ್ಡಿ ಕಾಲ ನೂಕುತ್ತಿದೆ.

ರಾಜ ಕಾಲುವೆ ತೆರವು ಕಾರ್ಯಾಚರಣೆಯನ್ನು ತಪ್ಪೆಂದು ಹೇಳುವ ಧೈರ್ಯ ಈಗ ಯಾರಿಗೂ ಇಲ್ಲ. ಪ್ರತಿಯೊಂದರಲ್ಲೂ ಮೊಸರಲ್ಲಿ ಕಲ್ಲು ಹುಡುಕುವಂತೆ ಆಡುತ್ತಿದ್ದ ಪ್ರತಿಪಕ್ಷಗಳು ಈಗ ಬಾಯಿ ಬಿಡುತ್ತಿಲ್ಲ. ಈ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಕಠಿಣ ನಿಲುವು ತಳೆದಿದ್ದಾರೆ. ಪದೇ ಪದೇ ನೆರೆಗೆ ತುತ್ತಾಗುವ ಬೆಂಗಳೂರು ನಗರವನ್ನು ರಕ್ಷಿಸಲು ಈ ತೆರವು ಕಾರ್ಯಾಚರಣೆ ಅನಿವಾರ್ಯವೂ ಹೌದು. ಹಾಗೆಂದು ಅಮಾನವೀಯವಾಗಿ ನಡೆದುಕೊಳ್ಳುವುದು ಸರಿಯಲ್ಲ. ಕೆಲವೆಡೆ ಮನೆ ಮಾಲೀಕರೇ ಒಂದೆರಡು ದಿನ ಸಮಯ ಕೊಡಿ ಎಂದು ಅಂಗಲಾಚಿ ಬೇಡಿದರೂ, ಮದುವೆಯ ಲಗ್ನಪತ್ರಿಕೆ ತೋರಿಸಿದರೂ, ಹಸಿ ಬಾಣಂತಿ ಇದ್ದಾರೆ ಎಂದರೂ ಕರಗದ ಅಧಿಕಾರಿಗಳ ಮನಸ್ಸು, ಪ್ರಭಾವಿಗಳ ವಿಷಯ ಬಂದಾಗ ಕರ್ಪೂರದಂತೆ ಕರಗಿ ನೀರಾಗುತ್ತದೆ. ಮತ್ತೆ ಇವರಿಗೆ ಕೇಳಿದಷ್ಟು ಸಮಯವನ್ನೂ ನೀಡುತ್ತಾರೆ. ಮಾತ್ರವಲ್ಲ ನಕ್ಷೆಯನ್ನು ಬೇಕಾದಂತೆ ಬದಲಿಸಲೂಬಹುದು. ಈ ತಾರತಮ್ಯ ವಿರುದ್ಧ ಜನ ಆಕ್ರೋಶಗೊಂಡಿದ್ದರೆ ಅದು ನ್ಯಾಯಯುತವಾದುದೇ.

ರಾಜಕಾಲುವೆ, ಕೆರೆ, ಮೀಸಲು ಪ್ರದೇಶ, ಸರ್ಕಾರಿ ಭೂಮಿ ಇತ್ಯಾದಿ ಇತ್ಯಾದಿ ಯಾವುದೇ ಆಗಲಿ ಒತ್ತುವರಿ ಆಗಿದ್ದರೆ ಅದರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಮುಂದಾಗಲೇಬೇಕು. ಆದರೆ ತಮ್ಮದಲ್ಲದ ತಪ್ಪಿಗೆ ಅಧಿಕಾರಿಗಳು, ಬಿಲ್ಡರ್‌ಗಳು ಹಾಗು ರಾಜಕೀಯ ಪುಡಾರಿಗಳ ದುಷ್ಟ ಮೈತ್ರಿಯ ಅಕ್ರಮ – ಅವ್ಯವಹಾರಗಳಿಗೆ ಬಲಿಪಶುಗಳಾಗುತ್ತಿರುವ ಅಮಾಯಕ ನಾಗರಿಕರ ಬಗ್ಗೆ ಸರ್ಕಾರ ಮಾನವೀಯತೆ ತೋರಬೇಕಾದುದು ಅದರ ಜವಾಬ್ದಾರಿ. ●

ದರ್ಶನ್ ಮನೆ



ಒರಾಯನ್ ಮಾಲ್





ಲಿಂಗರಾಜು

ಆರ್‌ಡಿಪಿಆರ್ ಗೋಲ್‌ಮಾಲ್‌ಗೆ ಒಂದು ವರ್ಷ!

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ(ಆರ್‌ಟಿಪಿಆರ್)ಯಲ್ಲಿ ನಡೆದ ಭಾರಿ ಗೋಲ್‌ಮಾಲ್ ವರ್ಷದ ಹಿಂದೆಯೇ ಬಹಿರಂಗಗೊಂಡಿತ್ತು. ಇದೊಂದು ಯಾರೂ ಊಹಿಸಲಾರದ ಹಗರಣ. ಭ್ರಷ್ಟಾಚಾರಕ್ಕೆ ಇಂಥದ್ದೂ ಒಂದು ಮಾರ್ಗವಿದೆ ಎಂಬುದನ್ನು ಪರಿಚಯಿಸಿದ ಕೀರ್ತಿ ಆರ್‌ಡಿಪಿಆರ್‌ಗೆ ಸಲ್ಲುತ್ತದೆ. ಸ್ವತಃ ಗ್ರಾಮೀಣಾಭಿವೃದ್ಧಿ ಸಚಿವ ಎಚ್‌ಕೆ ಪಾಟೀಲ್ ಅವರು ಪತ್ರಿಕಾಗೋಷ್ಠಿ ನಡೆಸಿ ಆರ್‌ಡಿಪಿಆರ್ ಇಲಾಖೆಯಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿರುವುದನ್ನು ಬಹಿರಂಗಪಡಿಸಿದ್ದರು. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಆರ್‌ಡಿಪಿಆರ್ ಇಲಾಖೆಗೆ ವಿವಿಧ ಯೋಜನೆಗಳಿಗೆ ಬಂದಿದ್ದ ಅನುದಾನ ಇಲಾಖೆಯ ಅಧಿಕೃತ ಬ್ಯಾಂಕ್ ಖಾತೆಯಿಂದ ಬೇರೆ ಖಾತೆಗಳಿಗೆ ವರ್ಗಾವಣೆಯಾಗಿರುವುದು ಕಂಡುಬಂದಿತ್ತು. ಈ ಬಗ್ಗೆ ಸಚಿವ ಸಂಪುಟವು ಹಿರಿಯ ಐಎಫ್‌ಎಸ್ ಅಧಿಕಾರಿ ಪುನಟಿ ಶ್ರೀಧರ್ ಅವರ ನೇತೃತ್ವದಲ್ಲಿ ತನಿಖಾ ಸಮಿತಿ ನೇಮಿಸಿ ವರದಿ ನೀಡಲು ಕೋರಿತ್ತು.

ಈ ಬಗ್ಗೆ ಸಮಗ್ರವಾಗಿ ಹಾಗು ಅಷ್ಟೇ ತ್ವರಿತಗತಿಯಲ್ಲಿ ತನಿಖೆ ನಡೆಸಿದ ಸಮಿತಿ ಸಕಾಲದಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು.

ಅದರಂತೆ ಇಲಾಖೆಗೆ ಬಂದಿದ್ದ ಅನುದಾನದಲ್ಲಿ ಸುಮಾರು 2,815 ಕೋಟಿ ರೂಪಾಯಿಗಳನ್ನು ಇಲಾಖಾ ಖಾತೆಯಿಂದ ಬೇನಾಮಿ ಖಾತೆಗಳಿಗೆ ವಿವಿಧ ಕಂತುಗಳಲ್ಲಿ ವರ್ಗಾವಣೆಯಾಗಿರುವುದನ್ನು ಸಮಿತಿ ಪತ್ತೆ ಹಚ್ಚಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಇದೊಂದು ಗಂಭೀರ ಸ್ವರೂಪದ ಅವ್ಯವಹಾರ ಆಗಿದ್ದು ಶೀಘ್ರವೇ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಎಚ್ಕೆ ಪಾಟೀಲ್‌ಗೆ ನಿರ್ದೇಶನ ನೀಡಿದ್ದರು. ಆದರೆ ವರದಿ ಸಲ್ಲಿಕೆಯಾಗಿ ಒಂದು ವರ್ಷ ಕಳೆದರೂ ಯಾವುದೇ ಪ್ರಗತಿ ಆಗದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಸಂಬಂಧಪಟ್ಟ ಇಲಾಖೆಯಿಂದ ಸಚಿವ ಸಂಪುಟಕ್ಕೆ ಟಿಪ್ಪಣಿ ಬಂದಿದ್ದರೂ ಸಂಪುಟ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬ ವರದಿಗಳು ಕೇಳಿ ಬರುತ್ತಿವೆ. ಎಚ್ಕ ಪಾಟೀಲರು ಕೂಡ ಟಿಪ್ಪಣಿ ಬಗ್ಗೆ ಸಂಪುಟ ಸಭೆಯಲ್ಲಿ ಯಾವುದೇ ಚಕಾರ ಎತ್ತದಿರುವುದು ಅನುಮಾನಗಳು ಗರಿಗೆದರುವಂತೆ ಮಾಡಿವೆ. ಬಲ್ಲ ಮೂಲಗಳ ಪ್ರಕಾರ ಕೇವಲ 612 ಕೋಟಿ ರೂಪಾಯಿಗಳನ್ನು ಖಜಾನೆಗೆ ಜಮಾ ಮಾಡಲು ಸೂಚಿಸಿ ಇಡೀ ಹಗರಣಕ್ಕೆ ತಿಲಾಂಜಲಿ ನೀಡಲಾಗುತ್ತಿದೆ. ಅಂದರೆ ಆಶ್ಚರ್ಯವೆಂದರೆ ಪೂರ್ತಿ ಹಣವನ್ನೂ ಜಮಾ ಮಾಡುತ್ತಿಲ್ಲ, ಬದಲಾಗಿ ಈ ಅವ್ಯವಹಾರಕ್ಕೆ ಕಾರಣರಾದವರ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ. ಸರ್ಕಾರದ ಈ ನಿಲುವಿಗೆ ಐಎಎಸ್ ಅಧಿಕಾರಿಗಳ ಲಾಭಿಯೇ ಕಾರಣ ಎನ್ನಲಾಗುತ್ತಿದೆ. ಶತಾಯಗತಾಯ ಇಡೀ ಹಗರಣವನ್ನೇ ಮುಚ್ಚಿ ಹಾಕಲು ಐಎಎಸ್ ಅಧಿಕಾರಿಗಳ ಗುಂಪೊಂದು ಸಚಿವ ಸಂಪುಟದ ಮೇಲೆ ಒತ್ತಡ ಹಾಕುತ್ತಿದೆ ಎನ್ನಲಾಗಿದೆ. ಅಂದರೆ ಸರ್ಕಾರದ ಕೆಲ ಪ್ರಮುಖರಿಗೆ ಈ ಹಗರಣದ ಪಾಲು ಗುಟ್ಟಾಗಿ ಹರಿದು ಹೋಗಿದ್ದರೆ ಆಶ್ಚರ್ಯಪಡಬೇಕಿಲ್ಲ!

ಬೇಸಾಯ ನಿಲ್ಲಿಸಿ: ಡಿಕೆಶಿ ಉವಾಚ!

ತುಂಗಭದ್ರ ಮತ್ತು ಕಾವೇರಿ ಜಲಾನಯನ ಪ್ರದೇಶಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಆಗಿರುವ ಕೆಆರ್‌ಎಸ್ ಮತ್ತು ತುಂಗಭದ್ರ ಡ್ಯಾಮ್‌ಗಳಲ್ಲಿ ಸಾಕಷ್ಟು ನೀರು ಸಂಗ್ರಹವಾಗಿಲ್ಲ. ಹೀಗಾಗಿ ರೈತರ ಬೆಳೆಗಳಿಗೆ ನೀರು ಕೊಡಲು ಸಾಧ್ಯವಿಲ್ಲ, ಆದ್ದರಿಂದ ರೈತರು ತಮ್ಮ ಒಕ್ಕಲುತನವನ್ನು ನಿಲ್ಲಿಸುವುದು ಒಳಿತು ಎಂದು ಇಂಧನ ಸಚಿವ ಡಿಕೆಶಿ ತಮ್ಮ ಉಪದೇಶ ನೀಡಿದ್ದಾರೆ! ಮಳೆ ಕಡಿಮೆ ಆಗಿರುವುದು ಜಲಾಶಯಗಳಲ್ಲಿ ಅಗತ್ಯವಿರುವಷ್ಟು ನೀರು ಸಂಗ್ರಹವಾಗದಿರುವುದು ಎಲ್ಲರಿಗೂ ಹಾಗೆಯೇ ರೈತರಿಗೂ ಅರ್ಥವಾಗುವ ಸಾಮಾನ್ಯ ವಿಷಯ. ಈ ಕಾರಣಕ್ಕೆ ರೈತರು ತಮ್ಮ ಕೃಷಿಯನ್ನೇ ನಿಲ್ಲಿಸುವುದು ಸೂಕ್ತ ಎಂಬ ಅಭಿಪ್ರಾಯವನ್ನು ಸರ್ಕಾರದ ಸಚಿವರೇ ನೀಡಿರುವುದು ತೀರ ಕಳವಳಕಾರಿಯಾದುದು. ರೈತರು ಪರ್ಯಾಯ ಬೆಳೆಗಳನ್ನು ಬೆಳೆಯಲು ಅವಕಾಶವಾಗುಂತೆ ತಮ್ಮ ಸಲಹೆಗಳನ್ನು ನೀಡಿದ್ದರೆ ಅದನ್ನು ಒಪ್ಪಬಹುದಿತ್ತು. ಅದನ್ನು ಬಿಟ್ಟು ಈ ತರಹದ ಉದ್ದಟತನದ ಹೇಳಿಕೆಯಿಂದ ಏನನ್ನಾದರೂ ಸಾಧಿಸಲು ಸಾಧ್ಯವೇ?

ರಾಜ್ಯ ಸರ್ಕಾರ ಈಗ್ಗೆ ಇಂಡಸ್ಟ್ರೀಯಲ್ ಕಾರಿಡರ್ ನಿರ್ಮಾಣಕ್ಕಾಗಿ ರಾಜ್ಯದಲ್ಲಿ 7 ಲಕ್ಷ ಎಕರೆ ಜಮೀನನ್ನು ಸ್ವಾದೀನ ಮಾಡಿಕೊಳ್ಳಲು ಅನುವಾಗಿದೆ. ಬಹುಶಃ ಇದೇ ಉದ್ದೇಶದಿಂದ ಹೇಳಿರಬಹುದೇನೋ?

ಪೌರ ಕಾರ್ಮಿಕರಿಗೆ ಸಂಬಳ ಏರಿಕೆ

ರಾಜ್ಯ ಸರ್ಕಾರ ಪೌರ ಕಾರ್ಮಿಕರಿಗೆ 14,400 ರೂಪಾಯಿ ವೇತನ ನಿಗದಿ ಮಾಡಿದೆ. ಹಾಗೆಯೇ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಅವರ ವೇತನವನ್ನು ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ನೇರ ವರ್ಗಾವಣೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಈ ಎರಡೂ ತೀರ್ಮಾನಗಳು ಸ್ವಾಗತಾರ್ಹವಾದವು. ಇದುವರೆಗೂ ಗುತ್ತಿಗೆದಾರರು ಕಾರ್ಮಿಕರಿಂದ ಮನಸ್ಸಿಗೆ ಬಂದಂತೆ ವಸೂಲಿ ಮಾಡುವುದಕ್ಕೆ ಇನ್ನು ಮುಂದೆ ಬ್ರೇಕ್ ಬೀಳಲಿದೆ ಎಂದು ಹೇಳಲಾಗುತ್ತಿದೆ. ನಿಜ ಒಂದಷ್ಟು ಸಮಸ್ಯೆಗಳು ಇದರಿಂದ ಬಗೆಹರಿಯಬಹುದು. ಆದರೆ ಪೌರ ಕೆಲಸಗಳಿಗೂ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವುದು ಒಪ್ಪತಕ್ಕದ್ದಲ್ಲ. ಅವರನ್ನು ಖಾಯಂಗೊಳಿಸಬೇಕು. ನಗರವನ್ನು ಶುಚಿಯಾಗಿಡುವ ಪೌರ ಕಾರ್ಮಿಕರು ವಾಸಿಸುವ ಕಾಲೋನಿಗಳು ಇಂದಿಗೂ ದಯನೀಯ ಸ್ಥಿತಿಯಲ್ಲಿವೆ. ಬಹುತೇಕ ಸ್ಲಂಗಳಲ್ಲಿ ವಾಸಿಸುವ ಇವರಿಗೆ ಹಕ್ಕುಪತ್ರಗಳಿಲ್ಲ. ಸ್ಥಿತಿವಂತರ ಲೇಔಟ್‌ಗಳಿಗೆ ಮೇಲಿಂದ ಮೇಲೆ ಸೌಕರ್ಯಗಳನ್ನು ಒದಗಿಸುವ ಸರ್ಕಾರ ನಗರದ ಜನ ನೆಮ್ಮದಿಯಿಂದ ಬದುಕುವಂತೆ ನಗರವನ್ನು ಶುಚಿಯಾಗಿಡುವ ಪೌರಕಾರ್ಮಿಕರ ಕಾಲೋನಿಗಳಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾದುದು ಸರ್ಕಾರದ ಆದ್ಯತೆಯಾಗಬೇಕಿದೆ.

ಮೈಕೋದಲ್ಲೀಗ ಮೋದಿ ಕಾನೂನು!

ಮೋದಿ ಸರ್ಕಾರ ಕಾರ್ಮಿಕ ಕಾನೂನುಗಳ ತಿದ್ದುಪಡಿ ಮಸೂದೆಯನ್ನು ಎರಡು ವರ್ಷಗಳಿಂದ ಶಾಸನ ಸಭೆಯಲ್ಲಿ ಮಂಡಿಸಲಾಗದೇ ಸಮಯಕ್ಕಾಗಿ ಕಾಯುತ್ತಿದ್ದಾರೆ. ದೇಶದ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿರೋಧದಿಂದಾಗಿ ಬಂಡವಾಳದಾರರ ಬಹು ಉದ್ದೇಶಿತ ಮಸೂದೆ ಇನ್ನೂ ಮಂಡನೆಯಾಗದೇ ಉಳಿದಿದೆ. ಆಶ್ಚರ್ಯವೆಂದರೆ ಬೆಂಗಳೂರಿನ ಪ್ರತಿಷ್ಠಿತ ಜರ್ಮನ್ ಮೂಲದ ಆಟೋಮೊಬೈಲ್ ಕಂಪನಿ ಮೈಕೋ (ಈಗ ಇದು ಬಾಷ್ ಆಗಿದೆ) ಈಗಾಗಲೇ ಮಸೂದೆ ಮಂಡನೆಯಾಗಿ ಅಂಗೀಕಾರ ಆಗುವ ಮೊದಲೇ ಇಲ್ಲಿ ಜಾರಿ ಮಾಡಲಾಗಿದೆ!

ಬೆಂಗಳೂರಿನ ಸೆಂಟ್ರಲ್ ಜೈಲ್ ಹತ್ತಿರ ಇರುವ ಮೈಕೋ ಫ್ಯಾಕ್ಟರಿ ಈಗ ಎರಡಾಗಿದೆ! ಅಂದರೆ ಒಂದಿದ್ದದ್ದು ಎರಡಾಗಿಲ್ಲ, ಬದಲಾಗಿ ಒಂದೇ ಎರಡಾಗಿದೆಯಷ್ಟೇ. ಹೇಗೆಂದರೆ ಮೋದಿ ಸರ್ಕಾರ ತರಲು ಹೊರಟಿರುವ ಹೊಸ ತಿದ್ದುಪಡಿಯ ಪ್ರಕಾರ ಒಂದು ಫ್ಯಾಕ್ಟರಿಯಲ್ಲಿರುವ ಒಂದೊಂದು ಶಾಪ್ ಫ್ಲೋರ್‌ಗಳನ್ನು ಒಂದೊಂದು ಪ್ರತ್ಯೇಕ ಫ್ಯಾಕ್ಟರಿ ಎಂದು ಘೋಷಿಸಿಕೊಳ್ಳುವ ಉದಾರತೆಯನ್ನು ನಮ್ಮ ಮೋದಿ ತೋರಿದ್ದಾರೆ. ಇದು ಅರ್ಥವಾಗಬೇಕಾದರೆ ಮಸೂದೆಯಲ್ಲಿರುವ ಇನ್ನೊಂದು ತಿದ್ದುಪಡಿಯನ್ನು ತಿಳಿಯುವುದು ಒಳಿತು. 300 ಕಾರ್ಮಿಕರಿಗಿಂತ ಕಡಿಮೆ ಇರುವ ಕೈಗಾರಿಕೆಯನ್ನು ಮುಚ್ಚುವುದಾದರೆ ಅದಕ್ಕೆ ಸರ್ಕಾರದ ಅನುಮತಿ ಬೇಕಿಲ್ಲ ಎಂದಿದೆ ಆ ತಿದ್ದುಪಡಿ! ದೊಡ್ಡ ಕೈಗಾರಿಕೆಗಳನ್ನು ಬೇಕೆಂದಾಗ ಲಾಕ್‌ಔಟ್ ಮಾಡಲು ಅನುಕೂಲವಾಗುವಂತೆ ಈಗಿರುವ ಕಾನೂನನ್ನು ಬದಲಾಯಿಸಲಾಗುತ್ತಿದೆ. ಇದರ ಜತೆಯಲ್ಲೇ ಕಾರ್ಮಿಕ ಸಂಘಗಳನ್ನು ಸುಲಭವಾಗಿ ಒಡೆಯಬಹುದೆಂಬ ದೂರಾಲೋಚನೆಯೂ ಇದರಲ್ಲಿದೆ. ಜರ್ಮನ್ ಮೂಲದ ಕಂಪನಿ ಮೈಕೋ ಈಗಾಗಲೇ ಇದನ್ನು ಜಾರಿ ಮಾಡಿ ಉಳಿದ ಬಂಡವಾಳದಾರರಿಗೆ ಮಾದರಿಯಾಗಿದೆ!

ಅಮ್ನೆಸ್ಟಿ – ಎಬಿವಿಪಿ ಕಿತಾಪತಿ

ಅಮ್ನೆಸ್ಟಿ ಘಟನೆ ಈಗ ರಾಜ್ಯದ ಗಮನ ಸೆಳೆದಿದೆ. ಅಮ್ನೆಸ್ಟಿ ಇಂಟರ್ ನ್ಯಾಷನಲ್ ಸಂಸ್ಥೆಯು ಕಾಶ್ಮೀರದಲ್ಲಿ ಮಾನವ ಹಕ್ಕು ಉಲ್ಲಂಘನೆ ಕುರಿತು, ಅಲ್ಲಿ ದಾಳಿಗೊಳಗಾದ ಕುಟುಂಬದವರನ್ನು ಅವರಿಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳುವ ಒಂದು ಕಾರ್ಯಕ್ರಮವನ್ನು ಈಚೆಗೆ ಆಯೋಜಿಸಿತ್ತು. ಹಾಗೆ ನೋಡಿದರೆ ಇದೊಂದು ತೀರ ಸಣ್ಣ ಕಾರ್ಯಕ್ರಮ. ಕಾಶ್ಮೀರದಲ್ಲಿ ವಾಸವಿರುವ ಕುಟುಂಬದ ಕೆಲಸ ಸದಸ್ಯರು ಅಲ್ಲಿ ಸೇನೆ ಯಾವ ರೀತಿಯಲ್ಲಿ ಅಲ್ಲಿನ ನಾಗರೀಕರಿಗೆ ಕಿರುಕುಳ ನೀಡುತ್ತಿದೆ, ಮಹಿಳೆಯರ ಮೇಲೆ ನಡೆಸಿದ ಅತ್ಯಾಚಾರ, ದೌರ್ಜನ್ಯಗಳ ಬಗ್ಗೆ ಮುಕ್ತವಾಗಿ ಮಾತನಾಡಿದ್ದರು. ಅಲ್ಲಿಗೆ ದಿಢೀರನೆ ದಾಳಿ ಇಟ್ಟ ಎಬಿವಿಪಿ ಪಡೆ ಗಲಭೆ ಎಬ್ಬಿಸಿ, ಇಲ್ಲಿ ದೇಶದ ವಿರುದ್ಧ ಘೋಷಣೆ ಕೂಗಿದರು, ದೇಶದ ಸೈನಿಕರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದರು ಎಂದು ಸುಳ್ಳುಗಳ ಸರಮಾಲೆ ಎಣೆದು ಒಂದು ಯಕಶ್ಚಿತ್ ಕಾರ್ಯಕ್ರಮವನ್ನು ಇಡೀ ರಾಜ್ಯವೇ ಗಮನಿಸುವಂತಹ ಸುದ್ದಿಯಾಗಿಸಿತು. ಭಾವಾನಾತ್ಮಕವಾಗಿ ಅಮಾಯಕ ವಿದ್ಯಾರ್ಥಿಗಳ ಮನಸ್ಸನ್ನು ಕೆರಳಿಸಿ, ದೇಶಪ್ರೇಮದ ಉನ್ಮಾದ ಸೃಷ್ಟಿಸಿ ಗೊಂದಲ, ಗದ್ದಲ–ಗಲಾಟೆಗಳು ನಡೆಯುವಂತೆ ಮಾಡಿ, ಇದರಿಂದ ಅಮಾಯಕ ವಿದ್ಯಾರ್ಥಿಗಳು ಲಾಠಿ ಏಟು ತಿನ್ನಬೇಕಾದುದು ವಿಷಾದನೀಯ. ಎಬಿವಿಪಿ ಈ ಕಿತಾಪತಿತನಕ್ಕೆ ತುಪ್ಪ ಸುರಿದು ಇದೊಂದು ರಾಷ್ಟ್ರೀಯ ಸಮಸ್ಯೆ ಎಂಬಂತೆ ಬಿಂಬಿಸಿದ್ದು ನಮ್ಮ ಎಲೆಕ್ಟ್ರಾನಿಕ್ ಮಾಧ್ಯಮಗಳು. ಇಡೀ ಒಂದು ವಾರ ಬೆಂಗಳೂರು ಕೇಂದ್ರದಲ್ಲಿ ದೇಶಪ್ರೇಮದ ಹೆಸರಲ್ಲಿ ವಿದ್ಯಾರ್ಥಿಗಳನ್ನು ಕಲೆ ಹಾಕಿದವು. ಇದಕ್ಕೆ ಕೆಲವು ಶಾಲಾ ಮಕ್ಕಳನ್ನೂ ಕರೆ ತರೆ ತಂದಿದ್ದಾರೆ. ಇದಕ್ಕೆಲ್ಲಾ ದಿನಗಟ್ಟಲೆ ಪ್ರಚಾರ ನೀಡಿದ ಕೆಲ ಚಡ್ಡಿ ಮೀಡಿಯಾಗಳು ನಗರವೇ ಹೊತ್ತಿ ಉರಿಯುವಂತೆ ಮಾಡಿದ್ದು ದುರದೃಷ್ಟಕರ. ಪೊಲೀಸ್ ಮಹಾ ನಿರ್ದೇಶಕರೇ ಇಲ್ಲಿ ದೇಶದ್ರೋಹ ಯಾವುದೇ ವಿಚಾರಗಳು ನಡೆದಿಲ್ಲ, ಯಾರೊಬ್ಬರೂ ಘೋಷಣೆ ಕೂಗಿಲ್ಲ ಎಂದು ಸ್ಪಷ್ಟಪಡಿಸಿದರೂ ಎಬಿವಿಪಿ ಮಾತ್ರ ಹಟಕ್ಕೆ ಬಿದ್ದಂತೆ ವರ್ತಿಸಿದೆ.

ಮಹದಾಯಿ ವಿಚಾರದಲ್ಲಿ ಬಿಜೆಪಿ ಎಲ್ಲಾ ರಾಜ್ಯ–ರಾಷ್ಟ್ರ ನಾಯಕರೆಲ್ಲಾ ಯಾವುದೇ ಪ್ರತಿಕ್ರಿಯೆಗೂ ಸಿಗದಿದ್ದವರು, ಈ ವಚಾರದಲ್ಲಿ ಪೈಪೋಟಿಗೆ ಬಿದ್ದವರಂತೆ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಸ್ವತಃ ಬಿಜೆಪಿ ರಾಜ್ಯಾಧ್ಯಕ್ಷ ಬಿಎಸ್ ಯಡಿಯೂರಪ್ಪ ಕೂಡ ತಕ್ಷಣವೇ ಇದಕ್ಕೆ ತತಕ್ಷಣವೇ ಪ್ರತಿಕ್ರಿಯಿಸಿದ್ದಾರೆ. ಇದು ಅನುಮಾನಗಳನ್ನು ಹುಟ್ಟಿಸಿದೆ. ಊನ ಘಟನೆಯಲ್ಲಿ ಹಿನ್ನೆಯಲ್ಲಿ ದೇಶಾದ್ಯಂತ ಎದ್ದು ಬಂದ ದಲಿತರ ಪ್ರತಿಭಟನೆ ಬಿಜೆಪಿಯ ಮಾನ ಹರಾಜು ಹಾಕಿತ್ತು. ಇದರ ಗಮನ ಬೇರೆಡೆ ಸೆಳೆಯಲು ವಿಷಯ ಹುಡುಕುತ್ತಿದ್ದವರಿಗೆ ಕಾಶ್ಮೀರ ಎನ್ನುವ ಹುಲ್ಲುಕಡ್ಡಿಯನ್ನೇ ಆಸರೆಯನ್ನಾಗಿ ಮಾಡಿಕೊಂಡು ರಾಡಿ ಎಬ್ಬಿಸಿ ಮುಖ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ದುರದೃಷ್ಟವೆಂದರೆ ಅಮಾಯಕ ವಿದ್ಯಾರ್ಥಿಗಳನ್ನು ಇದಕ್ಕೆ ಎಳೆದು ತಂದು, ಪ್ರಚಾರ ಕ್ಕಾಗಿ ಅವರ ಮೇಲೆ ಪೊಲೀಸ್ ಲಾಠಿಚಾರ್ಜ್ ಆಗುವಂತೆ ಯೋಜಿತ ಷಡ್ಯಂತ್ರ ರೂಪಿಸಿದ್ದು ಗುಟ್ಟಾಗೇನು ಉಳಿದಿಲ್ಲ. ಎಬಿವಿಪಿಯ ಹಪಾಹಪಿತನದ ವಿರುದ್ಧ ಎಸ್‌ಎಫ್‌ಐ ಸೇರಿದಂತೆ ಅನೇಕ ಪ್ರಗತಿಪರ ಸಂಘಟನೆಗಳು ಖಂಡಿಸಿ ಪ್ರತಿಭಟನೆ ನಡೆಸಿವೆ. ಈ ಮಧ್ಯೆ ಸುವರ್ಣ ಚಾನೆಲ್ ಈ ವಿಷಯದಲ್ಲಿ ಪ್ಯಾನಲ್ ಚರ್ಚೆಗೆ ಕರೆದು ಸೂಲಿಬೆಲೆ ಎಂಬ ಸುಳ್ಳುಬುರುಕನ್ನು ಕರೆದು ಕೂರಿಸಿ, ವಿರುದ್ಧವಾಗಿ ಮಾತನಾಡಿದವರ ಮಾತುಗಳನ್ನು ಕಟ್ ಮಾಡಿ ಒಂದುವರೆ ಗಂಟೆ ಚರ್ಚೆಯನ್ನು 45 ನಿಮಿಷಕ್ಕೆ ಇಳಿಸಿ ಜನರಲ್ಲಿ ತಪ್ಪು ಅಭಿಪ್ರಾಯಗಳು ಮೂಡುವಂತೆ ಮಾಡಿದ ಸುವರ್ಣ ಚಾನಲ್‌ನ ಹುನ್ನಾರವೂ ಕೊನೆಗೆ ಬಯಲಾಗಿದೆ.

ಸುಳ್ಳು ದೇಶದ್ರೋಹ ಪ್ರಕರಣ ದಾಖಲು..... ಪುಟ 20 ರಿಂದ

ಜೂನಿಯರ್ ಕಾಲೇಜು ಆವರಣದಲ್ಲಿಯೂ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟದ ವಿದ್ಯಾರ್ಥಿ ಮುಖಂಡರಾದ ಜ್ಯೋತಿ, ಮುತ್ಯಾಲ, ಗೋವಿಂದರಾಜು, ಮಂಜುನಾಥ್, ನಾಗೇಂದ್ರ, ವಿನೋದ್ ಕುಮಾರ್ ಮತ್ತು ಓಬಳೇಶ್ ಕರಪತ್ರ ಹಂಚಿದ್ದರು. ಇದನ್ನು ಸಹಿಸಲಾರದ ಎಬಿವಿಪಿ, ಬಿಜೆಪಿ ಮತ್ತು ಸಂಘಪರಿವಾರದ ಮುಖಂಡರು ಎಐವೈಎಫ್ ಕಾರ್ಯಕರ್ತರ ಮೇಲೆ ಗಂಭೀರವಾಗಿ ಹಲ್ಲೆ ನಡೆಸಿದ್ದರು. ಆದರೆ ಹಲ್ಲೆ ನಡೆದ ಬಗ್ಗೆ ಪ್ರಕರಣ ದಾಖಲಾಗಲಿಲ್ಲ. ದೇಶ ದ್ರೋಹದ ಪ್ರಕರಣ ದಾಖಲಾಗಿತ್ತು.

ಎಸ್.ಎಫ್.ಐ ಪ್ರತಿಭಟನೆ

ಅಗಸ್ಟ್ 23ರಂದು ಜಿಲ್ಲಾ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಅವರನ್ನು ಭೇಟಿ ಮಾಡಿ ವಿದ್ಯಾರ್ಥಿ ಪ್ರವೀಣ ಕುಮಾರ್ ಸಿಂಗ್ ಅವರನ್ನು ಬಿಡುಗಡೆ ಮಾಡಬೇಕು ಮತ್ತು ಅವರ ಮೇಲೆ ದಾಖಲಾಗಿರುವ ದೇಶದ್ರೋಹದ ಸುಳ್ಳುಕೇಸ್ ನ್ನು ವಾಪಸ್ಸ ಪಡೆಯಬೇಕು ಎಂದು ಎಸ್.ಎಫ್.ಐ ಕಾರ್ಯಕರ್ತರು ಒತ್ತಾಯಿಸಿದರು. ಮೂರನೇಯ ವ್ಯಕ್ತಿಯ ಮಾತು ಕೇಳಿ ಎ.ಬಿ.ವಿ.ಪಿಯವರು ತುಮಕೂರಿನ ಸಿದ್ಧಾರ್ಥ ಕಾಲೇಜಿನ ವಿದ್ಯಾರ್ಥಿ ಪ್ರವೀಣ್‌ಕುಮಾರ್‌ಸಿಂಗ್ ಮೇಲೆ ದೇಶದ್ರೋಹಿ ಕೇಸ್ ದಾಖಲಿಸಿದ್ದು, ಆ ದೂರಿನ ಅನ್ವಯ ಪ್ರವೀಣ್‌ಕುಮಾರ್‌ಸಿಂಗ್‌ಗೆ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರವೀಣ್‌ಕುಮಾರ ್‌ಸಿಂಗ್ ಯಾವುದೇ ದೇಶದ್ರೋಹದ ಘೋಷಣೆಯನ್ನು ಕೂಗಿಲ್ಲ. ಮೇಲಾಗಿ ಆತ ಸೈನ್ಯವನ್ನು ಸೇರಲು ಬಯಸಿದ್ದ. ಇದೇ ತಿಂಗಳು ಕೊನೆಯಲ್ಲಿ ಸೇನಾ ನೇಮಕಾತಿ ಕುರಿತು ಸಂದರ್ಶನ ನಡೆಯಲಿದೆ ಹಾಗಾಗಿ ಪ್ರವೀಣ್‌ಕುಮಾರ್‌ಸಿಂಗ್ ಬಿಡುಗಡೆಯಾಗಬೇಕು ಹಾಗೂ ಆತನ ಮೇಲೆ ಹಾಕಿರುವ ದೇಶದ್ರೋಹದ ಕೇಸ್ ವಾಪಸ್ಸ್ ತೆಗೆಯಬೇಕು ಎಂದು ಎಸ್.ಎಫ್.ಐ ಒತ್ತಾಯಿಸಿದೆ.

ಜಾಮೀನು ಸಿಕ್ಕಿದೆ ಆದರೆ ಬಿಡುಗಡೆ ಇಲ್ಲ :

ಜಾಮೀನು ಅರ್ಜಿ ವಿಚಾರಣೆ ನಡೆಸಿದ 4ನೇ ಹೆಚ್ಚುವರಿ ನ್ಯಾಯಾಲಯ ಕೆಲ ಷರತ್ತಿನ ಮೇಲೆ ಆಗಸ್ಟ್ 24 ರಂದು ಜಾಮೀನು ನೀಡಿದೆ. ರೂ. 50 ಸಾವಿರ ಭದ್ರತೆ, ನ್ಯಾಯಾಲಯಕ್ಕೆ ವಿಶ್ವಾಸ ಬರುವಂತೆ ಸ್ಥಳೀಯವಾದ ಸಾಕ್ಷಿ ಭದ್ರತೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದೆಂದು ಷರತ್ತು ಹಾಕಲಾಗಿದೆ.

ಜಾಮೀನಿಗೆ ಸ್ಥಳೀಯ ಸಾಕ್ಷಿ ಯಾರು ಸಿಗದಿರುವುದರಿಂದ ಇನ್ನೂ ಬಿಡುಗಡೆಯಾಗಿಲ್ಲ. ಎಸ್.ಎಫ್.ಐ. ಸಂಘಟನೆಯೂ ಕಾಲೇಜಿನಿಂದಲೇ ಜಾಮೀನು ನೀಡಬೇಕು ಎಂದು ತಿಳಿಸಿದ್ದಾರೆ. ಈ ಸಂಬಂಧ ಪೊಲೀಸ್ ಅಧಿಕಾರಿಗಳನ್ನು ಸಂಘಟನೆ ಮತ್ತೊಮ್ಮೆ ಭೇಟಿ ಮಾಡಿ ಮಾತುಕತೆ ನಡೆಸಿದೆ. ●

ಪ್ರಧಾನ ಮಂತ್ರಿಗಳ ಭಾಷಣದಲ್ಲಷ್ಟೇ ಬೆಳಕು, ವಾಸ್ತವವಾಗಿ ಇನ್ನೂ ಕತ್ತಲೆಯಲ್ಲೇ ಬದುಕು

ಈ 'ಅಚ್ಛೇ ದಿನ್'ಗಳಲ್ಲಿ ಭಾಷಣಬಾಜಿಗೂ ವಾಸ್ತವತೆಗೂ ಇರುವ ಅಂತರಕ್ಕೆ ಮತ್ತೊಂದು ಉದಾಹರಣೆಯನ್ನು ಕೆಂಪು ಕೋಟೆಯಿಂದ ಸುಮಾರು 300ಕಿ.ಮೀ. ದೂರದಲ್ಲಿರುವ ಉತ್ತರ ಪ್ರದೇಶದ ಹಾಥ್‌ರಸ್ ಜಿಲ್ಲೆಯ ನಗ್ಲಾ ಫತೆಲಾ ಎಂಬ ಹಳ್ಳಿಯ 450 ಮನೆಗಳ ಜನರು ಈ ಆಗಸ್ಟ್ 15ರಂದು ಸ್ವತಃ ಕಂಡರು.

"ನಗ್ಲಾ ಫತೆಲಾ ತಲುಪಲು ಮೂರು ಗಂಟೆಗಳು ಸಾಕು, ಆದರೆ ಅಲ್ಲಿಗೆ ವಿದ್ಯುತ್ ತಲುಪಲು 70 ವರ್ಷಗಳು ಹಿಡಿದವು" ಎಂದು ಪ್ರಧಾನಿಗಳು ಕೆಂಪು ಕೋಟೆ ಭಾಷಣದಲ್ಲಿ ಎರಡೂ ಕೈಗಳನ್ನೆತ್ತಿ ತಮ್ಮ ವಿಶಿಷ್ಟ ಶೈಲಿಯಲ್ಲಿ ಹಿಂದಿನ ಆಳರಸರನ್ನು ಗೇಲಿ ಮಾಡಿದರು. ಈ ಹಳ್ಳಿಯ ಜನರೀಗ ಈ ಮಾತುಗಳನ್ನು ತಮ್ಮ ಮನೆಯಲ್ಲಿ ಟಿವಿಗಳಲ್ಲಿ ಕೇಳುತ್ತಿದ್ದಾರೆ ಎಂದು ತನಗೆ ತಿಳಿಸಲಾಗಿದ ಎಂದೂ ಅವರು ಹೇಳಿದರು. ಪ್ರಧಾನ ಮಂತ್ರಿಗಳ ಕಚೇರಿ ಈ ರೀತಿ ಟಿವಿಯಲ್ಲಿ ಕೆಂಪು ಕೋಟೆ–ಯ ನೇರ ಪ್ರಸಾರವನ್ನು ನೋಡುತ್ತಿರುವ ಒಂದು ಫೋಟೋವನ್ನೂ ಪ್ರಕಟಿಸಿತು! ಇದು ಹತ್ತಿರದ ನಗ್ಲಾ ಸಿಂಧಿ ಎಂಬ ಇನ್ನೊಂದು ಹಳ್ಳಿಯದ್ದೆಂದು ಆಮೇಲೆ ತಿಳಿಯಿತು!

ತಮ್ಮ ಹಳ್ಳಿಯ ಹೆಸರು ಆಗಸ್ಟ್ 15ರಂದು ಐತಿಹಾಸಿಕ ಕೆಂಪು ಕೋಟೆಯಲ್ಲಿ ಪ್ರಧಾನಿಗಳ ಮಾತಿನಲ್ಲಿ ಮೊಳಗಿದೆ ಎಂದು ಬೇರೆಯವರಿಂದ ಕೇಳಿದಾಗ ನಗ್ಲಾ ಫತೆಲಾ ಜನರಿಗೆ ಒಂದೆಡೆಯಲ್ಲಿ ಧನ್ಯತಾ ಭಾವ. ಆದರೆ ಇನ್ನೊಂದೆಡೆ ಪ್ರಧಾನಿಗಳೇಕೆ 70 ವರ್ಷಗಳಾದರೂ ಇನ್ನೂ ತಲುಪದ ವಿದ್ಯುತ್ ತಲುಪಿದೆಯೆಂದರು ಎಂದು ಆಶ್ಚರ್ಯ. ಈ ಹಳ್ಳಿಯಲ್ಲಿ 600 ಮನೆಗಳಿವೆ. ಅದರಲ್ಲಿ 450 ಮನೆಗಳಲ್ಲಿ ವಿದ್ಯುತ್ ಇಲ್ಲ. ವಿದ್ಯುತ್ ಸಂಪರ್ಕ ಇರುವ ಸುಮಾರು 150 ಮನೆಗಳಲ್ಲೂ ವಿದ್ಯುತ್ ದೀಪ ಉರಿಯುತ್ತಿದ್ದರೆ ಅದು ಕೊಳವೆ ಬಾವಿಗಳಿಗೆಂದು ಹಾಕಿದ ಒಂದು ಟ್ರಾನ್ಸ್‌ಫಾರ್ಮರ್‌ನಿಂದ ಪಡೆದ ಅನಧಿಕೃತವಾದ 'ಕಟಿಯಾ' ಸಂಪರ್ಕಗಳಿಂದ. ಇದು 1985ರಿಂದಲೇ ಇದೆಯಂತೆ. ಈ ಅನಧಿಕೃತ ಸಂಪರ್ಕಕ್ಕೆ ಅವರು 'ದಕ್ಷಿಣಾಂಚಲ ವಿದ್ಯುತ್ ವಿತರಣ್ ನಿಗಮ'(ಡಿವಿವಿಎನ್‌ಎಲ್)ಗೆ ಎರಡು ತಿಂಗಳಿಗೆ ರೂ.395 ತೆರುತ್ತಿದ್ದಾರಂತೆ.

'ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ'ಯಲ್ಲಿ ವಿದ್ಯುದೀಕರಣಕ್ಕೆ ಈ ಹಳ್ಳಿಗೆ ವಿದ್ಯುತ್ ಕಂಬಗಳು, ವೈರ್‌ಗಳು ಇತ್ಯಾದಿಗಳೇನೋ ಬಂದು ಬಿದ್ದಿವೆ, ಆದರೆ ವಿದ್ಯುತ್ ಸಂಪರ್ಕ ಇನ್ನೂ ದೂರದ ಕನಸಾಗಿಯೇ ಉಳಿದಿದೆ ಎಂದು ಊರ ಪ್ರಧಾನರು ಹೇಳಿರುವುದಾಗಿ ಇಂಡಿಯನ್ ಎಕ್ಸ್‌ಪ್ರೆಸ್(ಆಗಸ್ಟ್17) ವರದಿ ಮಾಡಿದೆ.

ಪ್ರಧಾನಿಗಳ ಭಾಷಣ ಕೇಳಿ ಈ ಹಳ್ಳಿಗೆ ಅಧಿಕಾರಿಗಳು ಧಾವಿಸಿದಾಗ ತಿಳಿದ ವಿಚಾರವೆಂದರೆ, ಈ ಹಳ್ಳಿಗೆ 'ಅಚ್ಛೇದಿನ್' ಮೊದಲೇ, ಅಂದರೆ 13.11.2013ರಂದು ವಿದ್ಯುದೀಕರಣದ ಯೋಜನೆ ಮಂಜೂರಾಗಿತ್ತು. ಈಗ ಯೋಜನೆಯ ಹೆಸರು ಬದಲಾದರೂ ವಿದ್ಯುತ್ ಇನ್ನೂ ತಲುಪಿಲ್ಲ.

ಈ ನಡುವೆ ಹಾಥ್‌ರಸ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಈ ಹಳ್ಳಿಗೆ ಅಧಿಕಾರಿಗಳನ್ನು ಕಳಿಸಿದ್ದು ಮೂರು ದಶಕಗಳಿಂದ 'ಕಟಾಯಿ' ಸಂಪರ್ಕ ಹೊಂದಿರುವವರನ್ನು ಶಿಕ್ಷಿಸುವ ಬಗ್ಗೆ ಯೋಚಿಸುತ್ತಿದ್ದಾರಂತೆ! ಪ್ರಧಾನಿಗಳು ಕೆಂಪು ಕೋಟೆಯಿಂದ ಮಾಡಿದ ಭಾಷಣದಲ್ಲಿ ಹೇಳಿದ 'ಉತ್ತಮ ಆಳ್ವಿಕೆ'ಯ ಮತ್ತೊಂದು ಉದಾಹರಣೆ!

ಈ ಭಾಷಣದ ನಂತರ ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಕೂಡ ಸರಕಾರ ಹೈಕೋರ್ಟ್ ನ್ಯಾಯಾಧೀಶರುಗಳ ನೇಮಕಕ್ಕೆ ಸರಕಾರದ ನಿಷ್ಕ್ರಿಯತೆಯಿಂದ ಉಂಟಾಗಿರುವ ಅಡಚಣೆ ನಿವಾರಿಸುವ ಬಗ್ಗೆ ಏನೂ ಹೇಳಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. 'ಉತ್ತಮ ಆಳ್ವಿಕೆ'ಯ ಇನ್ನೊಂದು ಉದಾಹರಣೆ!

ಕಾಶ್ಮೀರ: ಸಂವಾದದ ಮಾತಿಗೆ ಬಲ,ಮೌನವಂತೂ ಮುರಿಯಿತು

..ಪುಟ 2ರಿಂದ

ಮಾತನಾಡುತ್ತ, ಒಮರ್ ಅಬ್ದುಲ್ಲರವರು ತಾವು ಯೆಚೂರಿಯವರಿಗೆ ಧನ್ಯವಾದ ತಿಳಿಸಲು ಬಂದಿರುವುದಾಗಿ ಹೇಳಿದರು, ಈ ಪ್ರಶ್ನೆಗೆ ಪರಿಹಾರ ಸಿಗುವವರೆಗೆ ಇದನ್ನು ಮುಂದುವರೆಸಬೇಕು, ಏಕೆಂದರೆ ಪರಿಸ್ಥಿತಿ ಹದಗೆಟ್ಟಾಗ ಈ ರಾಜ್ಯದ ನೆನಪಾಗುತ್ತದೆ, ಅದು ತುಸು ತಿಳಿಗೊಂಡ ನಂತರ ಎಲ್ಲವನ್ನೂ ಮರೆತು ಬಿಡಲಾಗುತ್ತದೆ ಎಂದು ಅವರು ಟಿಪ್ಪಣಿ ಮಾಡಿದರು.

ಸಿಪಿಐ(ಎಂ) ಮಖಂಡರನ್ನು ಭೇಡಿ ಮಾಡಲು ಬರುವ ಮೊದಲು ನಿಯೋಗ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿತ್ತು. ಆಗ ಪ್ರಧಾನಿಗಳು ಕಾಶ್ಮೀರ ಕಣಿವೆಯಲ್ಲಿನ ಪರಿಸ್ಥಿತಿಯ ಬಗ್ಗೆ 'ಆಳವಾದ ನೋವು 'ವ್ಯಕ್ತಪಡಿಸಿದರು ಎಂದು ವರದಿಯಾಗಿದೆ. ಸಂವಿಧಾನದ ಚೌಕಟ್ಟಿನೊಳಗೆ ಒಂದು ಶಾಶ್ವತ ಪರಿಹಾರ ಕಂಡುಕೊಳ್ಳುವ ಸಂವಾದದ ಅಗತ್ಯ ಇದೆ ಎಂದು ಅವರು ಒಪ್ಪಿಕೊಂಡರಂತೆ; ಇದಕ್ಕೆ ಎಲ್ಲ ರಾಜಕೀಯ ಪಕ್ಷಗಳು ಒಟ್ಟಾಗಿ ಕೆಲಸ ಮಾಡುವ ಅಗತ್ಯ ಇದೆ ಎಂದು ಹೇಳುತ್ತ ರಾಜ್ಯ ಅಭಿವೃದ್ಧಿ ತಾವು ಬದ್ಧ ಎಂದರು.

ಈ ನಡುವೆ ಜಮ್ಮುವಿನಲ್ಲಿ ಮಾತನಾಡುತ್ತ ಅವರ ಹಿರಿಯ ಸಹೋದ್ಯೋಗಿ ಹಣಕಾಸು ಮಂತ್ರಿಗಳು ಕಾಶ್ಮೀರ ಕಣಿವೆಯಲ್ಲಿ ಪ್ರತಿಭಟಿಸುತ್ತಿರುವವರು ಸತ್ಯಾಗ್ರಹಿಗಳಲ್ಲ, ಆಕ್ರಮಣಕೋರರು ಎಂದು ಹೇಳಿರುವುದಾಗಿ ವರದಿಯಾಗಿದೆ. 20 ಪೋಲೀಸರನ್ನು 2000 ಮಂದಿ ಸುತ್ತುವರೆದು ಕಲ್ಲು ತೂರಿದರೆ ಅದು ಆಕ್ರಮಣವಾಗುತ್ತದೆ, ಇದನ್ನು ಅರಿಯದೆ ಕ್ಷುಲ್ಲಕ ರಾಜಕೀಯ ಮಾಡಲಾಗುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರಂತೆ.

ಈ ಬಗ್ಗೆ ಒಮರ್ ಅಬ್ದುಲ್ಲರವರನ್ನು ಪತ್ರಕರ್ತರು ಕೇಳಿದಾಗ ಅವರ ಮಾತುಗಳನ್ನು ತಳ್ಳಿ ಹಾಕುತ್ತ, ಅವರೇನೇ ಹೇಳಲಿ, ನನಗೆ ಪ್ರಧಾನಿಗಳ ಹೇಳಿಕೆಯೇ ಮುಖ್ಯ ಎಂದರು.

ಹಣಕಾಸು ಮಂತ್ರಿಗಳ 'ಆಕ್ರೋಶ'ವನ್ನು ಈಗಾಗಲೇ ಚುನಾವಣಾ 'ನಡೆ'ಗೆ ಇಳಿದಿರುವ ಉತ್ತರಪ್ರದೇಶದ ಪ್ರಚಾರದ ಹಿನ್ನೆಲೆಯಲ್ಲಿ ನೋಡಬೇಕಾದೀತು ಎಂದು ವಿಶ್ಲೇಷಕರೊಬ್ಬರು ಹೇಳಿದ್ದಾರೆ.

ಜಮ್ಮು–ಕಾಶ್ಮೀರದ ಪ್ರತಿಪಕ್ಷಗಳ ನಿಯೋಗ ಪ್ರಧಾನಿಗಳನ್ನು ಭೇಟಿ ಮಾಡಿದಾಗ ಒಬ್ಬ ಸದಸ್ಯರು ಯಾವ ಪಕ್ಷವೂ ಕಾಶ್ಮೀರವನ್ನು ಮುಂದಿನ ವರ್ಷದ ಉತ್ತರ ಪ್ರದೇಶದ ಚುನಾವಣೆಯ ರಂಗವಾಗಿ ಮಾಡದಂತೆ ನೋಡಿಕೊಳ್ಳಿ ಎಂದು ಪ್ರಧಾನಿಗಳಿಗೆ ಹೇಳಿದರಂತೆ. ಆಗ ಪ್ರಧಾನಿಗಳು ನಕಾರಾತ್ಮಕವಾಗಿ ಪ್ರತಿಕ್ರಿಯಿಸದೆ ತಾವೂ ತಮ್ಮ ಪಕ್ಷದ ಮುಖಂಡರಿಗೆ ಹೇಳುವುದಾಗಿ ತಿಳಿಸಿದರಂತೆ.

ಇದುವರೆಗೆ ಕಾಶ್ಮೀರದ ಪ್ರಸಕ್ತ ಬೆಳವಣಿಗೆಗಳನ್ನು ಕುರಿತಂತೆ ಕೇಂದ್ರ ಸರಕಾರದ ನಿಲುವಿನ ಹಿನ್ನೆಲೆಯಲ್ಲಿ ಹೆಚ್ಚೇನೂ ನಿರೀಕ್ಷೆಯಿಟ್ಟುಕೊಳ್ಳದೆ ಹೋಗಿದ್ದ ನಿಯೋಗದ ಸದಸ್ಯರಲ್ಲಿ ಹಲವರಿಗೆ ಇದು ಅನಿರೀಕ್ಷಿತವಾಗಿತ್ತಂತೆ. ಮರುದಿನವೇ ಗೃಹಮಂತ್ರಿಗಳು ಕಾಶ್ಮೀರಕ್ಕೆ ಎರಡನೇ ಭೇಟಿಗೆ ಹೊರಟದ್ದು ಕೂಡ ಅನಿರೀಕ್ಷಿತವಾಗಿತ್ತು.

ಆದರೆ ಸಂಘ ಪರಿವಾರದ ಎರಡು ನಾಲಗೆಗಳ ಚರಿತ್ರೆ ಈ ಬಗ್ಗೆ ಹೆಚ್ಚೇನೂ ವಿಶ್ವಾಸ ಮೂಡಿಸಿಲ್ಲ. ಪರಿವಾರ ಗದ್ದಲ ಎಬ್ಬಿಸುತ್ತಿರುವಾಗ ಪ್ರಧಾನಿಗಳು ದಿವ್ಯಮೌನ ವಹಿಸುವುದು, ರಾಜಕೀಯವಾಗಿ ಅನಿವಾರ್ಯವಾದಾಗ ಪರಿವಾರದ ಎಂದಿನ ನಿಲುವಿಗೆ ವ್ಯತಿರಿಕ್ತವಾಗಿ ಬಾಯಿ ತೆರೆದು ಮತ್ತೆ ಮುಚ್ಚಿಕೊಳ್ಳುವುದು ಈ 'ಅಚ್ಛೇ ದಿನ್'ಗಳ ನಡೆಗಳ ವಿಶಿಷ್ಟತೆ.


ಮಾಜಿ ಸೇನಾ ಮುಖ್ಯಸ್ಥ ಕೇಂದ್ರ ಮಂತ್ರಿಗಳ ವಿರುದ್ಧ ಹಾಲಿ ಸೇನಾ ಮುಖ್ಯಸ್ಥರ ಅಫಿಡವಿಟ್!

ಈ ಅಚ್ಛೇ ದಿನ್‌ಗಳಲ್ಲಿ ಹಲವು ವಿಲಕ್ಷಣ ಸಂಗತಿಗಳು ನಡೆಯುತ್ತಿವೆ. ಇದಕ್ಕೆ ಸೇರ್ಪಡೆಯಾದ ಇತ್ತೀಚಿನ ಪ್ರಕರಣ ಎಂದರೆ ತನ್ನ ಹಿಂದೆ ಸೇನಾ ಮುಖ್ಯಸ್ಥರಾಗಿದ್ದವರು ತಮ್ಮೊಡನೆ ಅನುಚಿತವಾಗಿ ವರ್ತಿಸಿದ್ದರೆಂದು ಸುಪ್ರಿಂ ಕೋರ್ಟಿನಲ್ಲಿ ಪ್ರಸಕ್ತ ಸೇನಾ ಮುಖ್ಯಸ್ಥರ ಅಫಿಡವಿಟ್. ಆ ಹಿಂದಿನ ಸೇನಾ ಮುಖ್ಯಸ್ಥ ಈಗ ಸರಕಾರದಲ್ಲಿ ವಿದೇಶಾಂಗ ರಾಜ್ಯಮಂತ್ರಿ ಬೇರೆ!

ಹೌದು ಈ ಮಂತ್ರಿಗಳು 2012ರಲ್ಲಿ, ಭಾರತೀಯ ಸಶಸ್ತ್ರ ಪಡೆಗಳ ಮುಖ್ಯಸ್ಥರಾಗಿದ್ದಾಗ ತನಗೆ ಸೇನಾ ಕಮಾಂಡರ್ ಆಗಿ ಬಡ್ತಿಯನ್ನು ತಪ್ಪಿಸುವ ಏಕೈಕ ಉದ್ದೇಶದಿಂದ ಶಿಕ್ಷಿಸಲು ಪ್ರಯತ್ನಿಸಿದರು ಎಂದು ಈ ಅಫಿಡವಿಟ್‌ನಲ್ಲಿ ವೈಯಕ್ತಿಕ ನೆಲೆಯಲ್ಲಿ ಪುನರುಚ್ಚರಿಸಿದ್ದಾರೆ.

ಈ ಅಫಿಡವಿಟ್ ವೈಯಕ್ತಿವಾಗಿದ್ದರೂ ರಕ್ಷಣಾ ಮಂತ್ರಾಲಯ ಇದಕ್ಕೆ ಅನುಮತಿ ನೀಡದೆ ಸಲ್ಲಿಸಲು ಆಗುತ್ತಿರಲಿಲ್ಲವಾದ್ದರಿಂದ ಸೇನಾ ಮುಖ್ಯಸ್ಥರ 'ವೈಯಕ್ತಿಕ' ಆಪಾದನೆಗೆ ರಕ್ಷಣಾ ಮಂತ್ರಾಲಯದ ಪರೋಕ್ಷ ಬೆಂಬಲ ಇದೆ ಎಂದಂತಾಯಿತು ಎಂದು ವಿಶ್ಲೇಷಕರೊಬ್ಬರು ಹೇಳುತ್ತಾರೆ.

ಇದರಿಂದ ಕುಪಿತರಾಗಿರುವ ಮಾಜಿ ಸೇನಾ ಮುಖ್ಯಸ್ಥ ಮತ್ತು ಹಾಲಿ ಮಂತ್ರಿ ಇದನ್ನು 'ಶಸ್ತ್ರಾಸ್ತ್ರ ವ್ಯಾಪಾರಿಗಳು ಮತ್ತು ಭ್ರಷ್ಟ ಅಧಿಕಾರಶಾಹಿಗಳು' ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆ ಎನ್ನುತ್ತ ಬಹುಶಃ ತಮಗರಿವಿಲ್ಲದೆಯೇ ಈ 'ಅಚ್ಛೇ ದಿನ್' ಸಂಪುಟದ ಒಳ್ಳೆಯತನದ ಅಭಾವವನ್ನು ಎತ್ತಿ ತೋರಿದ್ದಾರೆ. ಸೈನ್ಯದ ಬಗ್ಗೆ ಟಿಪ್ಪಣಿ ಮಾಡುವುದೇ ರಾಜದ್ರೋಹ, ರಾಷ್ಟ್ರ ದ್ರೋಹವೆಂದೆಲ್ಲ ಆಗುತ್ತಿರುವ ಈ ದಿನಗಳಲ್ಲಿ ಸೇನಾಪಡೆಗಳ ಒಳಗೆ ಇಂತಹ ಹೊಲಸು ಬಡ್ತಿ ರಾಜಕೀಯ ಮಾಡಿದವರನ್ನು ಏನೆನ್ನಬೇಕು ಎಂಬ ಪ್ರಶ್ನೆ ಸಹಜ ತಾನೇ?



ವ್ಯಂಗ್ಯ ಚಿತ್ರ: ಸುರೇಂದ್ರನ್, ದಿ ಹಿಂದು



ಹಣದುಬ್ಬರ ದರ: 6% 'ಸಾಧನೆ' ಆಗಲೇ ಹಳಸಲಾಗಿದೆ

ಹಣದುಬ್ಬರ 6ಶೇ. ದಾಟದಂತೆ ಸರಕಾರ ನೋಡಿಕೊಂಡಿದೆ ಎಂಬುದು ಪ್ರಧಾನಿಗಳು ಈ ಬಾರಿಯ ಕೆಂಪುಕೋಟೆಯ ಭಾಷಣದಲ್ಲಿ ಹೇಳಿಕೊಂಡ ಮತ್ತೊಂದು 'ಸಾಧನೆ'. ಜುಲೈನಲ್ಲಿ ಹಣದುಬ್ಬರದ ದರ 6.07ಶೇ.ಕ್ಕೆ ಏರಿದೆ. ಜೂನ್‌ನಲ್ಲಿ ಇದು 5.77% ಇತ್ತು ಎಂಬ ಹಿನ್ನೆಲೆಯಲ್ಲಿ ಈ 6ಶೇ.ದ ಮಾತು ಹೇಳಿರಬಹದು. ಆದರೆ ಜುಲೈನ ಹನದುಬ್ಬರ ಕಳೆದ 23 ತಿಂಗಳಲ್ಲೇ ಅತಿ ಹೆಚ್ಚಿನ ಮಟ್ಟ ಎನ್ನಲಾಗಿದೆ. ಅವರ ಮಾದರಿ ರಾಜ್ಯ ಗುಜರಾತ್(8.18%) ಸೇರಿದಂತೆ ಐದು ರಾಜ್ಯಗಳಲ್ಲಿ ಅದು ಆಗಲೇ 6ಶೇ.ದ 'ಸಾಧನೆ'ಯ ಲಕ್ಷ್ಮಣರೇಖೆಯನ್ನು ದಾಟಿ ಬಹಳ ಮುಂದೆ ಹೋಗಿದೆ.

ಇದರ ನಂತರ ಬಂದ ಸಗಟು ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರದ ದರ ಇನ್ನೂ ಹೆಚ್ಚಿನ ಏರಿಕೆಯನ್ನು ತೋರಿಸಿದೆ. ಜೂನ್‌ನಲ್ಲಿ 1.62% ಇದ್ದದ್ದು ಜುಲೈನಲ್ಲಿ 3.35%ಕ್ಕೆ ನೆಗೆದಿದೆ.

ಗಮನಾರ್ಹವಾದ, ಆದರೆ ಪ್ರಧಾನಿಗಳು ಹೇಳದಿದ್ದ ಸಂಗತಿಯೆಂದರೆ ಈ ಎರಡೂ ಸೂಚ್ಯಂಕಗಳಲ್ಲಿ ಬಡಜನರನ್ನೇ ಹೆಚ್ಚಾಗಿ ತಟ್ಟುವ ಆಹಾರ ಬೆಲೆಗಳ ಏರಿಕೆಯದ್ದೇ ಪ್ರಮುಖ ಪಾತ್ರ.. ಬಳಕೆದಾರ ಸೂಚ್ಯಂಕ ಆಧಾರಿತವಾದ ಒಟ್ಟಾರೆ ಆಹಾರದ ಹಣದುಬ್ಬರ ಆಗಲೇ ಪ್ರಧಾನಿಗಳು ಹೇಳಿದ 6ಶೇ.ವನ್ನು ದಾಟಿದೆ. ಜುಲೈನಲ್ಲಿ ಅದು 7.96ಶೇ. ಆಗಿದೆ. ತರಕಾರಿಗಳು(14%), ಬೇಳೆಗಳು(28%), ಹಾಲು, ಮೊಟ್ಟೆ ,ಮಾಂಸ(22%) ದರ ಏರಿಕೆ ಇನ್ನೂ ಹೆಚ್ಚು.

ಸಗಟು ಬೆಲೆಗಳ ಆಧಾರದಲ್ಲಿ ಆಹಾರ ಬೆಲೆಯುಬ್ಬರ 11% ದಾಟಿದೆ. ಆಲೂಗಡ್ಡೆ ದರ ಏರಿಕೆ ಜೂನ್ ತಿಂಗಳಲ್ಲಿ 58.78% ಇದ್ದದ್ದು ಜುಲೈನಲ್ಲಿ 64.41% ಆಗಿದೆ; ಬೇಳೆಗಳ ಬೆಲೆ ಏರಿಕೆ 26.61%ದಿಂದ 35.76% ಆಗಿದೆ!

ಇದು ಸಾಲದೆಂಬಂತೆ ಇಳಿಮುಖವಾಗುತ್ತಿರುವ ರೈಲು ಸಾಗಾಣಿಕೆ ಆದಾಯವನ್ನು ಹೆಚ್ಚಿಸಿಕೊಳ್ಳಲು ಸಾಗಾಣಿಕೆ ದರಗಳನ್ನು 'ತರ್ಕಬದ್ಧ'ಗೊಳಿಸುವ, ಅಂದರೆ ವಾಸ್ತವವಾಗಿ ಹೆಚ್ಚಿಸುವ ನಿರ್ಧಾರವನ್ನು ರೈಲ್ವೆ ಇಲಾಖೆ ಕೈಗೊಂಡಿದೆ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ವರದಿಯಾಗಿದೆ. ಇದು ಹಣದುಬ್ಬರದ ಬೆಂಕಿಗೆ ಮತ್ತಷ್ಟು ಸೀಮೆ ಎಣ್ಣೆ ಸುರಿಯುತ್ತದೆ ಎಂಬುದು ಪರಿಣಿತರ ಅಭಿಪ್ರಾಯ.

ರೈತರ ಆತ್ಮಹತ್ಯೆಗಳು: ಒಂದೇ ವರ್ಷದಲ್ಲಿ 40% ಏರಿಕೆ!

'ಅಚ್ಛೇ ದಿನ್' ಮಂದಿ ಎಂದೂ ಹೇಳದಿರುವ ಒಂದು ಸಂ–ಖ್ಯೆಯೆಂದರೆ ರೈತರ ಆತ್ಮಹತ್ಯೆಗಳದ್ದು. ಸಹಜವಾಗಿ ಕೆಂಪು ಕೋಟೆ ಭಾಷಣದಲ್ಲಿ ಇದರ ಪ್ರಸ್ತಾಪವಿರಲಿಲ್ಲ.

ಇತ್ತೀಚೆಗೆ ಪ್ರಕಟವಾದ ಅಂಕಿ–ಅಂಶಗಳ ಪ್ರಕಾರ 2014ರಲ್ಲಿ 5650 ಇದ್ದ ರೈತರ ಆತ್ಮಹತ್ಯೆಗಳ ಸಂಖ್ಯೆ 2015ರಲ್ಲಿ 8000 ದಾಟಿದೆ. ಇದರಲ್ಲಿ ಮೊದಲನೇ ಸ್ಥಾನದಲ್ಲಿರುವುದು ಮಹಾರಾಷ್ಟ್ರ. ಇಲ್ಲಿ 3030 ರೈತರು ಜೀವ ಕಳಕೊಂಡಿದ್ದಾರೆ. ಎರಡನೇ ಸ್ಥಾನದಲ್ಲಿ ತೆಲಂಗಾಣ(1350) ಮತ್ತು ಮೂರನೇ ಸ್ಥಾನ ಕರ್ನಾಟಕದ್ದು(1300 ಕ್ಕೂ ಹೆಚ್ಚು).

ಸಂಘ ಪರಿವಾರ ಮತ್ತೆ ಹಿಂದೂಗಳು ತಮ್ಮ ಮಾತೃಭೂಮಿಯಲ್ಲೇ ಅಲ್ಪಸಂಖ್ಯಾತರಾಗುತ್ತಾರೆಂಬ ಹಳಸಲು ರಾಗವನ್ನು ಆಲಾಪಿಸುತ್ತಿದೆ. ವಿಧಾನಸಭಾ ಚುನಾವಣಾ ಪ್ರಚಾರಕ್ಕೆ ಸಿದ್ಧವಾಗುತ್ತಿರುವ ಉತ್ತರಪ್ರದೇಶದ ಆಗ್ರಾದಲ್ಲಿ 'ಕುಟುಂಬ ಪ್ರಬೋಧನ' ಎಂಬ ಕಾರ್ಯಕ್ರಮದಲ್ಲಿ ಹಿಂದೂ ಜನಸಂಖ್ಯೆ ಇಳಿಯುತ್ತಿದೆ ಎಂದು ಆತಂಕ ವ್ಯಕ್ತಪಡಿಸುತ್ತ ನೆರೆದಿದ್ದ 2000 ಯುವ ದಂಪತಿಗಳಿಗೆ ಹೆಚ್ಚು ಮಕ್ಕಳನ್ನು ಹಡೆಯಿರಿ ಎಂದು ಪ್ರಬೋಧಿಸಿದರಂತೆ. 2011ರ ಜನಗಣತಿಯ ಪ್ರಕಾರ ದೇಶದಲ್ಲಿ ಎಲ್ಲ ಧರ್ಮಗಳ ಜನರ ಜನಸಂಖ್ಯೆ ಬೆಳವಣಿಗೆ ದರ ಇಳಿದಿದೆ, ಹಿಂದೂಗಳಲ್ಲಿ 3% ದಷ್ಟು ಇಳಿದರೆ, ಮುಸ್ಲಿಮರಲ್ಲಿ 5%ದಷ್ಟು ಇಳಿದಿದೆ. ಇದರಿಂದ ಅವರಿಗೆ ಖುಶಿಯಾಗಬೇಕಿತ್ತು. ಆದರೆ ಇದು ಗಣಿತದ ಪ್ರಶ್ನೆಯಲ್ಲ, ಚುನಾವಣೆಯ ಪ್ರಶ್ನೆ ಎನ್ನುತ್ತಾರೆ ಒಬ್ಬರು. ಇರುವ ಮಕ್ಕಳಿಗೇ ಉದ್ಯೋಗ, ಪೌಷ್ಟಿಕ ಆಹಾರ ಕೊಡಲಾರದವರು ಈ ಹೆಚ್ಚಿನ ಮಕ್ಕಳಿಗೆ ಎಲ್ಲಿಂದ ಕೊಡಿಸುತ್ತಾರೆ, ಅಂಬಾನಿ–ಅದಾಣಿ ಕೊಡುತ್ತಾರೆಯೇ ಎಂದು ಇನ್ನೊಬ್ಬರು ಕೇಳಿದ್ದಾರೆ.





ಗಂಡುಮಕ್ಕಳೋ ಹೆಣ್ಣು ಮಕ್ಕಳೋ?

ವ್ಯಂಗ್ಯಚಿತ್ರಗಳು: ಕೀರ್ತಿಶ್, ಬಾಮುಲಾಹಿಜಾ.ಕಾಂ ಮತ್ತು ಶುಭನೀಲ್, ಡೆಕ್ಕನ್ ಕ್ರಾನಿಕಲ್

ಕನಿಷ್ಠ ವೇತನದ ಪುರಾಣ: ಉದ್ಯಮಪತಿಗಳ, ಸರಕಾರದ ಅರ್ಥವಿಲ್ಲದ ಬೊಬ್ಬೆ



ಕೆ.ಎಂ.ನಾಗರಾಜ್

* ಅರ್ಥವ್ಯವಸ್ಥೆಯ ಮೇಲೆ ಕನಿಷ್ಠ ವೇತನದ ಹೆಚ್ಚಳದ ಪರಿಣಾಮ ನಕಾರಾತ್ಮಕವಾಗಿಲ್ಲ, ಬದಲಾಗಿ ಸಕಾರಾತ್ಮಕವಾಗಿದೆ ಎಂಬುದನ್ನು ಅಂತಾರಾಷ್ಟ್ರೀಯ ಅನುಭವಗಳು ಮತ್ತು ಪ್ರಾಯೋಗಿಕ ಅಧ್ಯಯನಗಳು ಸಾಬೀತುಪಡಿಸಿವೆ.
* ಆದ್ದರಿಂದ, ಬೊಬ್ಬೆ ಹೊಡೆಯುತ್ತಿರುವ ಉದ್ಯಮಪತಿಗಳಿಗೆ ಬಾಯಿ ಮುಚ್ಚಿಕೊಳ್ಳಿ ಎಂದು ಸರಕಾರ ಹೇಳಬೇಕಾಗಿದೆ.
* ಆದರೆ ಅದು ಫಿಕಿ, ಅಸೊಚಾಮ್, ಸಿಐಐಗಳ 40 ಆಕ್ಷೇಪಣೆಗಳನ್ನೇ ಮನ್ನಿಸಿದೆ
* ಕಳೆದ ಸೆಪ್ಟಂಬರ್‌ನಲ್ಲಿ ಮೊಳಗಿದ 15 ಕೋಟಿ ಕಾರ್ಮಿಕರ ದನಿಯನ್ನು ಈಗ ಮತ್ತೆ ಸೆಪ್ಟಂಬರ್ 2ರಂದು ಮೊಳಗಲಿರುವ ಒಕ್ಕೊರಲಿನ ಬೇಡಿಕೆಯನ್ನು ಕಡೆಗಣಿಸಿದೆ.

ಈ ವರ್ಷದ ಆದಿ ಭಾಗದಲ್ಲಿ, ಕೆಲವು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆಗಳು ಘೋಷಣೆಯಾಗುವ ಮೊದಲು, ಕಸುಬಿಗೆ ಹೊಸಬರಾಗಿದ್ದ ಕೇಂದ್ರ ಕಾರ್ಮಿಕ ಮಂತ್ರಿಯೊಬ್ಬರು, ಕೇಂದ್ರ ಸರ್ಕಾರವು ಗುತ್ತಿಗೆ ಕಾರ್ಮಿಕರ ಕನಿಷ್ಠ ವೇತನವನ್ನು ತಿಂಗಳಿಗೆ 10,000 ರೂಗಳಿಗೆ ಏರಿಸುವ ಚಿಂತನೆ ನಡೆಸಿದೆ ಎಂದು ಒಗೆದ ಒಂದು ಮಾತು ಭಾರಿ ಗುಲ್ಲೆಬ್ಬಿಸಿತ್ತು. ಈ ಮಾತಿನ ಹಿಂದೆ ಚುನಾವಣಾ ಲಾಭ ಪಡೆಯುವ ಲೆಕ್ಕಾಚಾರವಿತ್ತು. ಚುನಾವಣೆಗಳು ಘೋಷಣೆಯಾದದ್ದೇ ತಡ, ಕಾರ್ಮಿಕ ಚಳುವಳಿ ಪ್ರಬಲವಾಗಿರುವ ಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ, ಗುತ್ತಿಗೆ ಕಾರ್ಮಿಕರ ಕನಿಷ್ಠ ವೇತನದ ಏರಿಕೆಯ ಭರವಸೆಯ ಬಗ್ಗೆ, ಮೋದಿಯವರ ಹಿಂಬಾಲಕರು ಇಂಟರ್‌ನೆಟ್‌ನಲ್ಲಿ ತಮ್ಮ ಮಹಾನಾಯಕನ ಬಗ್ಗೆ ಪ್ರಶಂಶೆಯ ಮಳೆಗರೆದರು.

ಚುನಾವಣೆಗಳು ಮುಗಿದ ನಂತರ, ಕಾರ್ಪೊರೇಟ್ ಪರ ಇರುವ ಸರ್ಕಾರವು ದೊಡ್ಡ ಉದ್ದಿಮೆ ಧಣಿಗಳ ಒತ್ತಡಕ್ಕೆ ಮಣಿದು ಪ್ರಸ್ತಾಪವನ್ನು ಕೈಬಿಟ್ಟಿದೆ. "ಕನಿಷ್ಠ ವೇತನ ಏರಿಕೆಯಾದಲ್ಲಿ ಉದ್ದಿಮೆಗಳು ನಷ್ಟಕ್ಕೊಳಗಾಗುತ್ತವೆ. ಅದರಲ್ಲೂ, ಸಣ್ಣ ಉದ್ಯಮಗಳು ಭಾರಿ ನಷ್ಟ ಅನುಭವಿಸುತ್ತವೆ ಎಂಬ ಕಾರಣದ ಮೇಲೆ ಉದ್ದಿಮೆ ವಲಯವು ಈ ಪ್ರಸ್ತಾಪವನ್ನು ಬಲವಾಗಿ ವಿರೋಧಿಸುತ್ತಿವೆ". ಆದ್ದರಿಂದ, ಕನಿಷ್ಠ ವೇತನದ ಏರಿಕೆಯ ಈ ಪ್ರಸ್ತಾಪವನ್ನು ಮುಂದಕ್ಕೊಯ್ಯುವ ಮುನ್ನ, ಕಾರ್ಮಿಕ ಮಂತ್ರಾಲಯವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಮಾಲೋಚನೆ ನಡೆಸಲು ಬಯಸುತ್ತದೆ ಎಂಬುದಾಗಿ ಉನ್ನತ ಅಧಿಕಾರಿಯೊಬ್ಬರು ತಿಳಿಸಿರುವುದಾಗಿ ಜುಲೈ 21ರ 'ದಿ ಹಿಂದೂ' ಪತ್ರಿಕೆ ವರದಿಮಾಡಿದೆ.

ಈ ಪ್ರಸ್ತಾಪವನ್ನು ವಿರೋಧಿಸಿ, FICCI, Assocham, CII ಮತ್ತು ಕೆಲವು ಕಂಪೆನಿಗಳಿಂದ ಸೇರಿದಂತೆ 40 ಆಕ್ಷೇಪಣೆಗಳನ್ನು ಕಾರ್ಮಿಕ ಮಂತ್ರಾಲಯವು ಸ್ವೀಕರಿಸಿರುವುದಾಗಿ ವರದಿಗಳಿವೆ. ಸರ್ಕಾರವು ಈ 40 ಆಕ್ಷೇಪಣೆಗಳನ್ನು ಮನ್ನಿಸಿದೆ. ಹಾಗಾದರೆ, 15,000 ರೂಪಾಯಿಗಳ ಕನಿಷ್ಠ ವೇತನ ಕೊಡಬೇಕೆಂಬ ಹಕ್ಕೊತ್ತಾಯ ಮಂಡಿಸಿದ್ದ ಸೆಪ್ಟೆಂಬರ್ 7, 2015 ರ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದ್ದ ಹದಿನೈದು ಕೋಟಿ ದುಡಿಯುವ ಜನತೆಯ ದನಿಗೆ ಸಿಕ್ಕಿದ ಮನ್ನಣೆ ಏನು? ಅಷ್ಟೇ ಅಲ್ಲ, ನಂತರದ ಸಾರ್ವತ್ರಿಕ ಮುಷ್ಕರಗಳಲ್ಲೂ ಕನಿಷ್ಠ ವೇತನದ(ಈಗ, 18,000 ರೂಗಳ ಹಕ್ಕೊತ್ತಾಯ) ವಿಷಯ ಸರ್ಕಾರದ ಮುಂದಿದೆ.

ಹುರುಳಿಲ್ಲದ ಕಳವಳ

ಕನಿಷ್ಠ ವೇತನದ ಈ ಪ್ರಸ್ತಾಪವನ್ನು ಸರ್ಕಾರ ಒಪ್ಪಿಕೊಂಡರೆ, ಸಿದ್ದ ಉಡುಪುಗಳನ್ನು ರಫ್ತುಮಾಡುವವರಿಗೆ 11,000 ಕೋಟಿ ರೂಪಾಯಿಗಳ ನಷ್ಟವಾಗುತ್ತದೆ ಎಂದು ಸಿದ್ದ ಉಡುಪು ತಯಾರಿಕರ ಸಂಘ ಹೇಳುತ್ತದೆ. ಮತ್ತು ಅವರ ಇಡೀ ವಹಿವಾಟು ಬಾಂಗ್ಲಾದೇಶ ಮತ್ತು ವಿಯಟ್ನಾಂ ದೇಶಗಳ ಪಾಲಾಗುತ್ತದೆ ಎಂಬ ಕಳವಳ ವ್ಯಕ್ತಪಡಿಸುತ್ತದೆ.

ಉದ್ದಿಮೆದಾರರ ಈ ಕಳವಳ ಹುರುಳಿಲ್ಲದ್ದು ಎಂಬುದನ್ನು ಬಹಳ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಕಳೆದ 15–20 ವರ್ಷಗಳಲ್ಲಿ ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆಗಳಾಗಿಲ್ಲ. ಈಗಿರುವ ಕಾನೂನುಗಳ ಪ್ರಕಾರ ಗುತ್ತಿಗೆ ಕಾರ್ಮಿಕರ ಸೇವೆಯನ್ನು ದುರ್ಬಳಕೆ ಮಾಡುವಂತಿಲ್ಲ. ಅಂದರೆ, ಖಾಯಂ ಕೆಲಸಗಳಿಗೆ ಗುತ್ತಿಗೆಯವರನ್ನು ಬಳಕೆಮಾಡದಂತೆ ಕಾರ್ಮಿಕ ಕಾನೂನುಗಳಲ್ಲಿ ನಿರ್ಬಂಧವಿದೆ. ಆದರೂ, ಗುತ್ತಿಗೆ ಕಾರ್ಮಿಕರ ಬಳಕೆ ಅಗಾಧವಾಗಿದೆ. ಈ ವಿಷಯದಲ್ಲಿ, ಎನ್‌ಡಿಎ ಮತ್ತು ಯುಪಿಎ ಸರ್ಕಾರಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲ. ಎರಡೂ ಸರ್ಕಾರಗಳು, ಕಣ್ಣು, ಕಿವಿ ಮತ್ತು ಬಾಯಿ ಇಲ್ಲದವರಂತೆ ವರ್ತಿಸಿವೆ. ಗುತ್ತಿಗೆ ಕಾರ್ಮಿಕರ ಸೇವೆಯ ದುರ್ಬಳಕೆಯ ಅಗಾಧತೆಯನ್ನು ಅರ್ಥಮಾಡಿಕೊಳ್ಳಲು ಒಂದೆರಡು ಉದಾಹರಣೆಗಳನ್ನು ಗಮನಿಸಿದರೆ ಸಾಕು. ತೆಲಂಗಾಣದಲ್ಲಿರುವ ಬಿಹೆಚ್‌ಇಎಲ್‌ನಲ್ಲಿ ಒಬ್ಬ ಗುತ್ತಿಗೆ ಕೆಲಸಗಾರನಿಗೆ ಸಿಗುವ ವೇತನ 13,520 ರೂಪಾಯಿಗಳು (520×26), ಅದೇ ಒಬ್ಬ ಖಾಯಂ ಕೆಲಸಗಾರನಿಗೆ 48,000 ರೂಗಳ ವೇತನ ಸಿಗುತ್ತದೆ. ಇದು ಸಾರ್ವಜನಿಕ ವಲಯದ ಕಂಪೆನಿಯ ಕತೆಯಾದರೆ, ಖಾಸಗಿ ವಲಯದ ಉದಾಹರಣೆಯಾಗಿ ಮಾರುತಿ ಸುಜುಕಿ ಕಂಪೆನಿಯನ್ನು ತೆಗೆದುಕೊಳ್ಳಬಹುದು. ಏಕೆಂದರೆ, ಜಪಾನಿನಲ್ಲಿ ಕಾರ್ಮಿಕರ ಮತ್ತು ಮಾಲೀಕರ ನಡುವಿನ ಬಾಂಧವ್ಯವು ಒಂದು ಮಾದರಿ ಎಂಬ ಕಲ್ಪನೆ ಜನಸಾಮಾನ್ಯರಲ್ಲಿದೆ. ಆದರೆ, ಸುಲಿಗೆಯ ಅಥವಾ ಲಾಭದ ಪ್ರಶ್ನೆ ಬಂದಾಗ, ಜಪಾನೀಯರಿಗೂ ಬೇರೆಯವರಿಗೂ ವ್ಯತ್ಯಾಸವಿಲ್ಲ ಎಂಬುದನ್ನು ಭಾರತದಲ್ಲಿರುವ ಸುಜುಕಿ ನಿರೂಪಿಸುತ್ತದೆ. ಸುಜುಕಿ ಕಂಪೆನಿಯ ಒಟ್ಟು 3400 ಕೆಲಸಗಾರರಲ್ಲಿ, ಖಾಯಂ ಕೆಲಸಗಾರರ ಸಂಖ್ಯೆ 1000 ಇದ್ದರೆ, ಗುತ್ತಿಗೆಯವರ ಸಂಖ್ಯೆ 2400(ಟ್ರೇನೀಗಳು 800, ಅಪ್ರೆಂಟಿಸ್‌ಗಳು 400 ಮತ್ತು ಗುತ್ತಿಗೆ ಹೆಸರಿನ ಕೆಲಸಗಾರರ ಸಂಖ್ಯೆ 1200). ಅಂದರೆ, ಗುತ್ತಿಗೆ ಕೆಲಸಗಾರರ ಸಂಖ್ಯೆಯೇ ಅತಿ ಹೆಚ್ಚು ಮತ್ತು ಅವರ ಸಂಬಳವೂ ಅತಿ ಕಡಿಮೆ. (ಖಾಯಂ ಕೆಲಸಗಾರರ ಸಂಬಳ ರೂ.13,000–17,000; ಟ್ರೇನೀಗಳಿಗೆ ರೂ.8,000; ಅಪ್ರೆಂಟಿಸ್‌ಗಳಿಗೆ ರೂ.4,000; ಮತ್ತು ಗುತ್ತಿಗೆ ಕಾರ್ಮಿಕರಿಗೆ ರೂ.6,500). ಇಡೀ ದೇಶದಲ್ಲಿ ಇಂತಹ ಶೋಷಣೆಯನ್ನು ಲೆಕ್ಕಹಾಕಿದರೆ, ಅದರ ಮೊತ್ತವು ಹಲವು ಲಕ್ಷ ಕೋಟಿ ರೂಪಾಯಿಗಳನ್ನು ಮೀರುತ್ತದೆ.

ಲಾಭ ಇಳಿಕೆಯ ಭಯ

15-20 ವರ್ಷಗಳಿಂದಲೂ ಉದ್ದಿಮೆಗಳು ಇಂತಹ ಕಾರ್ಮಿಕ ಕಾನೂನು ವಿರೋಧಿ ಕ್ರಮಗಳನ್ನು ಅನುಸರಿಸುವ ಮೂಲಕ ಲಕ್ಷಾಂತರ ಕೋಟಿ ರೂಪಾಯಿಗಳ ಲಾಭ ಸಂಪಾದಿಸಿವೆ. ಆದರೂ, ತಿಂಗಳಿಗೆ 10,000 ರೂಗಳ ಕನಿಷ್ಠ ವೇತನ ಕೊಡಲು ರಂಪಾಟ ಮಾಡುತ್ತಿವೆ. 10,000 ರೂಗಳ ಕನಿಷ್ಠ ವೇತನ ನಿಗದಿ ಮಾಡಿದರೆ, ಕಂಪೆನಿಗೆ ತಗಲುವ ಒಟ್ಟು ವೆಚ್ಚ 15,990ರೂ ಗಳಾಗುತ್ತದೆ ಎಂಬುದು ಅವರ ವಾದ. ಎಂತಹ ಲೆಕ್ಕಾಚಾರ! ಭಾರಿ ದೊಡ್ಡ ಸಂಖ್ಯೆಯ ಉದ್ದಿಮೆಗಳು ಗುತ್ತಿಗೆ ಕೆಲಸಗಾರರಿಗೆ ಇಎಸ್‌ಐ, ಪಿಎಫ್ ಮತ್ತು ಬೋನಸ್ ಕೊಡುವುದಿಲ್ಲ. ಒಂದು ವೇಳೆ ಕೊಟ್ಟರೂ, ಅದರ ಮೊತ್ತ ಹೀಗಿರುತ್ತದೆ: ಇಎಸ್‌ಐ– 475, ಇಪಿಎಫ್–1,360 ಮತ್ತು ಬೋನಸ್–833. ಈ ಮೊತ್ತದ ಜೊತೆಯಲ್ಲಿ, ವಾರದ ರಜೆ, ಹಬ್ಬ ಮತ್ತು ರಾಷ್ಟ್ರೀಯ ದಿನಾಚರಣೆಗಳ ರಜೆಯ ಸಂಬಳ– 737ರೂ. ಆಗುತ್ತದೆ. ಇದೆಲ್ಲವನ್ನೂ ಸೇರಿಸಿದರೆ ಒಟ್ಟು 13,405 ರೂಗಳಾಗುತ್ತದೆ. ಷೂ ಮತ್ತು ಕಾಲ್ಚೀಲ ಹಾಗೂ ಕ್ಯಾಂಟೀನ್ ವೆಚ್ಚ ಸೇರಿಸಿದರೆ ಒಟ್ಟು ವೆಚ್ಚ 14,000 ರೂಗಳನ್ನು ಮೀರುವುದಿಲ್ಲ. ಆದರೆ, FICCI ಹಾಕಿರುವ ಲೆಕ್ಕಾಚಾರದ ಪ್ರಕಾರ 15,990ರೂ ಗಳಾಗುತ್ತದೆ. ಅದು ಹೇಗೆ?

ಇನ್ನೊಂದು ಬಹಳ ಮುಖ್ಯವಾದ ಸಂಗತಿ ಇದೆ. FICCI, Assocham, CIIನಂತಹ ಸಂಸ್ಥೆಗಳ ಒತ್ತಾಯದಿಂದಾಗಿ, 1991 ರಿಂದ 2016 ರ ವರೆಗೂ ನಮ್ಮ ಅರ್ಥವ್ಯವಸ್ಥೆಯಲ್ಲಿ ರಫ್ತಿಗೆ ಇನ್ನಿಲ್ಲದ ಪ್ರಾಮುಖ್ಯತೆ ನೀಡಲಾಗಿದೆ. ರಫ್ತುಗಳ ಮೂಲಕ ಹೇರಳ ಲಾಭ ಸಂಪಾದಿಸಬಹುದೆಂದು ಅವು ಎಣಿಸಿದ್ದವು. ಸಣ್ಣ ಪುಟ್ಟ ಉದ್ದಿಮೆಗಳೂ ಅದೇ ಕನಸಿನಲ್ಲಿದ್ದವು. ಅವರ ಎಣಿಕೆ ನಿರೀಕ್ಷಿತ ಫಲ ನೀಡುತ್ತಿಲ್ಲ.

ರಫ್ತಿನ ಹೆಸರಿನಲ್ಲಿ ದೇಶದ ಆಂತರಿಕ ಮಾರುಕಟ್ಟೆಯನ್ನು ಕಡೆಗಣಿಸಬಾರದೆಂದು ಎಡ ಪಕ್ಷಗಳು ಬಹಳ ಹಿಂದೆಯೇ ಹೇಳಿದ್ದವು. ಆಂತರಿಕ ಮಾರುಕಟ್ಟೆಯನ್ನು ಬಲಗೊಳಿಸುವ ಅನೇಕ ಸಲಹೆಗಳನ್ನು ಸಿಐಟಿಯು ನೀಡಿತ್ತು. ಕನಿಷ್ಠ ವೇತನವನ್ನು ಹೆಚ್ಚಿಸುವುದು ಅಂತಹ ಒಂದು ಸಲಹೆಯಾಗಿತ್ತು. 2011ರಲ್ಲಿ, ಮೂರುವರೆ ಕೋಟಿ ಗುತ್ತಿಗೆ ಕೆಲಸಗಾರರಿದ್ದಾರೆ ಎಂದು ವಿ.ವಿ.ಗಿರಿ ರಾಷ್ಟ್ರೀಯ ಲೇಬರ್ ಸಂಸ್ಥೆ ಹೇಳಿತ್ತು. ಈಗ, ಗುತ್ತಿಗೆ ಕೆಲಸಗಾರರ ಸಂಖ್ಯೆ ಆರು ಕೋಟಿ ದಾಟಿದೆ. ಅವರಿಗೆ 10,000 ರೂಗಳ ಕನಿಷ್ಠ ವೇತನ ಕೊಟ್ಟರೆ, ಅವರ ಕೊಳ್ಳುವ ಶಕ್ತಿ ಹೆಚ್ಚುತ್ತದೆ ಮತ್ತು ನಮ್ಮ ದೇಶದ ಆಂತರಿಕ ಮಾರುಕಟ್ಟೆಯ ಗಾತ್ರವೂ ದೊಡ್ಡದಾಗುತ್ತದೆ.

ಅಂತರಾಷ್ಟ್ರೀಯ ಅನುಭವಗಳು

ಆರ್ಥಿಕ ಸುಧಾರಣೆಗಳು ಜಾರಿಗೆ ಬಂದ ಸಮಯದಿಂದಲೂ ಅಮೇರಿಕದ ಅನುಕರಣೆಯೇ ನಮ್ಮ ಆಳರಸರಿಗೆ ಒಂದು ಆದರ್ಶವಾಗಿದೆ. ಈಗ, ಅಲ್ಲಿ ಅಧ್ಯಕ್ಷೀಯ ಚುನಾವಣಾ ಪ್ರಕ್ರಿಯೆ ಜಾರಿಯಲ್ಲಿದೆ. ಡೆಮೊಕ್ರಟಿಕ್ ಪಕ್ಷದ ಅಭ್ಯರ್ಥಿ ಹಿಲರಿ ಕ್ಲಿಂಟನ್, ಕನಿಷ್ಠ ಕೂಲಿಯ ದರವನ್ನು ಗಂಟೆಗೆ 7.25ಡಾಲರಿನಿಂದ 10ಡಾಲರಿಗೆ ಏರಿಸುವ ಭರವಸೆ ಕೊಟ್ಟಿದ್ದಾರೆ. ಪಕ್ಷದೊಳಗೆ ಅವರಿಗೆ ಪ್ರತಿಸ್ಪರ್ಧಿಯಾಗಿದ್ದ ಬರ್ನಿ ಸ್ಯಾಂಡರ್ಸ್ ಅದನ್ನು 15 ಡಾಲರಿಗೆ ಏರಿಸುವ ಭರವಸೆ ಕೊಟ್ಟಿದ್ದರು. ಹಿಲರಿ ಕ್ಲಿಂಟನ್ ಅವರ ಭರವಸೆಯ ಕನಿಷ್ಠ ಕೂಲಿಯ ತಿಂಗಳ ಮೊತ್ತ 10×8×26=2,080 ಡಾಲರ್ ಆಗುತ್ತದೆ. ಆ ಮೊತ್ತವನ್ನು ರೂಪಾಯಿಗಳಿಗೆ ಪರಿವರ್ತಿಸಿದರೆ 1,39,360 ರೂಗಳಾಗುತ್ತದೆ. ಕೊಳ್ಳುವ ಶಕ್ತಿಯ ಸಮಾನತೆಯ ಸೂತ್ರದಂತೆ ಲೆಕ್ಕ ಹಾಕಿದರೂ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಾಗುವುದಿಲ್ಲ.

ಈ ವಿವರಗಳನ್ನು ಒಂದು ಕ್ಷಣ ಪಕ್ಕಕ್ಕಿಟ್ಟು ನೋಡಿದರೂ ಅಮೇರಿಕದಲ್ಲಿ ಜರುಗುತ್ತಿರುವ ವಿದ್ಯಮಾನಗಳು ಕುತೂಹಲ ಕೆರಳಿಸುತ್ತವೆ. ಇತ್ತೀಚೆಗೆ, ಅಲ್ಲಿನ ಏಳು ಮಂದಿ ನೊಬೆಲ್ ಬಹುಮಾನ ಪಡೆದವರೂ ಸೇರಿದಂತೆ ಆರು ನೂರು ಮಂದಿ ಅರ್ಥಶಾಸ್ತ್ರಜ್ಞರು, ಅಮೇರಿಕದಲ್ಲಿ ಕನಿಷ್ಠ ವೇತನವನ್ನು ಹೆಚ್ಚಿಸುವಂತೆ ಅಧ್ಯಕ್ಷ ಒಬಾಮ ಅವರಿಗೆ ಒಂದು ಪತ್ರ ಬರೆದಿದ್ದಾರೆ. ಕನಿಷ್ಠ ವೇತನದ ಹೆಚ್ಚಳದಿಂದಾಗಿ ಕೆಲಸಗಾರರ ಕೊಳ್ಳುವ ಸಾಮರ್ಥ್ಯ ಹೆಚ್ಚುವುದರಿಂದ ಅರ್ಥವ್ಯವಸ್ಥೆ ಬಲಗೊಳ್ಳುತ್ತದೆ ಮತ್ತು ಉದ್ಯೋಗಗಳೂ ಹೆಚ್ಚುತ್ತವೆ ಎಂಬುದನ್ನು ಅವರು ಒತ್ತಿ ಹೇಳಿದ್ದಾರೆ.

ಪ್ರಾಯೋಗಿಕ ಅಧ್ಯಯನಗಳು

ಅಮೇರಿಕಾದ ಪ್ರಿನ್ಸ್‌ಟನ್ ಯೂನಿವರ್ಸಿಟಿಯು ಕನಿಷ್ಠ ವೇತನದ ಹೆಚ್ಚಳದಿಂದ ಆಗುವ ಪರಿಣಾಮಗಳ ಬಗ್ಗೆ ಒಂದು ಅಧ್ಯಯನ ನಡೆಸಿದೆ. 410 ಫಾಸ್ಟ್ ಫುಡ್ ಉಪಹಾರ ಮಳಿಗೆಗಳಲ್ಲಿ ಕನಿಷ್ಠ ವೇತನದ ಹೆಚ್ಚಳವು ಲಾಭದ ಮೇಲಾಗಲೀ ಮತ್ತು ಉದ್ಯೋಗಗಳ ಬೆಳವಣಿಗೆಯ ಮೇಲಾಗಲೀ ಅಡ್ಡ ಪರಿಣಾಮ ಬೀರಿಲ್ಲ ಎಂದಿದೆ ಆ ಅಧ್ಯಯನ. ಅಭಿವೃದ್ಧಿಶೀಲ ದೇಶಗಳಲ್ಲಿ ಐಎಲ್‌ಓ ನಡೆಸಿದ ಒಂದು ಅಧ್ಯಯನವೂ ಅದನ್ನೇ ಹೇಳುತ್ತದೆ: ಕನಿಷ್ಠ ವೇತನದ ಹೆಚ್ಚಳವು ಅರ್ಥವ್ಯವಸ್ಥೆಯ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮ ಬೀರಿಲ್ಲ. ಅಂತಾರಾಷ್ಟ್ರೀಯ ಅನುಭವಗಳು ಮತ್ತು ಪ್ರಾಯೋಗಿಕ ಅಧ್ಯಯನಗಳು, ಕನಿಷ್ಠ ವೇತನದ ಹೆಚ್ಚಳದಿಂದ ಅರ್ಥವ್ಯವಸ್ಥೆಗೆ ಧಕ್ಕೆಯಾಗುವುದಿಲ್ಲ ಎಂಬುದನ್ನು ಸಾಬೀತುಪಡಿಸಿವೆ. ಆದ್ದರಿಂದ, ಬೊಬ್ಬೆ ಹೊಡೆಯುತ್ತಿರುವ ಉದ್ಯಮಪತಿಗಳಿಗೆ ಬಾಯಿ ಮುಚ್ಚಿಕೊಳ್ಳಿ ಎಂದು ಹೇಳಬೇಕಿದೆ. ●

ತ್ರಿಪುರಾದಲ್ಲಿ ವಿಶ್ವ ದರ್ಜೆಯ ಜಿಮ್ನೇಸಿಯಂ...

ಪುಟ 2 ರಿಂದ

ಅಸಿಸ್ಟೆಂಟ್ ಡೈರೆಕ್ಟರ್ ಆಗಿರುವ ನಂದಿಯವರಿಗೆ ಡೆಪ್ಯುಟಿ ಡೈರೆಕ್ಟರ್ ಆಗಿ ಬಡ್ತಿಯನ್ನು ನೀಡಿರುವುದಾಗಿ ಮುಖ್ಯಮಂತ್ರಿಗಳು ಪ್ರಕಟಿಸಿದರು.

ಕ್ರೀಡಾ ಮೂಲರಚನೆಗಳನ್ನು ನಿರ್ಮಿಸಲು ರಾಜ್ಯ ಸರಕಾರ ಕೇಂದ್ರದಿಂದ ನಿಧಿಗೆ ಮನವಿ ಮಾಡಿದೆ ಎಂದ ಮುಖ್ಯಮಂತ್ರಿಗಳು ಕೇಂದ್ರ ನಿಧಿ ನೀಡದಿದ್ದರೂ ಮಾಡಲು ಒಂದು ವಿಶ್ವದರ್ಜೆಯ ಜಿಮನೇಶಿಯಂ (ವ್ಯಾಯಾಮಶಾಲೆ)ನ್ನು ಒದಗಿಸುತ್ತೇವೆ ಎಂದು ಹೇಳಿದರು.

ಕಳೆದ 52 ವರ್ಷಗಳಲ್ಲಿ ಒಲಿಂಪಿಕ್ಸ್‌ನಲ್ಲಿ ಅರ್ಹತೆ ಪಡೆದ ಮೊದಲ ಭಾರತೀಯ ಮಹಿಳಾ ವ್ಯಾಯಾಮ ಪಟು ಎಂದು ದಾಖಲೆ ನಿರ್ಮಿಸಿರುವ ದೀಪಾ ಮಾತನಾಡಿ ಈ ಬಾರಿ ಒಲಿಂಪಿಕ್ಸ್ ಪದಕ ತರಲಾಗದಕ್ಕೆ ಜನತೆಯ ಕ್ಷಮೆ ಕೋರಿದಳು, ಮುಂದಿನ ಬಾರಿ ಖಂಡಿತಾ ತರುವುದಾಗಿ ಭರವಸೆ ನೀಡಿದಳು.

"ರಿಯೋಗೆ ಹೋಗುವ ಮೊದಲು ಎಸ್‌ಎಐ(ಭಾರತದ ಕ್ರೀಡಾ ಪ್ರಾಧಿಕಾರ)ನವರು ವಿದೇಶಿ ಕೋಚ್ ಅಡಿಯಲ್ಲಿ ವಿದೇಶದಲ್ಲಿ ತರಬೇತಿ ಬೇಕೇ ಎಂದು ಕೇಳಿದ್ದರು. ಅದಕ್ಕೆ, ಭಾರತೀಯ ಕೋಚ್‌ಗಳಿಗೆ ತಮ್ಮ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಬಹಳಷ್ಟು ಶಕ್ತಿಯಿದೆ, ನಾನು ಬಿಶ್ವೇಶ್ವರ್ ನಂದಿಯವರ ತರಬೇತಿಯಿಂದ ಬಹಳ ಸಂತುಷ್ಟಳಾಗಿದ್ದೇನೆ" ಎಂದ ಆಕೆ ರಿಯೊದಲ್ಲಿ ಪದಕ ಗಳಿಸಿರುವ ಸಾಕ್ಷಿ ಮತ್ತು ಸಿಂಧು ಕೂಡ ಭಾರತೀಯ ಕೋಚ್‌ಗಳಿಂದಲೇ ತರಬೇತಿ ಪಡೆದಿದ್ದಾರೆ ಎಂದಳು.

ಒಲಿಂಪಿಕ್ಸ್‌ನಲ್ಲಿ ಮಹಿಳಾ ಕ್ರೀಡಾಪಟುಗಳ ಪ್ರದರ್ಶನದ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತ ನಾನು ಎಲ್ಲರಿಗೂ ಮನವಿ ಮಾಡುತ್ತೇನೆ–ಹೆಣ್ಣು ಮಗುವನ್ನು ಉಳಿಸಿ, ಹೆಣ್ಣು ಮಗುವಿಗೆ ಪ್ರೋತ್ಸಾಹ ನೀಡಿ ಎಂದು ದೀಪಾ ಮನವಿ ಮಾಡಿಕೊಂಡಳು.



ದೀಪಾ ಗೌರವಾರ್ಥ ಮರುದಿನ ರಾಜ್ಯದ ಎಲ್ಲ ಶಾಲಾ–ಕಾಲೇಜುಗಳಿಗೆ ರಜಾ ಘೋಷಿಸಿರುವುದಾಗಿ ಶಿಕ್ಷಣ ಮಂತ್ರಿ ತಪನ್ ಚೌಧುರಿ ಪ್ರಕಟಿಸಿದರು.

"ನೀವು ಉತ್ತಮ ಮೂಲರಚನೆಗಳನ್ನು ನಿರ್ಮಿಸಿ, ನಾನು ಇನ್ನಷ್ಟು ದೀಪಾಗಳನ್ನು ನಿರ್ಮಿಸುವ ಬಗ್ಗೆ ಮಾತಾಡಬಲ್ಲೆ. ತ್ರಿಪುರಾದಲ್ಲಿ ಜಿಮನಾಸ್ಟಿಕ್ಸ್‌ನ ಪ್ರತಿಭೆಗಳ ಕೊರತೆಯೇನಿಲ್ಲ. ಮುಂದಿನ ಒಲಿಂಪಿಕ್ಸ್‌ನ ಪದಕ ಪೀಠದಲ್ಲಿ ದೀಪಾಳನ್ನು ಕಾಣುವಂತೆ ನಾನು ಬಹಳ ಪರಿಶ್ರಮ ಪಡುತ್ತೇನೆ ಎಂಬ ಭರವಸೆ ನೀಡುತ್ತೇನೆ" ಎಂದು ಸಮಾರಂಭದಲ್ಲಿ ಮಾತನಾಡಿದ ಕೋಚ್ ಬಿಶ್ವೇಶ್ವರ ನಂದಿ ಹೇಳಿದರು.

ಜಿಮ್ನಾಸ್ಟಿಕ್ ಫೆಡರೇಶನ್‌ನ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಗುಂಪುಗಳ ನಡುವಿನ ಒಳಜಗಳದಿಂದಾಗಿ ದೀಪಾ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವುದು ಅನಿಶ್ಚಿತವಾಗಿತ್ತು, ರಾಜ್ಯ ಸರಕಾರ ತಕ್ಷಣವೇ ಕೇಂದ್ರ ಕ್ರೀಡಾ ಮಂತ್ರಿಗಳಿಗೆ ವಿಷಯ ತಿಳಿಸಿದ್ದರಿಂದ ಕೊನೆಗೂ ಆಕೆ ಭಾಗವಹಿಸುವುದು ಸಾಧ್ಯವಾಯಿತು ಎಂದು ರಾಜ್ಯ ಕ್ರೀಡಾಮಂತ್ರಿಗಳು ಈ ಸಂದರ್ಭದಲ್ಲಿ ತಿಳಿಸಿದರು. ◻

ರಾಜ್ಯಗಳ ಸುತ್ತ



ಭಾರತಿ ಗಾಂವ್ಕಾರ್

ತೆಲಂಗಾಣಾ ರೈತರ ಭೂಮಿರಕ್ಷಣಾ ಹೋರಾಟ

ರೈತರು ತಮ್ಮ ಭೂಮಿಯನ್ನು ಉಳುಮೆ ಮಾಡಬೇಕೆಂಬ ತಯಾರಿಯಲ್ಲಿದ್ದರೆ, ತೆಲಂಗಾಣ ಸರಕಾರ ಉಳುಮೆಗೆಂದು ಮೀಸಲಿಟ್ಟರೈತರ ಭೂಮಿಯನ್ನು 'ತೆಲಂಗಾಣಾ ಹರಿತ ಹರಂ' ಎಂಬ ಯೋಜನೆಯಡಿ ಆಕ್ರಮಿಸಿಕೊಳಲು ತಯಾರಿ ನಡೆಸುತ್ತಿದ್ದು ಪೋಲೀಸರು ಮತ್ತು ಅರಣ್ಯ ಇಲಾಖಾ ಅಧಿಕಾರಿಗಳು ರೈತರನ್ನು ಬೆದರಿಸಿ ಅವರ ಭೂಮಿಯಲ್ಲಿ ಸಸಿ ನೆಡಿಸುತ್ತಿದೆ. ಇದನ್ನು ತಡೆಯಲು ಬಂದ ರೈತರ ಮೇಲೆ ಧಾಳಿ ಮಾಡುತ್ತಿದೆ. ಪೋಡು ಭೂಮಿಯ ರೈತರು ಮುಂಬರುವ ಯಾವುದೇ ಪರಿನಾಮಗಳನ್ನು ಎದುರಿಸಲು ಸಿದ್ದರಾಗಿ ಎಲ್ಲ ಹಳ್ಳಿಗಳಲ್ಲೂ ಬಡ ಮತ್ತು ಆದಿವಾಸಿಗಳನ್ನೊಳಗೊಂಡ ಭೂರಕ್ಷಣಾ ಸಮಿತಿಯನ್ನು ರಚಿಸಿಕೊಂಡು ಹೋರಾಟ ನಡೆಸುತ್ತಿದ್ದಾರೆ.

ಸಿ.ಪಿ.ಐ(ಎಂ) ಮತ್ತು ಇತರ ಎಡ'ಕ್ಷಗಳು, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಅಖಿಲ ಭಾರತ ಕಿಸಾನ್ ಸಭಾ, ಮತ್ತಿತರ ಸಂಘಟನೆಗಳು ಆದಿವಾಸಿ ಮತ್ತು ಬಡಜನರ ಬೆಂಬಲಕ್ಕೆ ಟಿ.ಎ.ಜಿ.ಎಸ್(ಆದಿವಾಸೀ ಸಂಘಟನೆ)ನ ಜೊತೆಗೂಡಿ ಪಕ್ಷಾತೀತವಾಗಿ ನಿಂತ ಪರಿಣಾಮವಾಗಿ ರೈತರು ಪೋಲಿಸರ ಕ್ರಮವನ್ನು ಎದುರಿಸಿಯೂ ಮುಂದುವರಿಯಲು ಸಾಧ್ಯವಾಗಿದೆ.

ಜೂನ್20 ಹಾಗೂ 27 ರಂದು ಕ್ರಮವಾಗಿ ವಾರಂಗಲ್ ಮತ್ತು ಆದಿಲಾಬಾದ್ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾವಿರಾರು ಆದಿವಾಸೀ ಮತ್ತು ಬಡರೈತರ ಹೋರಾಟವನ್ನು ಗುರುತಿಸಿ, ಅವರ ಆತ್ಮವಿಶ್ವಾಸ ಹೆಚ್ಚುವಂತೆ ಮಾಡಲಾಯಿತು. ವಾರಂಗಲ್‌ಜಿಲ್ಲೆಯ ಥಡವಾಯ್ ಮಂಡಲನ ಲಿಂಗಾಲಹಳ್ಳಿಯ 8 ಆದಿವಾಸಿಗಳ ಮೇಲೆ ಮೊಕದ್ದಮ್ಮೆ ಧಾಖಲಿಸಲಾಗಿತ್ತು. 6 ಜನ ಮಹಿಳೆಯರನನು ಸುಭಾಕಪಳ್ಳಿ ಜೈಲಿನಲ್ಲಿಡಲಾಗಿತ್ತು. ಆದರೆ ಅವರ ಹೋರಾಟದ ಫಲವಾಗಿ ಅರಣ್ಯ ಇಲಾಖೆ ಸಸಿ ನೆಡಿಸಿದ್ದ ಜಾಗದಲ್ಲಿ ಇಂದು ರೈತರು ಬಿತ್ತನೆ ಮಾಡಿದ್ದಾರೆ.

ಬೇರೊಂದುಘಟನೆಯಲ್ಲಿ, ಆದಿಲಾಬಾದ್ ಜಿಲ್ಲೆಯ ಕೊಡೆಮ್ ಮಂಡಲ್‌ನ ಪಾಂಡವಪುರದ 27 ರೈತರನ್ನು ಅರಣ್ಯ ಭೂಮಿ ಹೊಂದಿದ್ದಕ್ಕಾಗಿ 2004ರಲ್ಲಿ ಬಂಧಿಸಿ ಮೊಕದ್ದಮೆ ದಾಖಲಿಸಲಾಗಿತ್ತು. ಅರಣ್ಯ ಹಕ್ಕು ಕಾಯ್ದೆ ಅಡಿ ಸೆಪ್ಟೆಂಬರ್ 2015ರ ವರೆಗೂ ಉಳುಮೆಯಲ್ಲಿರುವ ಭೂಮಿಯನ್ನು ಉಪಯೋಗಿಸಬಹುದೆಂದಿದ್ದಾಗ್ಯೂ, ರೈತರಿಗೆ ಆ ಯಾವ ಹಕ್ಕನ್ನೂ ನೀಡದೇ ಈ ಹಳ್ಳಿ 'ಹುಲಿ ವಲಯ'ದೊಳಗೆ ಬರುವದೆಂಬ ಕಾರಣ ನೀಡಿ ಬಂಧಿಸಲಾಗಿತ್ತು. ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ ಅನ್ನ ನೀರು ನೀಡದೇ ಬಂಧನದಲ್ಲಿ ಟ್ಟ ರೈತರಿಗೆ ಎಡಪಕ್ಷಗಳ ಹಾಗೂ ಮಾಧ್ಯಮಗಳ ಮಧ್ಯಪ್ರವೇಶದಿಂದ ಆಹಾರ ನೀಡಿವಂತೆ ಮಾಡಲಾಯಿತು. ಇನ್ನೂ ಹಲವಾರು ರೀತಿಯಲ್ಲಿ ಸರಕಾರ ಬಡ, ಆದಿವಾಸೀ, ಹಿಂದುಳಿದ ವರ್ಗಗಳ ರೈತರ ಭೂಮಿಯನ್ನು ಉತ್ಖನನ, ಅರಣ್ಯಭೂಮಿ, ವನ್ಯಜೀವಿ ವಲಯಎಂದೆಲ್ಲ ನೆಪಮಾಡಿ ಕಿತ್ತುಕೊಳ್ಳುವ ಪ್ರಯತ್ನ ಮಾಡುತ್ತಿದೆ

ಈ ರೀತಿಯ ಬಂಧನ ಹಾಗೂ ವಿರೋಧಗಳು ಕಮ್ಮಮ್ ಜಿಲ್ಲೆಯ 12 ಕೇಂದ್ರಗಳಲ್ಲಿ ಮುಂದುವರೆದಿದೆ. ಕಳೆದ 40 ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ 222 ಆದಿವಾಸಿಗಳ ಮೇಲೆ ಮೊಕದ್ದಮೆ ದಾಖಲಿಸಿ 48 ಜನರನ್ನು ಜೈಲಿನಲ್ಲಿಡಲಾಗಿದೆ. ಇವರೆಲ್ಲ ಅಸ್ವಾರಾವ್‌ಪೇಟ್‌ನ ವಾಗೊಡ್ಡುಗುಡೆಂ, ಮಲ್ಲೈಗುಡೆಂಗೆ ಸೇರಿದವರು, ಅವರ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಸಂಪೂರ್ಣ ಪೋಲೀಸ್ ಶಕ್ತಿಯನ್ನು ಬಳಸಿ ಸಸಿ ನೆಡಿಸಲು ಮುಂದಾದಾಗ ಆದಿವಾಸಿಯೇತರ ರೈತರು ಉಗ್ರ ಹೋರಾಟ ನಡೆಸಿ ತಮ್ಮ ಜಮಿನನ್ನು ವಾಪಸ್ ಪಡೆದುಕೊಂಡರು, ಇದರಲ್ಲಿ ಹಲವಾರು ಮಹಿಳೆಯರು ಗಾಯಗೊಂಡು ಆಸ್ಪತ್ರೆ ಸೇರಿದ್ದರು. ಜೈಲಿನಿಂದ ಬಿಡುಗಡೆ ಆದ ರೈತರ ಮೇಲೆ ಹೊಸ ಮೊಕದ್ದಮೆಗಳನ್ನು ದಾಖಲಿಸಿದ್ದಾರೆ. ಪೋಡು ರೈತರು ತಮ್ಮ ಭೂಮಿಯನ್ನು ಅನುಭೋಗಿಸಲು ದಾಖಲೆಗಳನ್ನು ನೀಡಬೇಕು ಎಂದು ಮತ್ತು ಬಡರೈತರನ್ನು ಬಂಧಿಸಿರುವುದರ ವಿರುದ್ಧ ಎಲ್ಲ ಹಳ್ಳಿಗಳಲ್ಲಿ ಪ್ರತಿಭಟನೆ ನಡೆಸಿ ಸಾರ್ವಜನಿಕ ಸಭೆ ನಡೆಸಲಾಯಿತು, ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಉತ್ನೂರಿನಲ್ಲಿ ಇನ್ನೊಂದು ಸಮಸ್ಯೆ ತಲೆದೂರಿದೆ– ಅರಣ್ಯದಲ್ಲಿ ಬೊಂಬು ಕೊಂಬೆಗಳನ್ನು ಸಂಗ್ರಹಿಸುವುದು. ಮೀಸಲು ಹುಲಿ ವಲಯದಲ್ಲಿ ಅರಣ್ಯ ಇಲಾಖೆಯವರು ಬಿದಿರು ಕೊಂಬೆಗಳನ್ನು ಸಂಗ್ರಹಿಸುವದನ್ನು ನಿಷೇಧಿಸಿದ್ದರಿಂದ ಅದರಿಂದ ಉಪಕರಣಗಳನ್ನು ಮಾಡಿ ಬದುಕುತ್ತಿದ್ದ ಸುಮಾರು 6000 ಆದಿವಾಸಿ ಮತ್ತು ಮೇದರ ಕುಟುಂಬಗಳು ತಮ್ಮ ಜೀವನಾಧಾರ ಕಸುಬನ್ನು ಕಳೆದುಕೊಂಡಿದ್ದಾರೆ. ಜನರೆಲ್ಲ ಸೇರಿ ಜನ್ನಾರಂ ಡಿ.ಎಫ್. ಒಕಛೇರಿಯನ್ನು ಮುತ್ತಿಗೆಹಾಕಿ ಅಧಿಕಾರಿಗಳಿಗೆ ಗಂಭೀರ ಎಚ್ಚರಿಕೆ ನೀಡಿರುವುದರ ಫಲವಾಗಿ ಇಂದು ಪುನಃ ಅವರು ಬಿದಿರು ಸಂಗ್ರಹಣೆ ಮಾಡಬಹುದಾಗಿದೆ.

ನರಸಿಂಪೇಟ್ ಮತ್ತು ಮೆಹಬೂಬಾಬಾದ್‌ಗಳಲ್ಲಿ ಹೋರಾಟವನ್ನ ವ್ಯಾಪಕಗೊಳಿಸಲು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಅಧಿಕಾರಿಗಳು ಹೋರಾಟ ಮುಂದುವರೆಸಿದರೆ ಬಡಜನರ ರೇಶನ್ ಕಾರ್ಡ್, ಆಧಾರ್‌ಕಾರ್ಡ್ ರದ್ದುಪಡಿಸುವದಾಗಿ ಬೆದರಿಕೆ ಹಾಕಿದರು. ರಾಜ್ಯದಾದ್ಯಂತ ಹಲವಾರು ಹಳ್ಳಿಗಳಲ್ಲಿ ಆದಿವಾಸೀ ಮತ್ತು ಬುಡಕಟ್ಟು ಜನರು ಅರಣ್ಯ ಇಲಾಖೆಯ ದೌರ್ಜನ್ಯವನ್ನು ಅವರು ನೆಟ್ಟ ಸಸಿಗಳನ್ನು ಕಿತ್ತೆಸೆಯುವದರ ಮೂಲಕ ಪ್ರತಿರೋಧಿಸುತ್ತ ಬಂದಿದ್ದಾರೆ.

ವರ್ಷಪೂರ್ತಿ ನಡೆದ ಹೋರಾಟದಲ್ಲಿ ತೆಲಂಗಾಣದ ಬಡರೂತರಿಗೆ ಹಲವು ವಿಜಯಗಳು ದಕ್ಕಿದರೂ, ಇನ್ನೂ ಹಲವು ಪ್ರಮುಖ ಬೇಡಿಕೆಗಳು ಇನ್ನೂ ಈಡೇರಿಲ್ಲ–ಮುಖ್ಯವಾಗಿ ಅರಣ್ಯ ಹಕ್ಕು ಕಾಯ್ದೆಯ ಅಡಿಯಲ್ಲಿ ಕನಿಷ್ಟ 10 ಎಕ್ರೆ ಭೂಮಿಯ ಅನಭೋಗದ ಹಕ್ಕು, ಎಲ್ಲ ಭೂಹೀನ ದಲಿತರು ಮತ್ತು ಬುಡಕಟ್ಟು ಜನಗಳಿಗೆ ಮೂರು ಎಕ್ರೆ ಕಮೀನಿ, ಕೃಷಿ ಸಾಲ. ಇದಕ್ಕೆ ಹೋರಾಟಗಳು ಮುಂದುವರೆಯುತ್ತಿವೆ.

ಅಸಂಘಟಿತ ಕಾರ್ಮಿಕರಿಗೆ ವಸತಿ ಯೋಜನೆ: ಸೊಲ್ಲಾಪುರದಲ್ಲಿ ವಿಜಯ

ಅಸಂಘಟಿತ ಕಾರ್ಮಿಕರಿಗಾಗಿ 30000 ಮನೆಗಳ ವಸತಿ ಯೋಜನೆಯ ಮಂಜೂರಾಗಿರುವದಕ್ಕಾಗಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರದಲ್ಲಿ ಜುಲೈ 24, 2016 ರಂದು ಬೃಹತ್ ವಿಜಯೋತ್ಸವ ರ್‍ಯಾಲಿ ಸಡೆಸಲಾಯಿತು.

ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ, ಸಿ.ಐ.ಟಿ.ಯು ವಿನ ರಾಜ್ಯಾಧ್ಯಕ್ಷ ಹಾಗೂ ಮಾಜೀ ಶಾಸಕ ನರಸಯ್ಯ ಅದಂರವರ ನೇತೃತ್ವದಲ್ಲಿ ಈ ವಸತಿ ಯೋಜನೆ ತರಲು ಕಾರ್ಯಾರಂಭಿಸಲಾಗಿತ್ತು.ಹಿಂದಿನ ಕಾಂಗ್ರೆಸ್ ಮುಖ್ಯ ಮಂತ್ರಿ, ಹಿಂದಿನ ಕೇಂದ್ರ ಗೃಹಮಂತ್ರಿಗಳ ರಾಜಕೀಯ ಸ್ವಾರ್ಥದಿಂದಾಗಿ ಈ ವಸತಿ ಯೋಜನೆಯ ಮಂಜೂರಾತಿ ವಿಳಂಬಗೊಂಡಿತ್ತು. ಸಿ.ಪಿ.ಐ(ಎಂ) ಮತ್ತು ಸಿ.ಐ.ಟಿ.ಯುವಿನ ಸುಧೀರ್ಘ ಅವಿರತ ಹೋರಾಟದ ಭಾಗವಾಗಿ ಕೊನೆಗೂ ಈ ಯೋಜನೆ ಮಂಜೂರಾಗಿದೆ. ಈ ಯೋಜನೆಯನ್ನು ಕೇಂದ್ರ ಸರಕಾರದಿಂದ ಮಂಜೂರು ಮಾಡಿಸುವಲ್ಲಿ ಸಿ.ಪಿ.ಐ(ಎಂ) ಸಂಸದೀಯ ಗುಂಪಿನ ಮುಖಂಡರಾದ ಸಿತಾರಾಂ ಯೆಚೂರಿ ಅವರ ಪಾತ್ರ ದೊಡ್ಡದಿದೆ.

ಸೊಲ್ಲಾಪುರದಲ್ಲಿ ನಡೆದ ವಿಶೇಷ ವಿಜಯೋತ್ಸವದಲ್ಲಿ ಅಸಂಘಟಿತ ಕಾರ್ಮಿಕ ವಲಯದಿಂದ 70,000 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು–ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದ ರ್‍ಯಾಲಿಯಲ್ಲಿ ವಿಶೇಷವಾಗಿ ಮುಸ್ಲಿಂ ಸಮುದಾಯದ ಮಹಿಳೆಯರೂ ಭಾಗವಹಿಸಿದ್ದರು.

10 ವರ್ಷಗಳ ಹಿಂದೆ ಇದೇ ರೀತಿ ಸೋಲ್ಲಾಪುರದಲ್ಲಿ, ಮಹಿಳಾ ಬೀಡಿ ಕಾರ್ಮಿಕರಿಗಾಗಿ 10,000 ಕಡಿಮೆ ವೆಚ್ಚದ ಮನೆಗಳನ್ನು ಕಾಂ. ಗೋದುತಾಯಿ ಪರುಳೇಕರ್ ವಸತಿಯೋಜನೆ ಎಂಬ ಹೆಸರಿನಲ್ಲಿ, ಕಾರ್ಮಿಕರು, ರಾಜ್ಯ ಹಾಗೂ ಕೇಂದ್ರ ಸರಕಾರದ ಸಮ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿತ್ತು.

2015 ಅಗಸ್ಟನಲ್ಲಿ ಇದೇ ರೀತಿ ಮಹಿಳಾ ಬೀಡಿ ಕಾರ್ಮಿಕರಿಗಾಗಿ ಇನ್ನೊಂದು ಚಿಕ್ಕ ವಸತಿಯೋಜನೆಯನ್ನು ಮಾಡಿ 1,600 ಮನೆಗಳನ್ನು ಕಾಂ ಮೀನಾಕ್ಷೀ ತಾಯಿ ಸಾನೇ ವಸತಿ ಯೋಜನೆ ಎಂಬ ಹೆಸರಿನಲ್ಲಿ ನಿರ್ಮಿಸಲಾಗಿತ್ತು.

ಜುಲೈ 24, 2016 ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ನರಸಯ್ಯ ಆದಮ, ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರ 4 ವರ್ಷ ತಗೆದುಕೊಂಡು ಹಣ ಮತ್ತು ಸಮಯ ಎರಡನ್ನೂ ವ್ಯರ್ಥ ಮಾಡಿದೆ. 2018ರ ಹೊತ್ತಿಗೆ ವಸತಿಗಾಗಿ ಅರ್ಜಿನೀಡಿದ ಸದಸ್ಯರಿಗೆ ಮನೆ ನೀಡಲು ಆಯೋಜಿಸಲಾಗಿದೆ ಎಂದರು. ಶಾಲೇ,ಕ ಾಲೇಜು, ಆಸ್ಪತ್ರೆ, ಮಾರುಕಟ್ಟೆ, ರಸ್ತೆ,ನೀರು ಮತ್ತು ವಿದ್ಯುತ್‌ಗಳನ್ನು ಒಳಗೊಂಡ ಮೂಲಭೂತ ಆಧುನಿಕ ಸೌಲಭ್ಯಗಳನ್ನು ಈ ಯೋಜನೆ ಹೊಂದಿರುತ್ತದೆಎಂದರು.

ಅಖಿಲ ಭಾರತ ಕಿಸಾನ್ ಸಭಾದ ಜಂಟೀ ಕರ್ಯದರ್ಶಿ ಡಾ. ಅಶೋಕ್ ಧವಳೆ ಅವರು ಸಿ.ಪಿ.ಐ(ಎಂ) ಮತ್ತು ಸಿ.ಐ.ಟಿ.ಯು ವಿನ ಎಲ್ಲ ಚಳುವಳಿದಾರರಿಗೆ ಅಭಿನಂದಿಸುತ್ತ, ಅಸಂಘಟಿತ ಕಾರ್ಮಿಕ ವಲಯದ ಕಾರ್ಮಿಕರು ದಿನಂಪ್ರತಿ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸತತವಾಗಿ ಬಂದ ಎಲ್ಲ ಸರಕಾರಗಳೂ ಸೋತಿವೆ ಎಂದರು. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಬಂಡವಾಳಶಾಹೀ ಮತ್ತು ಕೋಮುವಾದೀ ಪಕ್ಷಗಳನ್ನು ಮುಂಬರುವ ಸ್ಥಳೀಯ ಚುನಾವಣೆಗಳಲ್ಲಿ ಸೋಲಿಸಬೇಕು ಹಾಗೂ ಸೆಪ್ಟೆಂಬರ್ 2ರ ರಾಷ್ಟ್ರವ್ಯಾಪೀ ಮುಷ್ಕರವನ್ನು ಯಶಸ್ವಿಗೊಳಿಸಬೇಕು ಎಂದು ಅವರುಕರೆ ನೀಡಿದರು.

ಕೇರಳ: ಗೊಂದಲದಲ್ಲಿ ಯು.ಡಿ.ಎಫ್

ಕೇರಳ ರಾಜ್ಯ ಕಾಂಗ್ರೆಸ್ ಪಕ್ಷದಲ್ಲಿ ಚುನಾವಣಾ ಪತನದ ನಂತರ ಆತರಿಕ ಕಲಹ ಮುಗಿಲು ಮುಟ್ಟಿದೆ, ಅಧಿಕಾರ ಕಳೆದುಕೊಂಡ ಉಮ್ಮನ್ ಚಾಂಡಿ ಸಾಕಷ್ಟು ಬೆಂಬಲ ಪಡೆಯಲು ಸಾಧ್ಯವಾಗದ ಕಾರಣ ರಮೇಶ ಚೆನ್ನಿತ್ತಲ ಅವರು ವಿರೋಧ ಪಕ್ಷದ ಮುಖಂಡರಾಗಿದ್ದಾರೆ. ಸಮಯಸಾಧಕತನ, ಗುಂಪುಗಾರಿಕೆ, ಪಕ್ಷಪಾತ, ಮುಂತಾದವುಗಳು ಪಕ್ಷದಲ್ಲಿ ಮಿತಿಮೀರಿ ಹೋಗಿದೆ.

ಬಿರುಕು ಎಷ್ಟು ಪ್ರಬಲವಾಗಿದೆ ಎಂದರೆ ಸದನದ ಉಪನಾಯಕ ಸ್ಥಾನವನ್ನು ಆಂತರಿಕ ಒಮ್ಮತಕ್ಕೆ ಬರಲು ಸಾಧ್ಯವಾಗದ ಕಾರಣ ಮುಸ್ಲಿಂ ಲೀಗ್‌ಗೆ ಬಿಟ್ಟು ಕೊಡಲಾಗಿದೆ. ಕೇರಳ ಕಾಂಗ್ರೆಸ್ (ಎಂ) ಬಹಿರಂಗವಾಗಿಯೇ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದು ಸದನದಲ್ಲಿ ಯು.ಡಿ.ಎಫ್.ನಿಂದ ಬೇರ್ಪಟ್ಟು ಅವರದ್ದೇ ಬೇರೆ ಬಣವಾಗಿ ಕುಳಿತುಕೊಳ್ಳಲು ನಿರ್ಧರಿಸಿದೆ. ಈ ಹಿಂದೆ ಜನತಾದಳ(ಯು) ಮತ್ತು ಆರ್.ಎಸ್.ಪಿ. ಗಳು ಎಲ್.ಡಿ.ಎಫ್.ನ ಬಾಗವಾಗಿದ್ದವು. 2009ರ ಲೋಕಸಭಾ ಚುನಾವಣೆಯಲ್ಲಿ ಜೆ.ಡಿ.ಯು. ವು ಎಲ್.ಡಿ.ಎಫ್.ಬಿಟ್ಟುಯು.ಡಿ.ಎಫ್ ಸೇರಿತ್ತು.2014ರ ಲೋಕಸಭಾಚುನಾವಣೆಯಲ್ಲಿಆರ್.ಎಸ್.ಪಿ.ಯು ಎಲ್.ಡಿ.ಎಫ್.ಬಿಟ್ಟು ಯು.ಡಿ.ಎಫ್ ಸೇರಿತ್ತು. ಇತ್ತಿಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಆ ಎರಡೂ ಪಕ್ಷಗಳು ಒಂದು ಸ್ಥಾನವನ್ನೂ ಸಹ ಪಡೆಯಲಾಗಲಿಲ್ಲ. ಆರ್.ಎಸ್.ಪಿ.ಯ ಪ್ರಧಾನ ಕಾರ್ಯದರ್ಶಿ ಯು.ಡಿ.ಎಫ್‌ನ ಚಟುವಟಿಕೆಗಳನ್ನು ಬಹಿರಂಗವಾಗಿ ಟೀಕಿಸಿ ಎಲ್.ಡಿ.ಎಫ್ ಸರಕಾರದ ಆರಂಭಿಕ ಕಾರ್ಯಕ್ರಮಗಳನ್ನು ಶ್ಲಾಘಿಸಿದ್ದಾರೆ.



ಕೇರಳದ ಕಣ್ಣೂರಿನಲ್ಲಿ ಆಗಸ್ಟ್ 20ರಂದು ಆರೆಸ್ಸೆಸ್ ಕಾರ್ಯಕರ್ತ ದೀಕ್ಷಿತ್ ಬಾಂಬ್ ತಯಾರಿಸುವಾಗ ಅದು ಸ್ಫೋಟಗೊಂಡು ಮೃತನಾಗಿದ್ದಾನೆ. ಈ ಮೂಲಕ ಇಲ್ಲಿ ಆರೆಸ್ಸೆಸ್‌ನ ಬಾಂಬ್ ಕಾರ್ಖಾನೆ ಇರುವುದು ಜಗಜ್ಜಾಹೀರಾಗಿದೆ. ಈತನ ತಂದೆ ಇಲ್ಲಿ ಒಬ್ಬ ಸುಪರಿಚಿತ ಬಿಜೆಪಿ ಮುಖಂಡ. ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಎಸೆಯುವ ನಾಡಬಾಂಬುಗಳನ್ನು ತಯಾರಿಸುವಾಗ ನಡೆದ ಈ ಸ್ಫೋಟದಲ್ಲಿ ಇಡೀ ಮನೆಗೇ ಹಾನಿ ತಟ್ಟಿದೆ. ಅಲ್ಲದೆ ಸ್ಥಳಕ್ಕೇ ಬಮದ ಪೋಲೀಸರಿಗೆ ಮಚ್ಚು–ಖಡ್ಗಗಳೂ ದೊರೆತಿವೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಕಣ್ಣೂರಿನಲ್ಲಿ ಹಿಂಸಾಚಾರ ನಡೆಸುತ್ತಿರುವವರು ಯಾರು ಎಂಬ ಬಗ್ಗೆ ಈಗ ಯಾರಿಗೂ ಸಂದೇಹ ಉಳಿಯುವಂತಿಲ್ಲ.



ಕೇರಳದ ಸಮಕಾಲೀನ ರಾಜಕೀಯದಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ನೋಡಿದಾಗ ಕಾಂಗ್ರೆಸ್‌ನ ಮಾರ್ಕ್ಸಿಸ್ಟ್– ವಿರೋಧಿ ಕುರುಡು ಏಕಾಂಶ ಅಜೆಂಡಾ ಕೆಲಸ ಮಾಡುವುದಿಲ್ಲ ಎಂಬುದು ಸಂಶಯಾತೀತವಾಗಿ ಸಾಬೀತಾಗಿದೆ. ಕಾಂಗ್ರೆಸ್‌ಗೆ ವಿನಾಶ ಕೇವಲ ಸಂಘಟನಾತ್ಮಕವಾಗಿ ಮಾತ್ರವಲ್ಲ ರಾಜಕೀಯವಾಗಿಯೂ ಕಾದಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಹೇಳುತ್ತಾರೆ. ಯು.ಡಿ.ಎಫ್ ಕೇವಲ ಒಂದು ಗುಂಪಾಗಿ ಉಳಿದು ತನ್ನ ಅಸ್ಥಿತ್ವ ಉಳಿವಿಗಾಗಿ ಹೋರಾಡುತ್ತಿದೆ.

ಕಾಂಗ್ರೆಸ್–ಯುಡಿಎಫ್‌ನ ಇಂತಹ ಪರಿಸ್ತಿತಿಯ ಪ್ರಯೋಜನ ಪಡೆಯಲು ಸಂಘ ಪರಿವಾರದವರು ಪ್ರಯತ್ನಿಸುತ್ತಿದ್ದಾರೆ. ಅದಕ್ಕಾಗಿ ತಮ್ಮ ದ್ವೇಷರಾಜಕಾರಣವನ್ನು ಕೇಂದ್ರ ಅಧಿಕಾರದ ದುರ್ಬಳಕೆಯಿಂದ ಮಾಡಲೆತ್ನಿಸುತ್ತಿದ್ದಾರೆ. ಆರ್.ಎಸ್.ಎಸ್.ನ ಹಸ್ತಕ್ಷೇಪದಿಂದಾಗಿ ದೇಶದ ದಲಿತ, ಅಲ್ಪಸಂಖ್ಯಾತ, ಮತ್ತು ಆದಿವಾಸೀ ಸಮುದಾಯದ ಮನಸ್ಸಿನಲ್ಲಿ ಅಸಮಾಧಾನ ಮೂಡಿದೆ. ಕೇರಳದಲ್ಲಿ ಮುಸ್ಲೀಂ ಅಲ್ಪಸಂಖ್ಯಾತ ಸಮುದಾಯ ಒಳಗಡೆ ಹಿಡಿಯಷ್ಟು ಮಂದಿ ಉಗ್ರಗಾಮಿಗಳಾಗುತ್ತಿದ್ದಾರೆ. ಕೇರಳದಲ್ಲಿ ಭಯೋತ್ಪಾದಕ ಸಂಘಟನೆ ಐ.ಎಸ್.ಐ.ಎಸ್ ನ ಪ್ರಭಾವ ಹೆಚ್ಚುತ್ತಿರುವುದಾಗಿ ವರದಿಗಳು ಬರುತ್ತಿವೆ. ಧರ್ಮದ ಆಧಾರದ ಮೇಲೆ ಜನರನ್ನು ವಿಭಾಗಿಸುವ ಕೆಲಸವನ್ನುಆರ್.ಎಸ್.ಎಸ್ ಮತ್ತು ಮುಸ್ಲಿಂ ಉಗ್ರವಾದಿಗಳು ಮಾಡುತ್ತಿದ್ದಾರೆ.

ಇವರಿಬ್ಬರೂ ಒಂದು ಆಧುನಿಕ ಜಾತ್ಯಾತೀತ ಪ್ರಭುತ್ವದಲ್ಲಿ ಧರ್ಮವಲ್ಲ, ನಾಗರಿಕತ್ವವೇ ಒಬ್ಬ ವ್ಯಕ್ತಿಯ ಪ್ರಥಮ ಗುರುತು ಎಂಬುದನ್ನು ಒಪ್ಪುವುದಿಲ್ಲವಾದ್ದರಿಂದ ಕೇರಳದ ಕೋಮು ಸೌಹಾರ್ದತೆ ಮತ್ತು ಜಾತ್ಯಾತೀತತೆಗೆ ಗಂಡಾಂತರ ತರುವವವರು ಎಂದು ಕೊಡಿಯೇರಿ ಬಾಲಕೃಷ್ಣನ್ ಹೇಳುತ್ತಾರೆ

ಅಥವಾ..... ಸಾಮ್ರಾಜ್ಯಶಾಹಿಗಳ ಡಬ್ಬಲ್ ಗೇಮ್?............ ಪುಟ 6 ರಿಂದ

ರಿಪಬ್ಲಿಕನ್ ಕ್ರಾಂತಿಯ ಸಮಯದಿಂದಲೂ ಹನ್, ಮಂಗೋಲ್, ಟಿಬೆಟ್ ಸೇರಿದಂತೆ 5 ರಾಷ್ಟ್ರೀಯತೆಗಳಿರುವ ಬಹು–ರಾಷ್ಟ್ರೀಯತೆಗಳಿರುವ ದೇಶ–ಪ್ರಭುತ್ವ ಎಂದು ಘೋಷಿಸಿಕೊಂಡಿತ್ತು. ಭಾರತ ಸಹ ಇಂತಹುದೇ ಬಹು–ರಾಷ್ಟ್ರೀಯತೆಗಳಿರುವ ದೇಶ–ಪ್ರಭುತ್ವ. ಇಂತಹ ಬಹು–ರಾಷ್ಟ್ರೀಯತೆಗಳಿರುವ ದೇಶ–ಪ್ರಭುತ್ವದಲ್ಲಿ ಎಲ್ಲಾ ರಾಷ್ಟ್ರೀಯತೆಗಳನ್ನು ಸಮಾನವಾಗಿ ಕಾಣಬೇಕು. ಅವರ ಭಾಷೆಯ ಬೆಳವಣಿಗೆ ಮತ್ತು ಸಾಂಸ್ಕೃತಿಕ–ಧಾರ್ಮಿಕ ಅಸ್ಮಿತೆ ಹಾಗೂ ಆಚರಣಗಳಿಗೆ ಪೂರ್ಣ ಅವಕಾಶ ಇರಬೇಕು. ಯಾವುದೇ ರಾಷ್ಟ್ರೀಯತೆ–ಆಧಾರಿತ ದಮನ ಇಲ್ಲದಂತೆ ನೋಡಿಕೊಳ್ಳಬೇಕು ಎಂಬುದು ಮಾರ್ಕ್ಸ್‌ವಾದಿಗಳ ನೀತಿ. ಇದು ಯಾವುದೇ ನೈಜ ಪ್ರಜಾಪ್ರಭುತ್ವವಾದಿಯ ನೀತಿಯೂ ಆಗಿರಬೇಕು.


ಆದರೆ ಇದನ್ನು ಪ್ರಾಯೋಗಿಕವಾಗಿ ಸಾಧಿಸುವುದು ಸುಲಭವಲ್ಲ. ಶತಮಾನಗಳ ಅಸಮಾನತೆ, ಪಾಳೆಯಗಾರಿ ಯುಗದ ಯುದ್ಧ–ಕದನಗಳ ವೈಷಮ್ಯ–ದ್ವೇಷ ದಮನಗಳ ಕಹಿ ನೆನಪು, ಸುಲಭವಾಗಿ ಬಿಡದ ಪೂರ್ವಗ್ರಹಗಳ ಹಳೆ ಚಾಳಿಗಳ ಹಿನ್ನೆಲೆಯಲ್ಲಿ ಇಂತಹ ಸಂಕೀರ್ಣ ಸಮಸ್ಯೆಗಳ ನಿರ್ವಹಣೆಯಲ್ಲಿ ತಪ್ಪುಗಳು ಅತಿರೇಕಗಳು ಪ್ರಮಾದಗಳೂ ಆಗುವುದು ಸಹಜ. ಸೋವಿಯೆಟ್ ಒಕ್ಕೂಟದಲ್ಲೂ, ಚೀನಾದಲ್ಲೂ ಇಂತಹವು ಹಲವು ಅವಧಿಗಳಲ್ಲಿ ನಡೆದಿವೆ. ಟಿಬೆಟಿನ ಸಂದರ್ಭದಲ್ಲೂ ನಡೆದಿರಬಹುದು. ಪ್ರಮುಖವಾಗಿ 'ಸಾಂಸ್ಕೃತಿಕ ಕ್ರಾಂತಿ'ಯ ಅವಧಿಯಲ್ಲಿ ಟಿಬೆಟಿನ ಧಾರ್ಮಿಕ ಸ್ವಾತಂತ್ರ್ಯ ಆಚರಣೆಗಳ ಬಗ್ಗೆ ಹಲವು ತಪ್ಪುಗಳು ಪ್ರಮಾದಗಳೂ ನಡೆದಿವೆ ಎನ್ನಲಾಗಿದೆ. ಸಮಾಜವಾದಿ ಮತ್ತು ಹೊಸದಾಗಿ ಸ್ವತಂತ್ರವಾದ ಮೂರನೇ ಜಗತ್ತಿನ ದೇಶಗಳ ಪ್ರಗತಿಗೆ ಅಡ್ಡಗಾಲು ಹಾಕಲು, (ವಸಾಹತುಶಾಹಿ ಕೊನೆಗೊಂಡು ಶೀತಸಮರ ಆರಂಭವಾದ) 1950ರ ದಶಕದಿಂದ ಅಮೆರಿಕನ್ ಸಾಮ್ರಾಜ್ಯಶಾಹಿ ಈ ದೇಶಗಳಲ್ಲಿರುವ ರಾಷ್ಟ್ರೀಯತೆಗಳ ನಡುವಿನ ಅಸಮಾನತೆ ಅತೃಪ್ತಿಗಳನ್ನು ಬಳಸುತ್ತಾ ಬಂದಿದೆ. ಅವುಗಳ ನಿರ್ವಹಣೆಯ ತಪ್ಪು/ಪ್ರಮಾದಗಳ ಸಂದರ್ಭಸಾಧಕ ಬಳಕೆಯನ್ನು ಮಾಡಿದೆ. ಚೀನಾದ ಸಂದರ್ಭದಲ್ಲಿ ಟಿಬೆಟ್ ನಲ್ಲೂ ಅಮೆರಿಕ ಇದನ್ನೇ ಮಾಡಿರುವುದು, ಮಾಡುತ್ತಿರುವುದು.

ರಾಷ್ಟ್ರೀಯತೆಗಳ ಸ್ವಯಂ–ನಿರ್ಧಾರದ ಹಕ್ಕು ಸಾಧಿಸುವಲ್ಲಿ 'ಸ್ವತಂತ್ರ ದೇಶ' ಅಥವಾ ಒಂದು ದೇಶದೊಳಗೆ ಅಗತ್ಯ ಸ್ವಾಯತ್ತತೆ (ಅಥವಾ ಸ್ವಯಮಾಡಳಿತ) ಗಳ ನಡುವೆ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಆ ದೇಶದ ಪ್ರಭುತ್ವದ ವರ್ಗ ಸ್ವರೂಪ, ಆ ರಾಷ್ಟ್ರೀಯತೆಯ ಬಲಾಬಲ ಮತ್ತು 'ಸ್ವತಂತ್ರ ದೇಶ'ವಾಗುವ ಕಾರ್ಯಸಾಧ್ಯತೆಯ ಮೇಲೆ ಅವಲಂಬಿಸಿರುತ್ತದೆ. 1990ರ ದಶಕದ ನಂತರದ ಜಾಗತೀಕರಣದ ಅವಧಿಯಲ್ಲಿ ಹಣಕಾಸು ಬಂಡವಾಳಕ್ಕೆ ಯಾವುದೆ ಕಡಿವಾಣವಿಲ್ಲದ ಗಡಿಗಳಿಲ್ಲದ ಜಗತ್ತು ಸೃಷ್ಟಿಸುವ ಹುನ್ನಾರದ ಭಾಗವಾಗಿ ರಾಷ್ಟ್ರೀಯ ಪ್ರಭುತ್ವಗಳನ್ನು ದುರ್ಬಲಗೊಳಿಸುವ ಅಥವಾ ನಾಶ ಮಾಡುವ ಹಿನ್ನೆಲೆಯನ್ನೂ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಸಾಮ್ರಾಜ್ಯಶಾಹಿ ಚೀನಾ (ಟಿಬೆಟ್ ಬಳಸಿಕೊಂಡು) ಮಾಜಿ ಸೋವಿಯೆಟ್ ಒಕ್ಕೂಟದ ದೇಶಗಳು, ಇರಾಕ್, ಲಿಬ್ಯಾ, ಸಿರಿಯಾ ದೇಶಗಳನ್ನು ಒಡೆಯುವ ಪ್ರಯತ್ನ ಮಾಡುತ್ತಿದೆ. 1990ರ ದಶಕದಲ್ಲಿ ಯುಗೋಸ್ಲಾವಿಯದ ಮೇಲೆ ಮಿಲಿಟರಿ ದಾಳಿಯಿಂದ ಆರಂಭಿಸಿ ಎಲ್ಲಾ ಕಡೆ ಪ್ರತ್ಯೇಕತಾವಾದಿ ವಿಘಟನಕಾರಿ ಶಕ್ತಿಗಳನ್ನು ಹಾಗೂ ರಾಷ್ಟ್ರೀಯತಾ ಅಸಮಾನತೆ ಅತೃಪ್ತಿಗಳನ್ನು ಬಳಸಿ ತನ್ನ ಬಲ ಹೆಚ್ಚಿಸಿಕೊಳ್ಳಲು ಬಳಸುತ್ತಿದೆ. ಹಲವು ರಾಷ್ಟ್ರೀಯ ಪ್ರಭುತ್ವಗಳು ಅವುಗಳಿಗೆ ತೀವ್ರ ಸವಾಲು ಬಂದಾಗ ಸಹ ಇಂತಹ ಶಕ್ತಿಗಳನ್ನು ದುಡಿಯುವ ಜನತೆಯ ಐಕ್ಯತೆ ಒಡೆಯಲು ಬಳಸಿಕೊಳ್ಳುತ್ತವೆ. ಇವನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. 'ಸ್ವತಂತ್ರ ದೇಶ'ವಾಗುವುದು ದುಡಿಯುವ ಜನರ ಬಲಾಬಲ ಹೆಚ್ಚಿಸಲು ಅಥವಾ ಐಕ್ಯತೆಗೆ ಮಾರಕವಾಗುವುದಾದರೆ 'ಸ್ವತಂತ್ರ ದೇಶ'ದ ಬದಲು ಗರಿಷ್ಠ ಸ್ವಾಯತ್ತತೆಯನ್ನು ಆರಿಸಿಕೊಳ್ಳಬೇಕು.

ಮೇಲೆ ಹೇಳಿದ ಮಾರ್ಕ್ಸ್‌ವಾದಿ ನೀತಿಯ ಅನ್ವಯ ಮಾಡಿಯೇ ಟಿಬೆಟ್, ಕಾಶ್ಮೀರಕ್ಕೆ 'ಸ್ವತಂತ್ರ ದೇಶ'ಕ್ಕಿಂತ ಗರಿಷ್ಠ ಸ್ವಾಯತ್ತತೆಯ ಆಯ್ಕೆ ಉತ್ತಮ. ಪ್ಯಾಲೆಸ್ತೀನ್ 'ಸ್ವತಂತ್ರ ದೇಶ'ಕ್ಕೆ ಬೆಂಬಲ ಕೊಡುತ್ತಾರೆ ಮಾರ್ಕ್ಸ್‌ವಾದಿಗಳು. ಸ್ವತಂತ್ರ ಪ್ಯಾಲೆಸ್ತೀನ್ ಅರಬರು, ಯಹೂದಿಯರನ್ನು ಧರ್ಮ, ಜನಾಂಗೀಯ ಬೇಧವಿಲ್ಲದೆ ಸಮಾನವಾಗಿ ಕಾಣುವ ದೇಶವಾಗಬೇಕು ಎಂದು ಮಾರ್ಕ್ಸ್‌ವಾದಿಗಳು ಬೆಂಬಲಿಸುತ್ತಾರೆ. ಇದು ಇಸ್ರೇಲಿನ ಝಿಯೋನಿಸ್ಟ್ ಚೌಕಟ್ಟಿನ ಒಳಗೆ ಸಾಧ್ಯವಿಲ್ಲದಿರುವುದರಿಂದಲೇ ಸ್ವಾತಂತ್ರ್ಯಕ್ಕೆ ಬೆಂಬಲ ಕೊಡುತ್ತಾರೆ. ಮುಂದೊಂದು ದಿನ ಈಗಿನ ಇಸ್ರೇಲ್ ಅಂತಹ ಬಹುರಾಷ್ಟ್ರೀಯ ದೇಶವಾಗಿ ಬದಲಾಗುವುದಾದರೆ ಅದನ್ನು ಮಾರ್ಕ್ಸ್‌ವಾದಿಗಳು ಸ್ವಾಗತಿಸುತ್ತಾರೆ.

1951ರಿಂದೀಚೆಗೆ ಟಿಬೆಟ್ ಪ್ರಗತಿ

ಗುಹಾ ಅವರ ಲೇಖನದಲ್ಲಿ ಈಗ ಟಿಬೆಟ್ ದಮನ ಚಕ್ರದಲ್ಲಿದೆ. ಹಿಂದೆ ಎಲ್ಲವೂ ಸರಿಯಾಗಿತ್ತು (ಎಂದು ಅವರು ನೇರವಾಗಿ ಹೇಳದಿದ್ದರೂ) ಎಂಬ ಭಾವನೆ ಬರುತ್ತದೆ. ಟಿಬೆಟ್ ನ ಸಾಕ್ಷರತೆ 1951ರಲ್ಲಿ ಕೇವಲ ಶೇ.5 ಇತ್ತು. ಈಗ ಶೆ. 88 ಇದೆ. ಮಕ್ಕಳು, ಯುವಕರು ಹಾಗೂ ಮಧ್ಯವಯಸ್ಕರಲ್ಲಿ ಸಾಕ್ಷರತೆ 99.2ಕ್ಕೇರಿದೆ. ಸರಾಸರಿ ಆಯಸ್ಸು 1951ರಲ್ಲಿ ಕೇವಲ 35.5 ಇತ್ತು. 2014ರಲ್ಲಿ ಅದು 68.2ಕ್ಕೇರಿದೆ. ಟಿಬೆಟಿನ ಕಾರ್ಮಿಕರ ಆದಾಯ 1970 ಮತ್ತು 2014ರ ಮಧ್ಯೆ 80 ಪಟ್ಟು ಏರಿದೆ. 1951ರಲ್ಲಿ ಟಿಬೆಟಿಯನ್ನರ ಮನೆ ಸರಾಸರಿ 3 ಚದರ ಮೀಟರ್ ಇದ್ದರೆ 2014ರಲ್ಲಿ ಅದು 29 ಚದರ ಮೀಟರಿಗೆ ಏರಿದೆ. 1951ರಲ್ಲಿ ಇಡೀ ಟಿಬೆಟಿನಲ್ಲಿ ಒಟ್ಟು 286 ಫೋನು ಇತ್ತು. ಈಗ 100 ಟಿಬೆಟಿಯರಿಗೆ 107 ಫೋನು ಇದೆ. ಟಿಬೆಟ್ ಪ್ರದೇಶದ ಜಿಡಿಪಿ 1950ರ ದಶಕದಲ್ಲಿ 10 ಕೋಟಿ ಯುವಾನಿಂದ 2015ರಲ್ಲಿ 10.2 ಸಾವಿರ ಕೋಟಿಗೆ ಏರಿದೆ. ಚೀನಾದ ಇತರ ಪ್ರಾಂತ್ಯಗಳ ವಾರ್ಷಿಕ ಬೆಳವಣಿಗೆ ದರಕ್ಕಿಂತ ಇದು ಬಹಳ ಹೆಚ್ಚು ಎಂದು ಬೇರೆ ಹೇಳಬೇಕಾಗಿಲ್ಲ. ಚೀನಾ ಸರಕಾರದ 'ಆಕ್ರಮಣ' 'ದಮನ'ದ ಬಗ್ಗೆ ಹೇಳುವವರು ಈ ಅಂಕೆಸಂಖ್ಯೆಗಳ ಬಗ್ಗೆ ಏನು ಹೇಳುತ್ತಾರೆ? ಇದು 'ಆಕ್ರಮಣ' 'ದಮನ'ದ ಪರಿಸ್ಥಿತಿಯಲ್ಲಿ ಸಾಧ್ಯವೇ?


ಅಮೇರಿಕಾದ ಮಾಜಿ ಅಧ್ಯಕ್ಷ ಜಾರ್ಜ್ ಬುಶ್ ಜತೆ ದಲೈ ಲಾಮಾ

1960ರ ದಶಕದಲ್ಲೇ ಟಿಬೆಟ್ ಗರಿಷ್ಠ ಸ್ವಾಯತ್ತತೆ ಇರುವ ಸ್ವಯಮಾಡಳಿತ ಪ್ರದೇಶ ಎಂದು ಘೋಷಿಸಲಾಗಿದೆ. ಟಿಬೆಟ್ ಚೀನಾದಲ್ಲಿ ಇರುವ ಇಂತಹ 5 ಸ್ವಯಮಾಡಳಿತ ಪ್ರದೇಶಗಳಲ್ಲಿ ಒಂದು. ಪ್ರಾಂತ್ಯ, ಜಿಲ್ಲಾ ಹಾಗೂ ಮುನಿಸಿಪಲ್ ಹಂತಗಳಲ್ಲಿ 34 ಸಾವಿರ ಪ್ರತಿನಿಧಿಗಳು ಚುನಾಯಿತರಾಗಿ ಆಡಳಿತ ನಡೆಸುತ್ತಾರೆ. ಇವರಲ್ಲಿ ಶೇ. 94 ಟಿಬೆಟಿಯರು. ಕೇವಲ ಶೇ. 6 ಮಾತ್ರ ಹೊರಗಿಂದ ಬಂದ ಹನ್ ಮುಂತಾದ ಮೂಲದವರು.

ಟಿಬೆಟಿನಲ್ಲಿ ಧಾರ್ಮಿಕ ಸ್ವಾತಂತ್ರ್ಯ ಇಲ್ಲ ಎಂಬುದು ನಿಜವಲ್ಲ. ಅಲ್ಲಿ ಸುಮಾರು 2 ಸಾವಿರದಷ್ಟು ಪ್ರಾರ್ಥನಾ ಸ್ಥಳಗಳಿವೆ. 46 ಸಾವಿರ ಬುದ್ಧ ಧಾರ್ಮಿಕ ಬಿಕ್ಕುಗಳು ಇದ್ದಾರೆ. ಆದರೆ ಧರ್ಮ ಮತ್ತು ರಾಜಕಾರಣವನ್ನು ಮಿಶ್ರ ಮಾಡುವುದನ್ನು ನಿಷೇಧಿಸಲಾಗಿದೆ. ಧಾರ್ಮಿಕ ಸ್ಥಳಗಳನ್ನು ರಾಜಕೀಯ ಪಿತೂರಿಗೆ ದಂಗೆಗೆ ಬಳಸಿಕೊಂಡಾಗೆಲ್ಲಾ ಕ್ರಮಕೈಗೊಳ್ಳಲಾಗಿದೆ. ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣಲಾಗುತ್ತದೆ.

ಇನ್ನೂ ಗುಹಾ ಅವರು ಹೇಳುವ 'ಪಾರಿಸರಿಕ ಸಾಮ್ರಾಜ್ಯಶಾಹಿತ್ವ' ಏನು ಎಂಬುದನ್ನು ಅವರೇ ವಿವರಿಸಬೇಕು. ನಾಲ್ಕು ಸಾವಿರ ಮೀಟರ್ ಎತ್ತರದಲ್ಲಿರುವ ಟಿಬೆಟ್ ಗೆ ರೈಲು ಮತ್ತು ಹೆದ್ದಾರಿ ಕಟ್ಟುವುದು ಮತ್ತಿತರ ಮೆಗಾ ಪ್ರಾಜೆಕ್ಟುಗಳ ಬಗ್ಗೆ ಗುಹಾ ಹೇಳುತ್ತಿರಬೇಕು. ಇವೆಲ್ಲಾ ಪರಿಸರ ತಾಳುವ ಬೆಳವಣಿಗೆ ಪ್ರಾಜೆಕ್ಟುಗಳೇ ಎಂಬ ಪ್ರಶ್ನೆ ಎತ್ತುತ್ತಿರಬಹುದು. ಆದರೆ ಚೀನಾದ ಇಂತಹ ಮೆಗಾ ಪ್ರಾಜೆಕ್ಟುಗಳು ಟಿಬೆಟಿಗೆ ಮಾತ್ರ ಸೀಮಿತವಾಗಿಲ್ಲ. ಮೂರು ಪ್ರಮುಖ ನದಿಗಳನ್ನು ಜೋಡಿಸುವ ಆಣೆಕಟ್ಟು ಮುಂತಾದ ಹಲವು ಇಂತಹ ಮೆಗಾ ಪ್ರಾಜೆಕ್ಟುಗಳನ್ನು ಚೀನಾದ ಇತರ ಪ್ರಾಂತ್ಯಗಳಲ್ಲಿ ಸಹ ಕೈಗೊಳ್ಳಲಾಗಿದೆ. ಆದ್ದರಿಂದ ಇದನ್ನು 'ಪಾರಿಸರಿಕ ಸಾಮ್ರಾಜ್ಯಶಾಹಿತ್ವ' ಎಂದಂತೂ ಹೇಳಲು ಸಾಧ್ಯವಿಲ್ಲ.

ಟಿಬೆಟ್ ಓಕೆ! ಪ್ಯಾಲೆಸ್ತೀನ್ ಹೋಲಿಕೆ ಯಾಕೆ ?

ಇವೆಲ್ಲಾ ಒಂದು ಕಡೆ ಇರಲಿ. ಗುಹಾ ಅವರು ಟಿಬೆಟ್–ಪ್ಯಾಲೆಸ್ತೀನ್ ಹೋಲಿಕೆ ಯಾಕೆ ಮಾಡುತ್ತಾರೆ ಮತ್ತು ಮಾರ್ಕ್ಸ್‌ವಾದಿಗಳನ್ನು ಯಾಕೆ ಎಳೆದು ತರುತ್ತಾರೆ? ಎಂಬ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ಪ್ಯಾಲೆಸ್ತೀನ್ ಪ್ರಶ್ನೆ ಪಾಶ್ಚಿಮಾತ್ಯ ವಸಾಹತುಶಾಹಿಯ ಕುತಂತ್ರದಿಂದ ತಾಯ್ನಾಡು ಕಳೆದುಕೊಂಡ ಜನತೆಯ ಸ್ವಾತಂತ್ರ್ಯದ ಪ್ರಶ್ನೆ. ಟಿಬೆಟ್ ಪ್ರಶ್ನೆ ಮಧ್ಯಕಾಲೀನ ಲಾಮಾಗಳ ಧಾರ್ಮಿಕ–ಪಾಳೆಯಗಾರಿ ನಿರಂಕುಶ ಕ್ರೂರ ಆಳ್ವಿಕೆ ದಬ್ಬಾಳಿಕೆಗಳ ಹಾಗೂ ಜೀತಗಾರಿಕೆ–ಯ ವಿರುದ್ಧ, ದಮನಿತರ ದಂಗೆಯಲ್ಲಿ, ಅಧಿಕಾರ ಕಳೆದುಕೊಂಡು ಓಡಿ ಹೋದ ಧಾರ್ಮಿಕ–ಪಾಳೆಯಗಾರಿ ನಾಯಕರು ಮತ್ತು ಅವರ ಹಿಂಬಾಲಕರ ತಮ್ಮ ಆಳ್ವಿಕೆ ಪುನಃ ಸ್ಥಾಪನೆಯ ಪ್ರಯತ್ನದ ಪ್ರಶ್ನೆ. 'ಎತ್ತಣ ಮಾಮರ, ಎತ್ತಣ ಕೋಗಿಲೆ' ಎನ್ನುವಂತಹ ಹೋಲಿಕೆ ಇದು.

ಪ್ಯಾಲೆಸ್ತೀನ್ ಪ್ರಶ್ನೆ ಅರಬ್ ಮತ್ತು ಮೂರನೇ ಜಗತ್ತಿನ ಹಲವು ಸ್ವಾತಂತ್ರ್ಯ ಹೋರಾಟಗಳೊಂದಿಗೆ ಹೋಲಿಸಬಹುದಾದ್ದು. ಯುರೋಪಿನ ಶಕ್ತಿ ರಾಷ್ಟ್ರಗಳು 'ಯುರೋಪಿನಲ್ಲಿ ಶತಮಾನಗಳ ಕಾಲ ಯಹೂದಿಗಳಿಗೆ ಕೊಟ್ಟ ಅನಾಗರಿಕ ಕಿರುಕುಳದ' ಮತ್ತು ಹಿಟ್ಲರನ ಫ್ಯಾಸಿಸ್ಟ್ ಮಾರಣಹೋಮದ 'ಪಾಪವನ್ನು ತೊಳೆದುಕೊಳ್ಳುವುದಕ್ಕಾಗಿ' ಯಹೂದಿಯರು ಸ್ಥಳೀಯ ಪ್ಯಾಲೆಸ್ತೀನಿಯರ ನರಮೇಧ ನಡೆಸಿ ಅತ್ಯಂತ ಹಿಂಸಾತ್ಮಕವಾಗಿ ಓಡಿಸಿ ಸ್ವತಂತ್ರ ದೇಶವನ್ನು ಕಟ್ಟಿಕೊಳ್ಳುವಂತೆ ನೋಡಿಕೊಂಡರು. ಕಳೆದ ಏಳು ದಶಕಗಳ ಇಸ್ರೇಲ್ ಸರಕಾರ ಎಲ್ಲಾ ವಿಶ್ವಸಂಸ್ಥೆಯ ನಿರ್ಣಯಗಳನ್ನು ಉಲ್ಲಂಘಿಸಿ ನಡೆಸುತ್ತಿರುವ ಪ್ಯಾಲೆಸ್ತೀನಿಯರ ವರ್ಣಬೇಧದಂತಹ ಕ್ರೂರ ದಮನ ಅಮೆರಿಕ ಮತ್ತು ಯುರೋ ಕೂಟದ ಬೆಂಬಲವಿಲ್ಲದೆ ಒಂದು ದಿನವೂ ಮುಂದುವರೆಯಲಾರದು.

ಟಿಬೆಟ್ ಪ್ರಶ್ನೆ ನಿಜವಾಗಿಯೂ ದಲೈ ಲಾಮಾ ಮತ್ತು ಅವರ ಹಿಂಬಾಲಕರ 'ಪುನರ್ವಸತಿ'ಯ ಪ್ರಶ್ನೆ. ಅವರ ಸಮಸ್ಯೆಯನ್ನು ಚೀನಾ ಕ್ರಾಂತಿಯಾದಾಗ ತೈವಾನಿಗೆ ಓಡಿ ಹೋದ ಚಿಯಾಂಗ್–ಕೈ–ಶೇಕ್ ಮತ್ತು ಅವನ ಹಿಂಬಾಲಕರ ಸಮಸ್ಯೆಯ ಜತೆ ಹೋಲಿಸಬಹುದು. ಅಥವಾ ಕ್ಯೂಬಾ ಕ್ರಾಂತಿಯಾದಾಗ ಅಮೆರಿಕಕ್ಕೆ ಓಡಿ ಹೋದ ಸರ್ವಾಧಿಕಾರಿ ಬಾಟಿಸ್ಟಾ ಮತ್ತು ಅವನ ಹಿಂಬಾಲಕರ ಜತೆಗೆ ಹೋಲಿಸಬಹುದು. ಪ್ಯಾಲೆಸ್ತೀನ್ ಪ್ರಶ್ನೆ ಜತೆ ಖಂಡಿತ ಅಲ್ಲ. ಅಮೆರಿಕ ಮತ್ತು ಅದರ ಬಾಲಬಡುಕ ದೇಶಗಳು ಚೀನಾ ಮತ್ತು ಕ್ಯೂಬಾದ ಕ್ರಾಂತಿ ನಂತರದ ಸರಕಾರಗಳಿಗೆ ಮಾನ್ಯತೆ ನೀಡಿರಲಿಲ್ಲ. ಆದರೆ ಚಿಯಾಂಗ್–ಕೈ–ಶೇಕ್ ರ ತೈವಾನ್ 'ನಿಜವಾದ ಚೀನಾ' ಎಂದು ಮಾನ್ಯತೆ ನೀಡಿದ್ದವು. ಆದರೆ ಹೆಚ್ಚು ಕಮ್ಮಿ ಜಗತ್ತಿನ ಎಲ್ಲಾ ದೇಶಗಳೂ ಚೀನಾ ಮತ್ತು ಕ್ಯೂಬಾದ ಕ್ರಾಂತಿಕಾರಿ ಸರಕಾರಗಳಿಗೆ ಮಾನ್ಯತೆ ನೀಡಿದ್ದವು, ತೈವಾನಿಗೆ ಅಲ್ಲ. ಅದೇ ರೀತಿ ಅರಾಫತ್ ಅವರ ನಾಯಕತ್ವದ ಪ್ಯಾಲೆಸ್ತೀನಿ ದೇಶವನ್ನು ಮಾನ್ಯ ಮಾಡಿದ್ದವು. ಟಿಬೆಟನ್ನು ಮಾನ್ಯ ಮಾಡಿರಲಿಲ್ಲ. ಇವುಗಳಲ್ಲಿ ಹೆಚ್ಚಿನವು ಕಮ್ಯುನಿಸ್ಟ್, ಎಡಪಂಥೀಯವಲ್ಲದ ದೇಶಗಳೇ ಆಗಿದ್ದವು ಎಂಬುದನ್ನು ಗುಹಾ ಗಮನಿಸಬೇಕು. ಆದ್ದರಿಂದ ಗುಹಾ ಅವರ 'ದ್ವಂದ್ವ'ದ ಆಪಾದನೆ ನಿಜವಾದರೆ ಜಗತ್ತಿನ ಬಹುಪಾಲು ದೇಶಗಳ ರಾಜಕೀಯ ನಾಯಕತ್ವ ಮತ್ತು ಸಿದ್ಧಾಂತಗಳ ಮೇಲೂ ಅದು ಲಗಾವಾಗುತ್ತದೆ. ಮಾರ್ಕ್ಸ್‌ವಾದಿಗಳ ಮೇಲೆ ಮಾತ್ರವಲ್ಲ!

ಟಿಬೆಟ್ ಮತ್ತು ಪ್ಯಾಲೆಸ್ತೀನ್ ಹೋಲಿಸುವ ಗುಹಾ ಅವರ ಕಸರತ್ತು ಅವರದ್ದು 'ಒರಿಜಿನಲ್' ಸಹ ಅಲ್ಲ. 2008 ಬೀಜಿಂಗ್ ಒಲಿಂಪಿಕ್ಸ್ ಬಹಿಷ್ಕಾರ ಮಾಡುವ ಬಗ್ಗೆ ಚೀನಾ ವಿರುದ್ಧ ಅಮೆರಿಕ–ಯುರೋಪಿನ ಬಲಪಂಥೀಯರ ಅಪಪ್ರಚಾರದಲ್ಲೂ ಆ ಮೇಲೂ ಇದೇ ವಾದಗಳನ್ನು ಮಂಡಿಸಲಾಗಿದೆ. 2001ರಲ್ಲಿ ಟಿಬೆಟ್ ಯುವ ಗುಂಪೊಂದು ಇಸ್ರೇಲಿನ ಮತ್ತು ಬ್ರಿಟನಿನ ಝಿಯೋನಿಸ್ಟ್ ಯುವ ಚಳುವಳಿಯ ಮಾದರಿಯ ಸಂಘಟನೆ ಹುಟ್ಟು ಹಾಕಿತ್ತು. ಅವರ ತರಬೇತಿಗೆ ಇಸ್ರೇಲಿನ ಮತ್ತು ಬ್ರಿಟನಿನ ಯುವ ಝಿಯೋನಿಸ್ಟ್ ನಾಯಕರು ಧರಂಸಾಲಾ ಕ್ಕೆ ಬಂದಿದ್ದರು. ದಲೈ ಲಾಮಾ ಅವರ ಆಶೀರ್ವಾದ ಈ ಚಳುವಳಿಗೆ ಇತ್ತು. ಹೀಗೆ ಝಿಯೊನಿಸ್ಟ್–ದಲೈ ಲಾಮಾ ಸಹಕಾರ ಸಹ ಹೊಸದಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ಪ್ಯಾಲೆಸ್ತೀನಿಯರ ದಮನದ ಬಗ್ಗೆ (ಮೊಸಳೆ) ಕಣ್ಣೀರು ಹಾಕುತ್ತಲೇ ಟಿಬೆಟ್ ಜತೆ ಅಸಂಬದ್ಧ ಹೋಲಿಕೆ ಮಾಡುತ್ತಾ ಮಧ್ಯೆ ಮಾರ್ಕ್ಸ್‌ವಾದಿಗಳನ್ನು ಎಳೆದು ತಂದು ಕೊನೆಗೂ ಗುಹಾ ಅವರು ಸಾಧಿಸುವುದಾದರೂ ಏನು? ಪ್ಯಾಲೆಸ್ತೀನಿಯರ ಮೇಲೆ ಅಮೆರಿಕ–ಇಸ್ರೇಲ್ ದುಷ್ಟಕೂಟದ ಯುದ್ಧ–ಅಪರಾಧಗಳಿಗೆ 'ವೈಟ್ ವಾಶ್' ಮಾಡುವುದು, ಹಾಗೂ ಚೀನಾ ಮತ್ತು ಮಾರ್ಕ್ಸ್‌ವಾದದ ನೀತಿಗಳ ವಿರುದ್ಧ ದ್ವೇಷದ ಅಪಪ್ರಚಾರ ಮಾಡುವುದು. ಆ ಮೂಲಕ ಸಾಮ್ರಾಜ್ಯಶಾಹಿಯ ಈ ಡಬ್ಬಲ್ ಗೇಮಿನ ಅನಧಿಕೃತ ವಕ್ತಾರನಾಗುವುದು, ಮುಸುಕಿನ ಪ್ರಚಾರಕನಾಗುವುದು. ●

JANASHAKTHI KANNADA VARA PATRIKE SEPT 04, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ತೋರಣಗಲ್ಲಿನಲ್ಲಿ ಡಾಂಬಾರು ಕಾರ್ಖಾನೆ ಸ್ಥಾಪನೆ ಬೇಡ !

ಆರ್.ಎಸ್. ಬಸವರಾಜ

ತೋರಣಗಲ್ಲಲ್ಲಿ ಡಾಂಬಾರು ಕಾರ್ಖಾನೆ ಸ್ಥಾಪನೆ ವಿರೋಧಿಸಿ ಬಳ್ಳಾರಿ ಜಿಲ್ಲೆ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಆಗಸ್ಟ್ 24ರಂದು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ. ಡಾಂಬಾರು ಕಾರ್ಖಾನೆಯ ಪರವಾನಿಗೆ ರದ್ದುಪಡಿಸಬೇಕು, ವಾರದೊಳಗೆ ರದ್ದು ಮಾಡದಿದ್ದಲ್ಲಿ ಜಿಲ್ಲೆಯಾದ್ಯಂತ ಮುತ್ತಿಗೆ ಹಾಕುತ್ತೇವೆಂದು ಎಚ್ಚರಿಸಲಾಗಿದೆ.

ಮಹಾರಾಷ್ಟ್ರದಲ್ಲಿ ಸ್ಥಾಪಿಸಬೇಕಿದ್ದ ಕಾರ್ಖಾನೆಯು ಅಲ್ಲಿನ ಜನತೆಯ ಪ್ರತಿರೋಧದಿಂದಾಗಿ ನಿಲ್ಲಿಸಲಾಗಿತ್ತು. ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಲ್ತಾನಾಪುರ ಗ್ರಾಮದಲ್ಲಿ ಸ್ಥಾಪನೆ ಮಾಡಲು ಪರವಾನಿಗೆ ನೀಡಲಾಗಿದೆ. ಜೀವ ಸಂಕುಲ ನಾಶಕ ಎಪ್ಸಿಲಿನ್ ಕಾರ್ಬೈಡ್ ಪ್ರೈವೇಟ್ ಲಿಮಿಟೆಡ್ (ಇಸಿಪಿಎಲ್) ಮತ್ತು ಟಿಪಿಎಕೋಲ್ ಟಾರ್ ಡಿಸ್ಟಿಲೇಶನ್ ಪ್ಲಾಂಟ್ ಸ್ಥಾಪನೆಗೆ ನೀಡಿರುವ ಪರವಾನಿಗೆಗಳು ಕೇಂದ್ರ-ರಾಜ್ಯ ಸರ್ಕಾರಗಳು ರೂಪಿಸಿರುವ ನಿಯಮಗಳ ಉಲ್ಲಂಘನೆಯಾಗಿವೆ. ಅವುಗಳನ್ನು ರದ್ದುಪಡಿಸಲು ಸರ್ಕಾರವನ್ನು ಒತ್ತಾಯಿಸಲಾಗಿದೆ. ಜಲ, ಗಾಳಿ ಮಾಲಿನ್ಯಗೊಳಿಸಿ ಜನ, ಪ್ರಾಣಿ, ಪಕ್ಷಿ ಹಾಗೂ ಮರ-ಗಿಡಗಳನ್ನು ಒಳಗೊಂಡ ಜೀವ ಸಂಕುಲಗಳಿಗೆ ಅಪಾಯವಾಗುವ ರಾಸಾಯನಿಕಗಳನ್ನು ಬಳಸಿ ಉತ್ಪಾದಿಸುವ ಕೋಲ್‌ಟಾರ್ ಕೈಗಾರಿಕೆ ಸ್ಥಾಪಿಸಲು ಅದರ ವ್ಯಾಪ್ತಿಯ ಜನರ ಅಭಿಪ್ರಾಯ ಪಡೆಯಬೇಕು. ಜನತೆಯಲ್ಲಿ ಆತಂಕಗಳು ನಿವಾರಣೆಯಾಗುವವರೆಗೂ ಕಾರ್ಖಾನೆ ನಿರ್ಮಾಣ ಕಾರ್ಯ ಸ್ಥಗಿತಗೊಳಿಸಬೇಕು, ಎಂದು ಒತ್ತಾಯಿಸಿ ಕಳೆದ ತಿಂಗಳಿನಿಂದ ಸಿಪಿಐ(ಎಂ) ತೋರಣಗಲ್ಲು ತಾಲ್ಲೂಕು ಸಮಿತಿ ವತಿಯಿಂದ ಹೋರಾಟ ನಡೆಸುತ್ತಾ ಬಂದಿದೆ.



ಜಿಂದಾಲ್ ಸಂಸ್ಥೆ ಇ.ಸಿ.ಪಿ.ಎಲ್. ಡಾಂಬರ್ ಕಾರ್ಖಾನೆ ಸ್ಥಾಪಿಸುವುದನ್ನು ವಿರೋ ಧ ಮಾಡಿ ಗ್ರಾಮ ಪಂಚಾಯಿತಿ ಸರ್ವ ಸದಸ್ಯರು ನಿರ್ಣಯಿಸಿ ಅನುಮತಿ ನೀಡುವುದಿಲ್ಲ ಎಂದು ತಿಳಿಸಿದ್ದಾರೆ. ಆದರೆ ಕೆಲ ಗ್ರಾಮ ಪಂಚಾಯಿತಿ ಸದಸ್ಯರನ್ನು ಹಾಗೂ ಕೆಲವು ಗುತ್ತಿಗೆದಾರರನ್ನು ಮತ್ತು ಕಾರ್ಮಿಕರನ್ನು ಜಿಂದಾಲ್ ಸಂಸ್ಥೆ ಒಪ್ಪಂದಕ್ಕೆ ಸಹಿ ಮಾಡಿಸಿಕೊಳ್ಳುತ್ತಿದ್ದಾರೆ. ಭೋಜನಾ ಕೂಟಕ್ಕೆ ಕರೆದು ಮಾತುಕತೆಗೆ ಮುಂದಾಗಿದ್ದಾರೆ. ಇದರ ವಿರುದ್ಧ ಮುಂದಿನ ದಿನಗಳಲ್ಲಿ ಸಂಘಟನೆಗಳು ಹಾಗೂ ಸಾರ್ವಜನಿಕರು ಕಾನೂನು ಹೋರಾಟಕ್ಕೆ ಮುಂದಾಗಬೇಕು.

ಹೋರಾಟದಲ್ಲಿ ನೇತೃತ್ವ ವಹಿಸಿದ್ದ ಸಿಪಿಐ(ಎಂ) ಸಂಡೂರು ತಾಲ್ಲೂಕು ಕಾರ್ಯದರ್ಶಿ ಹಾಗೂ ಜಿಂದಾಲ್ ಗುತ್ತಿಗೆ ನೌಕರ ಎ.ಸ್ವಾಮಿರವರನ್ನು ಆಗಸ್ಟ್ 23ರಂದು ಸಂಜೆ 6 ಘಂಟೆಗೆ ಅಪಹರಿಸಿ ಅಜ್ಞಾತ ಪ್ರದೇಶಕ್ಕೆ ಕರೆದೊಯ್ದು ಜೆ.ಎಸ್.ಡಬ್ಲ್ಯೂ ಆಡಳಿತ ಮಂಡಳಿಯು ಕೂಡಿಸಿ 'ನೀನು ಕಳ್ಳ ಎಂದು



ಮೊಕದ್ದಮೆ ಹೂಡಲಾಗುವುದು. ನೀನು ಯಾವುದೇ ಸಂಘಗಳಲ್ಲಿ ಜಿಂದಾಲ್ ಕೊಲ್ಟಾರ್ ಕಾರ್ಖಾನೆ ವಿರುದ್ಧ ಹೋರಾಟದಲ್ಲಿ ಭಾಗವಹಿಸಬಾರದು' ಎಂದು ಬೆದರಿಕೆ ಹಾಕಿದ್ದಾರೆ. ಮಾತ್ರವಲ್ಲ, ಕೊಲೆ ಮಾಡುವುದಾಗಿಯೂ ಹೆದರಿಸಿದ್ದಾರೆ. ಸಂಘಟನೆ ವತಿಯಿಂದ ತೋರಣಗಲ್ಲು ಪೊಲೀಸ್ ಠಾಣೆ ಮುಂಭಾಗ ಪ್ರತಿಭಟನೆ ಮಾಡಿ ಜೆ.ಎಸ್.ಡಬ್ಲ್ಯೂ ಆಡಳಿತ ಮಂಡಳಿ ಮೇಲೆ ದೂರು ದಾಖಲಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು. ಅಪಹರಣ ಖಂಡಿಸಿ, ಜಿಲ್ಲಾದ್ಯಂತ ಹೋರಾಟ ನಡೆಸುವ ತೀರ್ಮಾನ ಕೈಗೊಂಡ ನಂತರ ರಾತ್ರಿ 9.30ಕ್ಕೆ ಬಿಡುಗಡೆ ಮಾಡಿದ್ದಾರೆ.

ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಆಗಸ್ಟ್ 24ರಂದು ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಸಂಡೂರು, ತೋರಣಗಲ್, ಹಗರಿಬೊಮ್ಮನಹಳ್ಳಿಯಲ್ಲಿ ಪ್ರತಿಭಟನಾ ಸಭೆಗಳನ್ನು ನಡೆಸಿ ಜಿಂದಾಲ್ ಕಂಪನಿಯ ಗೂಂಡಾಗಿರಿಯನ್ನು ಖಂಡಿಸಲಾಯಿತು.


ಜಿಲ್ಲೆಯಲ್ಲಿ ಕೈಗಾರಿಕೆಗಳು ಬೆಳೆದಂತೆಲ್ಲಾ ಸಾರ್ವಜನಿಕರ ವಲಯದ ಜಲಾಶಯಗಳು, ಕಾಲುವೆಗಳು, ಜಮೀನುಗಳು, ಪರಿಸರದ ಮೇಲೆ, ವಿದ್ಯುತ್ ಸೇರಿದಂತೆ ಹಲವಾರು ವಲಯಗಳ ಮೇಲೆ ಕಾನೂನು ಬಾಹಿರ ದಾಳಿಗಳು ನಡೆಯುತ್ತಿವೆ. ಕಾರ್ಮಿಕರ ಎಲ್ಲಾ ಹಕ್ಕುಗಳ ಮೇಲೆ ನಿರಂತರವಾಗಿ ದಾಳಿಯನ್ನು ನಡೆಸುತ್ತಿರುವ ಕಾರ್ಖಾನೆಗಳ ಮತ್ತು ಸರ್ಕಾರದ ನೀತಿಯನ್ನು ಖಂಡಿಸಿ ಹೋರಾಟವನ್ನು ಮಾಡುತ್ತಿರುವ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರನ್ನು ಗುರುತಿಸಿ ತೊಂದರೆ ನೀಡುತ್ತಿದ್ದಾರೆ. ಆದ ಕಾರಣ ಬಳ್ಳಾರಿ ಜಿಲ್ಲೆಯಲ್ಲಿರುವ ಕಾರ್ಯಕರ್ತರಿಗೆ ವಿಶೇಷ ಭದ್ರತೆಯನ್ನು ಒದಗಿಸಲು ಕೋರಲಾಗಿದೆ. ಅಪಹರಣಕ್ಕೆ ಕಾರಣರಾದ ಜೆ.ಎಸ್. ಡಬ್ಲ್ಯೂ. ಅಧಿಕಾರಿಗಳಾದ ಮಂಜುನಾಥ್‌ಪ್ರಭು, ಶಶಿಕುಮಾರ್, ವೇಣುಗೋಪಾಲ್ ಮತ್ತಿತ್ತರನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಲಾಗಿದೆ.

ಮುಖಂಡರಾದ ಆರ್.ಎಸ್.ಬಸವರಾಜು, ಯು.ಬಸವರಾಜು, ಗಾಳಿ ಬಸವರಾಜ, ಎಂ.ಅಕ್ಕಮಹಾದೇವಿ, ಸೋಮಪ್ಪ, ಕೆ.ವನಜಾ, ಕೆ.ಕೋಮಲಾದೇವಿ, ಐ.ಶಶಿರೇಖಾ, ಚಂದ್ರ, ಚನ್ನಬಸಪ್ಪ, ಬಿ.ಅಡಿವಪ್ಪ, ಈರಮ್ಮ, ಹೆಚ್.ತಿಮ್ಮಯ್ಯ, ಬಿ.ಈರಣ್ಣ, ಬಿ.ಬಸಪ್ಪ, ನಾರಾಣಪ್ಪ, ಬಿ.ಸುರೇಶ ಮುಂತಾದವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಆಗಸ್ಟ್ 22ರಂದು ಕುಡುತಿನಿಯಲ್ಲಿ ಕಾರ್ಖಾನೆ ಸ್ಥಾಪನೆ ವಿರೋಧಿಸಿ ಬೈಕ್ ರ್‍ಯಾಲಿ ಸಹ ನಡೆಸಲಾಗಿದೆ.

ತುಮಕೂರಿನಲ್ಲಿ ಮತ್ತೊಂದು ಸುಳ್ಳು ದೇಶದ್ರೋಹದ ಪ್ರಕರಣ

ಕೆ.ಇ.ಸಿದ್ದಯ್ಯ

ದೇಶ ವಿರೋಧಿ ಘೋಷಣೆ ಕೂಗಿದರೆಂಬ ಆರೋಪ ಸಂಘಿಗಳ ಪಾಲಿಗೆ ಮೃಷ್ಟಾನ್ನ ಭೋಜನ ದೊರೆತಂತೆ ಆಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಭಾಗಿಯಾಗದ ಸಂಘಿಗಳು ಇಂದು ತ್ರಿವರ್ಣಧ್ವಜ ಹಿಡಿದು ನಾವೇ ನಿಜವಾದ ದೇಶಭಕ್ತರು ಎಂಬಂತೆ ತೋರುಂಬ ಭಕ್ತಿ ಮೆರೆಯುತ್ತಿರುವುದು ಕಾಲನ ದುರಂತವೇ ಸರಿ. ಹುಸಿ ದೇಶಭಕ್ತರಿಂದ ದೇಶಪ್ರೇಮವನ್ನು ಕಲಿಯಬೇಕಾಗಿದೆಯಲ್ಲ ಎಂಬುದು ನೋವಿನ ಸಂಗತಿ. ಇಂತಹ ಭಾವನಾತ್ಮಕ ಸಂಗತಿಗಳನ್ನು ರಾಜಕೀಯ ದುರ್ಲಾಭಕ್ಕೆ ಬಳಸಿಕೊಳ್ಳುತ್ತಿರುವ ಸಂಘಪರಿವಾರ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ನಡೆಸದೆ ಮೋದಿಯ ವಿದೇಶ ಸುತ್ತುವ ಕೆಲಸಕ್ಕೆ ಮೌನ ಸಮ್ಮತಿ ಸೂಚಿಸಿದೆ. ಸ್ವದೇಶಿ ಮಂತ್ರ ವಿದೇಶಿ ತಂತ್ರ ಇಂದು ಮೋದಿಯ ಕಾರ್ಯತಂತ್ರವಾಗಿದೆ. ಇದರ ವಿರುದ್ಧ ಸಂಘಿಗಳಿಂದ ಒಂದು ಸೊಲ್ಲೂ ಬರುತ್ತಿಲ್ಲ.



ನಡೆದದ್ದೇನು?

2016, ಆಗಸ್ಟ್ 14ರಂದು ರಾತ್ರಿ ಸಿದ್ದಾರ್ಥ ಇಂಜಿನಿಯರಿಂಗ್ ಕಾಲೇಜಿನ ಹಾಸ್ಟೆಲ್‌ನಲ್ಲಿ ಓರ್ವ ವಿದ್ಯಾರ್ಥಿ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಾಗಿದೆ. ಸೆಕ್ಯೂರಿಟಿ ಗಾರ್ಡ್ ಮತ್ತು ಭಜರಂಗದಳದ ಪಿತೂರಿಯಿಂದ ಈ ಪ್ರಕರಣ ದಾಖಲಾಗಿದೆ ಎಂಬುದು ಗಮನಾರ್ಹ ಸಂಗತಿ. ಆಗಸ್ಟ್ 14ರಂದು ಮಂಜೀತ್ ಹುಟ್ಟುಹಬ್ಬ ಆದ ಪ್ರಯುಕ್ತ ತನ್ನ ಸ್ನೇಹಿತರೊಂದಿಗೆ ಅಂದು ರಾತ್ರಿ ಹಾಸ್ಟೆಲ್ ಕಟ್ಟಡದ ಮೇಲೆ ಹಳೆಯ ಹಾಸಿಗೆಗೆ ಬೆಂಕಿ ಹಾಕಿ ಪಾರ್ಟಿ ಮಾಡುತ್ತಿದ್ದರು. ಹಾಸ್ಟೆಲ್ ಕಟ್ಟಡ ಮೇಲೆ ಬೆಂಕಿ ಹೊತ್ತಿಕೊಂಡಿರುವುದನ್ನು ಕಂಡ ಇಬ್ಬರು ಸೆಕ್ಯೂರಿಟಿ ಗಾರ್ಡ್‌ಗಳು ಅಲ್ಲಿಗೆ ಬರುತ್ತಾರೆ. ಬಂದವರೇ ಹುಟ್ಟುಹಬ್ಬ ಆಚರಿಸುತ್ತಿದ್ದ ವಿದ್ಯಾರ್ಥಿಗಳನ್ನು ಗದರಿಸಿ ಸುಮ್ಮನಿರಿಸಲು ಪ್ರಯತ್ನಿಸುತ್ತಾರೆ. ಆಗ ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ವಿದ್ಯಾರ್ಥಿಗಳ ನಡುವೆ ಮಾತಿನ ಚಕಮಕಿ ನಡೆಯುತ್ತದೆ.

ಸೆಕ್ಯೂರಿಟಿ ಗಾರ್ಡ್‌ಗಳು ವಾರ್ಡನ್ ಮುರುಳೀಧರ್ ಮತ್ತು ಭಗತ್‌ಕ್ರಾಂತಿ ಸೇನೆ ಪ್ರಮುಖರಿಗೆ ಮಾಹಿತಿ ತಲುಪಿಸುತ್ತಾರೆ. ವಾರ್ಡನ್ ಮುರುಳೀಧರ್ ಹಾಸ್ಟೆಲ್‌ಗೆ ಬಂದ ಸ್ವಲ್ಪ ಹೊತ್ತಿನಲ್ಲೇ ಭಗತ್ ಕ್ರಾಂತಿ ಸೇನೆಯ ಕಾರ್ಯಕರ್ತರು ಆಗಮಿಸಿ ಮಂಜೀತ್ ಮತ್ತು ಪ್ರವೀಣ್‌ಕುಮಾರ್ ಸೇರಿದಂತೆ ಇತರೆ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸುತ್ತಾರೆ. ಇದನ್ನೇ ನೆಪಮಾಡಿಕೊಂಡ ಸೆಕ್ಯೂರಿಟಿ ಗಾರ್ಡ್ ವೆಂಕಟಾಚಲ, ಪ್ರವೀಣ್‌ಕುಮಾರ್ ದೇಶವಿರೋಧಿ ಘೋಷಣೆ ಕೂಗಿದ ಎಂದು ಸುಳ್ಳು ಸುಳ್ಳೇ ಆರೋಪ ಹೊರಿಸುತ್ತಾನೆ. ಸೆಕ್ಯೂರಿಟಿ ವೆಂಕಟಾಚಲನ ಮಾತಿನಿಂದ ಮತ್ತಷ್ಟು ಉತ್ತೇಜಿತರಾದ ಭಗತ್ ಕ್ರಾಂತಿ ಸೇನೆಯ ಕಾರ್ಯಕರ್ತರು ವಿದ್ಯಾರ್ಥಿಗಳಿಗೆ ಮನಬಂದಂತೆ ಥಳಿಸುತ್ತಾರೆ. ಇದು ಯಾರ ಗಮನಕ್ಕೂ ಬರುವುದಿಲ್ಲ. ಆದರೆ ಆರ್‌ಎಸ್‌ಎಸ್ ಮೂಲದ ಸಂಘಟನೆ ಭಗತ್ ಕ್ರಾಂತಿ ಸೇನೆಯ ಕಾರ್ಯಕರ್ತರು ಹೆಣೆದ ಜಾಲಕ್ಕೆ ಬಿಹಾರ ಮೂಲದ ಪ್ರವೀಣ್‌ಕುಮಾರ್ ಬೀಳುತ್ತಾನೆ. ಅಲ್ಲಿಗೆ ಸಂಘಿಗಳ ಆಸೆ ಈಡೇರಿಂದಂತಾಗುತ್ತದೆ.

ಸೆಕ್ಯುರಿಟಿ ಗಾರ್ಡ್ ಸೇಡು

ಪ್ರವೀಣ್‌ಕುಮಾರ್ ಮೂಲ ಬಿಹಾರ. ಮಂಜೀತ್ ಆಪ್ತ ಸ್ನೇಹಿತರಲ್ಲೊಬ್ಬ ಪ್ರವೀಣ್‌ಕುಮಾರ್. ಈತ ಸಿವಿಲ್ ಇಂಜಿನಿಯರಿಂಗ್ ಪದವಿ ವ್ಯಾಸಂಗ ಮಾಡುತ್ತಿದ್ದು ಬಿಹಾರ ಮೂಲದವನು. ಈತನ ತಂದೆ ಸೇನೆಯಲ್ಲಿದ್ದಾರೆ. ಆದರೂ ಪ್ರವೀಣ್‌ಕುಮಾರ್ ಸಿಂಗ್ ಮೇಲೆ ದೇಶದ್ರೋಹದ ಆರೋಪ ಹೊರಿಸಲಾಗಿದೆ.

ಸೆಕ್ಯೂರಿಟಿ ವೆಂಕಟಾಚಲ ಭಗತ್ ಕ್ರಾಂತಿ ಸೇನೆ ಕಾರ್ಯಕರ್ತ. ಸಿದ್ದಾರ್ಥ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೆಕ್ಯೂರಿಟಿ ಕೆಲಸ ಮಾಡುತ್ತಿರುವ ವೆಂಕಟಾಚಲ ಭಗತ್ ಕ್ರಾಂತಿ ಸೇನೆಯ ಕಾರ್ಯಕರ್ತ. ಈತ ಮತ್ತು ಪ್ರವೀಣ್‌ಕುಮಾರ್ ಸಿಂಗ್ ನಡುವೆ ಹಲವು ಬಾರಿ ಜಗಳ ನಡೆದಿತ್ತೆಂದು ಹೇಳಲಾಗುತ್ತಿದೆ. ಇದನ್ನೇ ನೆಪಮಾಡಿಕೊಂಡ ವೆಂಕಟಾಚಲ ಇದೀಗ ಪ್ರವೀಣ್‌ಕುಮಾರ್ ಸಿಂಗ್ ಮೇಲೆ ಸೇಡು ತೀರಿಸಿಕೊಂಡಿರುವುದು ಸ್ಪಷ್ಟವಾಗಿದೆ. ಸಮಗ್ರ ಮಾಹಿತಿ ಕಲೆಹಾಕಿರುವ ಪೊಲೀಸರು ದೇಶ ವಿರೋಧಿ ಘೋಷಣೆ ಕೂಗಿದ ಬಗ್ಗೆ ಸಾಕ್ಷಿ ಇಲ್ಲದೆ ಒದ್ದಾಡುತಿದ್ದಾರೆ. ತುಮಕೂರು ನಗರದಲ್ಲಿ ಸಂಘಿಗಳ ಕೀಟಲೆ ಹೆಚ್ಚಾಗಿದೆ. ಆದರೂ ಯಾರು ಪ್ರತಿರೋಧ ಒಡ್ಡುವವವರಿಲ್ಲದೆ ಆಡಿದ್ದೇ ಆಟ ಎಂಬಂತಾಗಿದೆ.

ಮೊದಲನೇ ದೇಶದ್ರೋಹ ಪ್ರಕರಣ:

ಇದಕ್ಕೂ ಮೊದಲು ಅಂದರೆ 2016ರ ಮಾರ್ಚ್ 30ರಂದು ಎಐಎಸ್‌ಎಫ್ ಮತ್ತು ಎಐವೈಎಫ್ ಕಾರ್ಯಕರ್ತರು ಜೆಎನ್‌ಯು ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಕನ್ಹಯ್ಯಕುಮಾರ್ ಮಾಡಿದ ಭಾಷಣವುಳ್ಳ ಕರಪತ್ರಗಳನ್ನು ತುಮಕೂರಿನ ಹಲವು ಕಾಲೇಜುಗಳ ಆವರಣದಲ್ಲಿ ಹಂಚುತ್ತಿದ್ದರು. ಹಾಗೆಯೇ ಸರ್ಕಾರಿ

ಪುಟ 15 ಕ್ಕೆ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**